# ಕೇರಳ ಪಾಠಾವಳಿ

# ಕನ್ನಡ

## ಭಾಗ - 1

# KERALA READER

# KANNADA

## PART - 1

**IV**

ಕೇರಳ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

ತಯಾರಿಸಿದವರು
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT) ಕೇರಳ
2015

## ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಪಂಜಾಬ ಸಿಂಧು ಗುಜರಾತ ಮರಾಠಾ
ದ್ರಾವಿಡ ಉತ್ಕಲ ವಂಗಾ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿತರಂಗಾ
ತವಶುಭ ನಾಮೇ ಜಾಗೇ
ತವಶುಭ ಆಶಿಷ ಮಾಗೇ
ಗಾಹೇ ತವ ಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯಹೇ

## ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆಪಡುತ್ತೇನೆ.

ನಾನು ನನ್ನ ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ.

ನಾನು ನನ್ನ ದೇಶ ಮತ್ತು ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ. ಅವರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

*Prepared by* :

**State Council of Educational Research and Training (SCERT)**
Poojappura, Thiruvananthapuram 695012, Kerala
*Website* : www.scertkerala.gov.in
*e-mail* : scertkerala@gmail.com
Phone : 0471 - 2341883, Fax : 0471 - 2341869
First Edition : 2015
Typesetting : SCERT
Lay out : SCERT
Cover design : SCERT
Printed at : Centre for Advanced Printing and Training, Thiruvananthapuram-695013
© Department of Education, Government of Kerala

ಪ್ರೀತಿಯ ವಿದ್ಯಾರ್ಥಿಗಳೇ,

ಭಾಷೆಯೆಂದರೆ ಮಾತೆಯ ಮಮತೆಯ ಹಾಗೆ. ನಯ ವಿನಯದಿಂದ ಕೂಡಿದ ಮಾತು ಎಲ್ಲರನ್ನು ಸೆಳೆಯುತ್ತದೆ. ನಮ್ಮ ಮಾತು ಕೃತಿಗಳು ನಮ್ಮ ವ್ಯಕ್ತಿತ್ವ ಚಿಂತನೆಗಳನ್ನು ಹೊರಗೆಡಹುತ್ತವೆ. ಕನ್ನಡ ನುಡಿಯು ನಮ್ಮೆಲ್ಲರ ಬಾಂಧವ್ಯವನ್ನು ಬೆಸೆಯುತ್ತದೆ. ಸಂಸ್ಕೃತಿಯ ಕೈಗನ್ನಡಿಯಾಗಿರುವ ನುಡಿಯ ಹಿರಿಮೆಯನ್ನು ನೀವೆಲ್ಲರೂ ಅರಿತುಕೊಳ್ಳಬೇಕಾಗಿದೆ. ಅದಕ್ಕಾಗಿ ನಿಮ್ಮ ಮನಸೂರೆಗೊಳಿಸುವಂತಹ ಕತೆ, ಕವಿತೆ, ನಾಟಕ, ಇತ್ಯಾದಿ ಸಾಹಿತ್ಯ ಪ್ರಕಾರಗಳನ್ನು ಈ ಪಠ್ಯಪುಸ್ತಕದಲ್ಲಿ ಕೊಡಲಾಗಿದೆ. ನಿಮ್ಮ ಆಶಯಗಳನ್ನೂ, ಭಾವನೆಗಳನ್ನೂ, ಅನುಭವಗಳನ್ನೂ ಹಂಚಿಕೊಳ್ಳಲು ಮತ್ತು ಪ್ರಕಟಿಸಲು ಈ ಪಾಠಪುಸ್ತಕವು ಸಹಕಾರಿಯಾಗಲಿ ಎಂದು ಆಶಿಸುತ್ತೇನೆ. ಇವುಗಳಲ್ಲಿರುವ ಉತ್ತಮ ಮೌಲ್ಯಗಳು ಚಿಂತನೆಗಳು ನಿಮ್ಮ ಬದುಕಿಗೆ ದಾರಿದೀಪವಾಗಲಿ. ಕನ್ನಡ ಕುಸುಮದ ಕಂಪನ್ನು ಪಸರಿಸಲು ನಾವೆಲ್ಲ ಒಂದಾಗಿ ಶ್ರಮಿಸೋಣ.

ಪ್ರೀತಿಪೂರ್ವಕ ಹಾರೈಕೆಗಳೊಂದಿಗೆ,

ಡಾ। ಎಸ್. ರವೀಂದ್ರನ್ ನಾಯರ್
ನಿರ್ದೇಶಕರು
ಎಸ್.ಸಿ.ಇ.ಆರ್.ಟಿ., ಕೇರಳ

## TEXTBOOK DEVELOPMENT TEAM

# KANNADA

## STANDARD IV - Part 1

**Participants**

Kamalaksha Nayak K., LPSA, GWLPS, Kajampady.
Mamatha K., LPSA, AUPS, Pallathadka.
Narasimha K., Rtd. HM, GLPS Pathoor
Saraswathi G., HSA, GHSS Paivalike
Shriharsha M.P., P.D. Teacher, GWLPS Kasaragod.
Shyamaprasada K., Asst.Teacher, MAUPS Kallakatta.
Vanishri C.H., LPSA, SSALPS, Marikkana
Vishwanatha Rai, Rtd. HM, GSBS Kumbla.

**Experts**

Dr. Srikrishna Bhat P., Professor (Rtd), Govt. College, Kasaragod.
Dr. Rathnakara Mallamoole, Govt. College Kasaragod
Shridhara N., Asst. Professor, Govt. College, Kasaragod
Shivashankar, Asst. Professor, Govt.College, Manjeshwar.

**Artists**

Ravi Pilicode
Shyam Sasi

**Academic Co-ordinator**

Faisal Mavulladathil, Research Officer SCERT, Thiruvananthapuram.

---

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT) ಕೇರಳ
ವಿದ್ಯಾಭವನ, ಪೂಜಪ್ಪುರ, ತಿರುವನಂತಪುರಂ 695012

# ಅನುಕ್ರಮಣಿಕೆ


| | | |
|---|---|---|
| 1. | **ನೆಲದ ಋಣ** | **7** |
| | 1. ಗಾಳಿ ಮಳೆ (ಪದ್ಯ) | |
| | 2. ಪುನರುದ್ಧಾರ (ಕಥೆ) | |
| | 3. ಗದ್ದೆಯ ಗಮ್ಮತ್ತು (ಲೇಖನ) | |
| 2. | **ನೆನೆಯುತ ನಲಿ** | **29** |
| | 1. ದೀಪಾವಳಿ (ಕಥೆ) | |
| | 2. ನೃತ್ಯಾಂಗನೆ ಕಲ್ಯಾಣಿಕುಟ್ಟಿ ಅಮ್ಮ (ಜೀವನ ಚರಿತ್ರೆ) | |
| | 3. ಆಷಾಢ ಮಾಸ ಬಂದೀತವ್ವ (ಜನಪದ ಪದ್ಯ) | |
| 3. | **ನಗು ಮಗು** | **47** |
| | 1. ಮುದ್ದು ಕಂದ (ಪದ್ಯ) | |
| | 2. ಬಾಲ ಕಾರ್ಮಿಕರು (ಪ್ರಬಂಧ) | |
| | 3. ಗಿಡವಾಗಿ ಬಗ್ಗದ್ದು... (ಕಥೆ) | |
| | 4. ಕ್ಷಮಾಪಣೆ (ನಾಟಕ) | |
| 4. | **ಸತ್ಯವೇ ನಿತ್ಯ** | **69** |
| | 1. ಕಸ ಗುಡಿಸಿದ ಗಾಂಧೀಜಿ (ಅನುಭವ ಕಥನ) | |
| | 2. ಸತ್ಯನಿಷ್ಠ ಬಾಲಕ (ಕಥೆ) | |
| | 3. ಪುಣ್ಯಕೋಟಿ (ಪದ್ಯ) | |

# ಭಾರತದ ಸಂವಿಧಾನ

## ಭಾಗ 4(ಕ)

## ಮೂಲಭೂತ ಕರ್ತವ್ಯಗಳು

**51ಕ. ಮೂಲಭೂತ ಕರ್ತವ್ಯಗಳು – ಈ ಕೆಳಗಿನವುಗಳು ಭಾರತದ ಪ್ರತಿಯೊಬ್ಬ ಪೌರನ ಕರ್ತವ್ಯಗಳಾಗಿವೆ.**

(ಕ) ಸಂವಿಧಾನವನ್ನು ಅನುಸರಿಸುವುದು, ಅದರ ಆದರ್ಶಗಳನ್ನು ಮತ್ತು ಸಂಸ್ಥೆಗಳನ್ನು, ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು.

(ಖ) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾದ ಉದಾತ್ತ ಆದರ್ಶಗಳನ್ನು ಪೋಷಿಸುವುದು ಮತ್ತು ಅನುಸರಿಸುವುದು.

(ಗ) ಭಾರತದ ಸಾರ್ವಭೌಮತೆಯನ್ನು, ಏಕತೆಯನ್ನು ಮತ್ತು ಅಖಂಡತೆಯನ್ನು ಎತ್ತಿ ಹಿಡಿಯುವುದು ಹಾಗೂ ಸಂರಕ್ಷಿಸುವುದು.

(ಘ) ದೇಶವನ್ನು ರಕ್ಷಿಸಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆ ಬಂದಾಗ, ಹಾಗೆ ಮಾಡುವುದು.

(ಙ) ಧಾರ್ಮಿಕ, ಭಾಷಿಕ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭಿನ್ನತೆಗಳಿಂದ ಅತೀತವಾಗಿ ಭಾರತದ ಎಲ್ಲ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಸಮಾನ ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು, ಸ್ತ್ರೀಯರ ಗೌರವಕ್ಕೆ ಕುಂದುಂಟುಮಾಡುವ ಆಚರಣೆಯನ್ನು ಬಿಟ್ಟು ಬಿಡುವುದು.

(ಚ) ನಮ್ಮ ಸಮ್ಮಿಶ್ರ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು.

(ಛ) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಅಭಿವೃದ್ಧಿ ಮಾಡುವುದು, ಪ್ರಾಣಿಗಳಿಗೆ ಅನುಕಂಪ ತೋರಿಸುವುದು.

(ಜ) ವೈಜ್ಞಾನಿಕ ಮನೋಭಾವ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣಾ ಪ್ರವೃತ್ತಿಯನ್ನು ಬೆಳೆಸುವುದು.

(ಝ) ಸಾರ್ವಜನಿಕ ಸೊತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು.

(ಞ) ರಾಷ್ಟ್ರವು ನಿರಂತರವಾಗಿ ಸಾಧನೆ ಮತ್ತು ಸಿದ್ಧಿಯ ಔನ್ನತ್ಯಕ್ಕೆ ತಲುಪಲು ವೈಯಕ್ತಿಕ ಹಾಗೂ ಸಾಮಾಜಿಕ ಚಟುವಟಿಕೆಯ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಸಮರ್ಪಕವಾಗಿ ಶ್ರಮಿಸುವುದು.

(ಟ) ಆರು ಮತ್ತು ಹದಿನಾಲ್ಕು ವರ್ಷಗಳ ನಡುವಣ ತನ್ನ ಮಕ್ಕಳಿಗೋ, ತನ್ನ ರಕ್ಷಣೆಯಲ್ಲಿರುವ ಬಾಲಕರಿಗೋ, ಆಯಾ ಸಂದರ್ಭಾನುಸಾರ ಹೆತ್ತವರೋ ರಕ್ಷಕರೋ ವಿದ್ಯಾಭ್ಯಾಸಕ್ಕಿರುವ ಅವಕಾಶವನ್ನು ಏರ್ಪಡಿಸುವುದು.

# 1. ನೆಲದ ಋಣ



ಪ್ರಕೃತಿ ನಮ್ಮ ಸಂಪತ್ತು. ಕೃಷಿ ನಮ್ಮ ಬದುಕು. ನಮ್ಮ ಪರಿಶ್ರಮದ ದುಡಿಮೆ ಪ್ರಾಕೃತಿಕ ವಿಕೋಪಗಳಿಂದ ಕೆಲವೊಮ್ಮೆ ನಾಶವಾಗಬಹುದು. ಬೇಸಾಯದ ಕೆಲಸ ಸರಿಯಾಗಿ ನಡೆದರೆ ಮಾತ್ರ ಜನರ ಹೊಟ್ಟೆ ತುಂಬುವುದು. ಮುಂದಿನ ತಲೆಮಾರು ಈ ಸತ್ಯವನ್ನು ಮನಗಾಣಬೇಕು.

# ಗಾಳಿ ಮಳೆ

ಗುಡುಗು ಬಡಿಯಿತು ಮೋಡ ಮುಸುಕಿತು
ಕತ್ತಲಾಯಿತು ಸುತ್ತಲು
ಗಿಡವು ಕಿತ್ತಿತು ಮರವು ಬಾಗಿತು
ಸೋಗೆ ಜಾರಿತು ಎತ್ತಲು ॥

ಗಾಳಿ ಎಳೆಯಿತು ಕೊಡೆಯು ತಪ್ಪಿತು
ಕಡ್ಡಿ ಕೆಲವದೊ ಮುರಿಯಿತು.
ಧೂಳು ಮುಸುಕಿತು ಎಲೆಗಳುದುರಿತು
ದನಗಳೋಟವು ಕಂಡಿತು ॥

ಸಿಡಿಲ ಬಡಿತಕೆ ಉರಿದು ಹೋಯಿತು
ಎಷ್ಟೋ ತೆಂಗಿನ ಮರಗಳು
ಕಡಿದ ತೆರದೊಳು ಮುರಿಯಿತೆಷ್ಟೋ
ಅಡಿಕೆ ತೋಟದ ಗಿಡಗಳು ॥

ಏನು ಅಬ್ಬರ! ಏನು ಕಂಪನ!
ಏನು ಗಾಳಿಯ ಶಕ್ತಿಯೋ!
ಏನು ಎಲ್ಲವ ಮುತ್ತುವಂತಿದೆ
ಯಾವುದಿವುಗಳ ಧ್ಯೇಯವೋ! ॥

ಮೇಲ ಮೇಲಕೆ ಏರಿ ಹೋದವು
ಕಪ್ಪು ಬಣ್ಣದ ಮೋಡಗಳ್
ಎಲ್ಲಿ ನಿಂತಿರಲಲ್ಲಿ ಬೀಳುವವೆಂಬ
ಸಿಡಿಲಿನ ಮಿಂಚುಗಳ್ ॥

ಭಾನುದೇವನ ಭಾವ ಮೈದುನ
ಗಾಳಿ ಸಿಡಿಲನು ಓಡಿಸೆ
ತಾಣ ಭೂತಳದೆಲ್ಲ ಕಡೆಯೊಳು
ನೀರಿನೋಕುಳಿ ಹರಿಯಿಸೆ ॥

ಕತ್ತಲೋಡಿತು ಬೆಳಕು ಹರಿಯಿತು
ಮುಗಿಲ ಮಲ್ಲಿಗೆ ಅರಳಿತು
ಮತ್ತೆ ತಂಪಿನ ಗಾಳಿ ಬೀಸಲು
ನೀರು ಧರೆಯನು ಸೇರಿತು. ॥





***ಅಬ್ದುಲ್ ರೆಹಮಾನ್***

## ಚಟುವಟಿಕೆಗಳು

### ಹಾಡುವ

- 'ಗಾಳಿ ಮಳೆ' ಪದ್ಯವನ್ನು ರಾಗವಾಗಿ ಹಾಡಿರಿ.

### ಉತ್ತರ ಬರೆಯುವ

- ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.
  1. ಗಾಳಿಯು ಉಂಟು ಮಾಡಿದ ತೊಂದರೆಗಳು ಯಾವುವು?
  2. ಸಿಡಿಲಿಗೆ ಉರಿದು ಹೋದುದು ಯಾವುದು?
  3. ಸಿಡಿಲನ್ನು ಓಡಿಸಿದ್ದು ಯಾರು?
  4. ಗಾಳಿ ಮಳೆಯ ಬಳಿಕ ಏನಾಯಿತು?

### ಪದಗಳ ಅರ್ಥ ಕಂಡುಹಿಡಿಯುವ

- ಪದ್ಯಭಾಗದಲ್ಲಿ ಬರುವ ನವೀನ ಪದಗಳನ್ನು ಹುಡುಕಿ ಬರೆಯಿರಿ. ಅವುಗಳ ಅರ್ಥಗಳನ್ನು ಕಂಡುಹಿಡಿದು ಬರೆಯಿರಿ.

### ಪ್ರಾಸಪದ ಗುರುತಿಸುವ

- ಈ ಪದ್ಯಭಾಗದಲ್ಲಿ ಬಂದಿರುವ ಪ್ರಾಸಪದಗಳನ್ನು ಗುರುತಿಸಿ ಬರೆಯಿರಿ.

  ಉದಾ : ಮುಸುಕಿತು – ಬಾಗಿತು

  ಸುತ್ತಲು – ಎತ್ತಲು

  ......................................

  ......................................

### ಪೂರ್ತಿಗೊಳಿಸುವ

- ಪದ್ಯವನ್ನು ಓದಿರಿ. ಕೆಳಗೆ ಕೊಡಲಾದ ಪದ್ಯದ ಸಾಲುಗಳಲ್ಲಿ ಬಿಟ್ಟು ಹೋದ ಪದಗಳನ್ನು ಭರ್ತಿ ಮಾಡಿರಿ.
  - ಗಿಡವು ಕಿತ್ತಿತು ಮರವು ಬಾಗಿತು ........................ ಜಾರಿತು ಎತ್ತಲು.
  - ಧೂಳು ................................ ಎಲೆಗಳುದುರಿತು
  - ಕಡಿದ ತೆರದೊಳು ಮುರಿಯಿತೆಷ್ಟೋ ........................... ತೋಟದ ಗಿಡಗಳು
  - ...................................... ಭಾವ ಮೈದುನ ಗಾಳಿ ಸಿಡಿಲನು ಓಡಿಸೆ
  - ಕತ್ತಲೋಡಿತು ಬೆಳಕು ಹರಿಯಿತು ಮುಗಿಲ ................. ಅರಳಿತು

## ಸಾರಾಂಶ ಬರೆಯುವ

- ಗಾಳಿ ಮಳೆ ಪದ್ಯವನ್ನು ಓದಿ ತಿಳಿದಿರಲ್ಲವೇ? ಪದ್ಯದ ಸಾರಾಂಶವನ್ನು ಬರೆಯಿರಿ.

## ವಿವರಣೆ ಬರೆಯುವ

- ನೀವು ಗಾಳಿ ಮಳೆ ಬರುವುದನ್ನು ಕಂಡಿರುವಿರಲ್ಲವೇ? ಗಾಳಿ ಮಳೆ ಬರುವಾಗ ಏನೇನು ಆಗುತ್ತದೆ? ವಿವರಣೆ ಬರೆಯಿರಿ.

## ಮನವಿ ಪತ್ರ ಬರೆಯುವ

- ಗಾಳಿ ಮಳೆಯಿಂದ ಉಂಟಾಗುವ ಕಷ್ಟ–ನಷ್ಟಗಳು ಯಾವುವು? ನಿಮ್ಮ ಊರಿನ ಕೃಷಿಕರೊಬ್ಬರಿಗೆ ಆದ ಕಷ್ಟನಷ್ಟವನ್ನು ತಿಳಿಸಿ, ಅದಕ್ಕೆ ಪರಿಹಾರ ಕೊಡಬೇಕೆಂದು ವಿನಂತಿಸುತ್ತಾ ಜಿಲ್ಲಾಧಿಕಾರಿಗಳಿಗೆ ಒಂದು ಮನವಿ ಪತ್ರ ಬರೆಯಿರಿ.

## ಪತ್ರಿಕಾ ವರದಿ ಬರೆಯುವ

- ನಿಮ್ಮ ಊರಿನಲ್ಲಿ ಗಾಳಿ ಮಳೆಗೆ ತುಂಬ ನಾಶ ಸಂಭವಿಸಿದೆ ಎಂದು ಭಾವಿಸಿರಿ. ಈ ವಿಚಾರವನ್ನು ಪ್ರಾದೇಶಿಕ ದಿನ ಪತ್ರಿಕೆಯಲ್ಲಿ ಪ್ರಕಟಿಸಬೇಕಾಗಿದೆ. ಅದಕ್ಕಾಗಿ ಒಂದು ಪತ್ರಿಕಾ ವರದಿಯನ್ನು ಬರೆಯಿರಿ.

## ಕೂಡಿಸಿ ಬರೆಯುವ

- ಕೆಳಗೆ ಕೊಡಲಾದ ಪದಗಳನ್ನು ಕೂಡಿಸಿ ಬರೆಯಿರಿ. ಕೊಟ್ಟಿರುವ ಪದಗಳಲ್ಲಿ ಎರಡನೆ ಪದದ ಆರಂಭದ ಅಕ್ಷರಗಳನ್ನು ಗಮನಿಸಿರಿ. ಅವುಗಳ ವಿಶೇಷತೆಯೇನು? ಕೇಳಿ ತಿಳಿಯಿರಿ.

| | | | |
|---|---|---|---|
| ಕತ್ತಲು | + | **ಆ**ಯಿತು | – |
| ಎಲೆಗಳು | + | **ಉ**ದುರಿತು | – |
| ದನಗಳ | + | **ಓ**ಟ | – |
| ಮುರಿಯಿತು | + | **ಎ**ಷ್ಟೋ | – |
| ಮುತ್ತುವ | + | **ಅ**ಂತಿದೆ | – |
| ಯಾವುದು | + | **ಇ**ವುಗಳ | – |
| ನಿಂತಿರಲು | + | **ಅ**ಲ್ಲಿ | – |
| ಬೀಳುವರು | + | **ಎ**ಂಬ | – |
| ನೀರಿನ | + | **ಓ**ಕುಳಿ | – |
| ಕತ್ತಲು | + | **ಓ**ಡಿತು | – |

## ಕಂಡುಹುಡುಕುವ

- ಕೆಳಗೆ ಕೊಡಲಾದ ಪದಗಳಲ್ಲಿ ಸರಿಯಾದ ರೂಪ ಯಾವುದು? ಕಂಡುಹಿಡಿಯಿರಿ.
  - ದ್ಯೇಯ, ಧ್ಯೇಯ, ಧ್ಯೆಯ
  - ಎಲೆಯಿತು, ಎಳೆಯಿತು, ಎಳೆಇತು
  - ಬೆಳಕು, ಬೆಲಕು, ಭೆಳಕು
  - ಅರಲಿತು, ಹರಳಿತು, ಅರಳಿತು.
  - ಭಾವ, ಬಾವ, ಬವಾ

## ಚಿತ್ರ ಬಿಡಿಸುವ

- ಗಾಳಿ ಮಳೆ ಬರುವ ದೃಶ್ಯವನ್ನು ನೆನಪಿಸಿ ಸುಂದರವಾದ ಚಿತ್ರ ರಚಿಸಿರಿ. ಚಿತ್ರಕ್ಕೆ ಸೂಕ್ತವಾದ ಹೆಸರು ಕೊಡಿರಿ.

## ಕವಿತೆ ಮುಂದುವರಿಸಿ ಬರೆಯುವ

- ಕೆಳಗೆ ಕೊಟ್ಟಿರುವ ಸಾಲುಗಳನ್ನು ಮುಂದುವರಿಸಿ ಕವಿತೆ ರಚಿಸಿರಿ.

  ಮೋಡ ಮುಸುಕಿತು

  ಗುಡುಗು ಗುಡುಗಿತು

  ಮಳೆಯು ಬಳ ಬಳ ಸುರಿಯಿತು.

  ..................................................

  ..................................................

  ..................................................

## ಸಂಗ್ರಹಿಸುವ

- ಮಳೆಗೆ ಸಂಬಂಧಿಸಿದ ಕವಿತೆಗಳನ್ನು ಸಂಗ್ರಹಿಸಿರಿ.

# ಪುನರುದ್ಧಾರ

ಒಂದು ಕಾಡು. ಆ ಕಾಡಿನಲ್ಲಿ ನೀರಿನ ಝರಿಗಳು, ತೊರೆಗಳು ಹರಿಯುತ್ತಿದ್ದುವು. ಇದರಿಂದಾಗಿ ಅಲ್ಲಿ ದೊಡ್ಡ ದೊಡ್ಡ ಮರಗಳು ಬೆಳೆದಿದ್ದುವು. ಸದಾಕಾಲ ಹಚ್ಚ ಹಸುರಾಗಿ ಕಂಗೊಳಿಸುತ್ತಿದ್ದವು. ಅವುಗಳು ವಿಧವಿಧದ ಫಲಪುಷ್ಪಗಳಿಂದ ಕೂಡಿದ್ದುವು. ಆದುದರಿಂದಲೇ ಅವುಗಳಲ್ಲಿ ದುಂಬಿಗಳು, ಜೇನುನೊಣಗಳು, ಹಕ್ಕಿಗಳು ಹೆಚ್ಚಿನ ಸಂಖ್ಯೆಯಲ್ಲಿ ಬಂದು ವಾಸಮಾಡುತ್ತಿದ್ದುವು. ಹೀಗಿರಲು ಕಾಡಿನಲ್ಲಿ ಪಕ್ಷಿ ಸಂಕುಲ ಸಮೃದ್ಧಿ ಹೊಂದಿತು. ದುಂಬಿ ಹಾಗೂ ಪಕ್ಷಿಗಳ ಸುಮಧುರ ಸಂಗೀತವು ಸದಾಕಾಲ ಮೊಳಗುತ್ತಿತ್ತು. ಅದೊಂದು ಪಕ್ಷಿಧಾಮವೇ ಆಗಿ ಹೋಯಿತು.

ಹೀಗಿರಲು ಒಂದು ದಿನ ಕೆಲವು ಜನರು ಅಲ್ಲಿಗೆ ಬಂದರು. ಕಾಡನ್ನು ಸುತ್ತಿದರು. ಕಾಡಿನ ಸೌಂದರ್ಯಕ್ಕೆ





ಮರುಳಾದರು. ಪಕ್ಷಿಗಳ ಹಾಡು, ನೋಟ ಅವರ ಮನಸೂರೆಗೊಂಡಿತು. ಇದು ಒಂದು ಅದ್ಭುತವಾದ ಪಕ್ಷಿಧಾಮವೆಂದು ಕಂಡಕಂಡಲ್ಲಿ ಹೇಳುತ್ತಾ ಹೋದರು. ಕಾಡಿನ ಸೊಬಗು ತುಂಬ ಪ್ರಚಾರಪಡೆಯಿತು. ಹೆಚ್ಚು ಹೆಚ್ಚು ಜನರು ಪ್ರಕೃತಿ ಹಾಗೂ ಪಕ್ಷಿವೀಕ್ಷಣೆಗಾಗಿ ಬರತೊಡಗಿದರು. ಸ್ವಲ್ಪ ಕಾಲದಲ್ಲೆ ಅದೊಂದು ಪ್ರವಾಸಿ ತಾಣವಾಗಿ ಬದಲಾಯಿತು. ಮತ್ತೆ ಕೇಳಬೇಕೇ? ಪ್ರವಾಸಿಗರು ಹೆಚ್ಚಿದಂತೆ ಈ ಅರಣ್ಯ ನಾಶದ ಕಡೆಗೆ ಸಾಗತೊಡಗಿತು. ಪ್ರಶಾಂತ ವಾತಾವರಣ ಹಾಳಾಯಿತು. ರಸ್ತೆ ನಿರ್ಮಾಣ ಆರಂಭವಾಯಿತು. ಪ್ರವಾಸಿಗರಿಂದ ಮಾಲಿನ್ಯ ಹೆಚ್ಚಿತು. ಕಾಡಿನಲ್ಲಿ ಪ್ರಾಣಿ ಪಕ್ಷಿಗಳಿಗೆ ತೊಂದರೆಗಳು ಹೆಚ್ಚಾದುವು. ಮರಗಿಡಗಳ ನಾಶಕ್ಕೆ ನಾಂದಿ ಹಾಡಲಾಯಿತು. ಪ್ರವಾಸಿ ಜನರು ಮೋಜು ಮಾಡತೊಡಗಿದರು. ಅಲ್ಲಲ್ಲಿ ಬೆಂಕಿ ಹಾಕಿದರು. ಉರಿಸಿದ ಬೆಂಕಿಯಿಂದ ಕಾಡ್ಗಿಚ್ಚು ಹಬ್ಬತೊಡಗಿತು. ಕಾಡ್ಗಿಚ್ಚಿನಿಂದ ಅರಣ್ಯದ ದೊಡ್ಡ ಭಾಗವೇ ನಾಶವಾಯಿತು. ಅಲ್ಲಿದ್ದ ಪಕ್ಷಿ ಸಂಕುಲ ಸಂಕಷ್ಟಕ್ಕೆ ಸಿಲುಕಿತು. 'ಇಲ್ಲಿದ್ದರೆ ಉಳಿಗಾಲವಿಲ್ಲ' ವೆಂದು ಪಕ್ಷಿಗಳು ಗುಂಪು ಗುಂಪುಗಳಾಗಿ ವಲಸೆ ಹೋಗತೊಡಗಿದುವು.

ಆ ಕಾಡಿನಲ್ಲಿ 'ಶಂತನು' ಎಂಬ ಪಕ್ಷಿ ಇತ್ತು. ಅದು ಪಕ್ಷಿಗಳ ಗುಂಪಿನ ನಾಯಕನಾಗಿತ್ತು. ಕಾಡಿನ ದುರವಸ್ಥೆಯನ್ನು ಕಂಡು ಶಂತನುವಿಗೆ ಸಹಿಸಲಾಗಲಿಲ್ಲ. ಅದು ಹೊತ್ತಿ ಕರಕಲಾದ ಮರದ ಕೊಂಬೆಯಲ್ಲಿ



ಕುಳಿತು ಎಲ್ಲಾ ಪಕ್ಷಿಗಳನ್ನು ಕೂಗಿ ಕರೆಯಿತು. ತಕ್ಷಣ ಪಕ್ಷಿಗಳ ಸಭೆ ಸೇರಿತು. "ಸಿರಿತನವಿದ್ದಾಗ ಎಲ್ಲರೂ ಬರುತ್ತಾರೆ. ಅರಣ್ಯ ಈಗ ಬಡಕಲಾಗಿದೆ. ಇನ್ನು ಯಾರೂ ಇಲ್ಲಿ ಸುಳಿಯಲಾರರು. ನಮ್ಮವರೇ ಬಿಟ್ಟು ಹೋಗುತ್ತಿದ್ದಾರೆ. ನಾವು ಹಲವು ಕಾಲದಿಂದ ಇದ್ದವರು, ಇಲ್ಲೇ ಹುಟ್ಟಿ ಬೆಳೆದವರು. ಈ ವನಸಂಪತ್ತಿನಿಂದ ನಮ್ಮ ಜೀವನ ಈವರೆಗೆ ಸುಖಕರವಾಗಿ ಸಾಗಿದೆ. ನಾವು ಇಲ್ಲೇ ಸ್ವರ್ಗಸುಖ ಕಂಡವರು. ಮಾನವರ ಕೃತ್ಯದಿಂದಾಗಿ ಹೀಗಾಗಿ ಹೋಯಿತು. ಇದನ್ನು ಹೇಗಾದರೂ ತಡೆಯಬೇಕು. ಇದುವೇ ಈ ಅರಣ್ಯಕ್ಕೆ ನಾವು ಸಲ್ಲಿಸುವ ಕೃತಜ್ಞತೆ" ನಾಯಕನ ಮಾತು ಪಕ್ಷಿಗಳ ಮನಮುಟ್ಟಿತು. "ಅದೇನೋ ಸರಿ! ಇದನ್ನು ತಡೆಯುವುದು ಹೇಗೆ? ಮರಳಿ ಜೀವ ತುಂಬುವುದು ಹೇಗೆ?" ಪಕ್ಷಿಗಳು ಪ್ರಶ್ನಿಸಿದುವು.

ಶಂತನು ಶಾಂತ ರೀತಿಯಲ್ಲಿ ಉತ್ತರಿಸಿತು "ಮನಸ್ಸಿದ್ದರೆ ಮಾರ್ಗವಿದೆ. ಈ ಪ್ರಪಂಚದಲ್ಲಿ ಸಾಧ್ಯವಿಲ್ಲದಿರುವುದು ಯಾವುದೂ ಇಲ್ಲ. ನಾವು ಸ್ವಲ್ಪ ಹೆಚ್ಚಿನ ಶ್ರಮಪಡಬೇಕು ಅಷ್ಟೇ! ಈ ಕಾಡಿನ ಪುನರುದ್ಧಾರಕ್ಕೆ ಇಂದೇ ಸಂಕಲ್ಪ ಮಾಡೋಣ! ಇದಕ್ಕಾಗಿ ಪಕ್ಷಿ ಸಂಕುಲವನ್ನು ಎಚ್ಚರಿಸೋಣ" ಶಂತನುವಿನ ತೀರ್ಮಾನವನ್ನು ಪಕ್ಷಿಗಳು ಅವಿರೋಧವಾಗಿ ಅಂಗೀಕರಿಸಿದುವು. ಅದರಂತೆ ಹಕ್ಕಿಗಳು ಕಾರ್ಯಪ್ರವೃತ್ತವಾದುವು.

ಈಗ ಕಾಡು ನಿರ್ಜನವಾಗಿದೆ. ಜನರ ಸುಳಿವೇ ಇಲ್ಲ. ಆದರೆ ಒಬ್ಬ ವ್ಯಕ್ತಿ ಅಲ್ಲೇ ತಿರುಗಾಡುತ್ತಾ



ಕಾಡಿನ ದುರವಸ್ಥೆಗಾಗಿ ಮಮ್ಮಲ ಮರುಗುತ್ತಿದ್ದನು. ಸದಾ ಚಿಂತಿಸುತ್ತಾ ಕಾಲ ಕಳೆಯುತ್ತಿದ್ದ ಅವನಿಗೆ ಈ ಪಕ್ಷಿಗಳ ಚಲನವಲನ ಕಣ್ಣಿಗೆ ಬಿತ್ತು. ಅವನು ಸೂಕ್ಷ್ಮವಾಗಿ ಎಲ್ಲವನ್ನೂ ವೀಕ್ಷಿಸುತ್ತಿದ್ದನು. ಸುಡುವ ಬೇಸಗೆಯಾದರೂ ಹಕ್ಕಿಗಳೆಲ್ಲಾ ಗುಂಪು ಗುಂಪಾಗಿ ಹಾರುತ್ತಾ ಹೋಗಿ ಎಲ್ಲಿಂದಲೋ ಮರಗಳ ಬೀಜಗಳನ್ನು ತರುತ್ತಿದ್ದುವು. ಅವುಗಳನ್ನು ನಾಶವಾದ ಕಾಡಿನ ಪ್ರದೇಶದಲ್ಲಿ ಬಿತ್ತುತ್ತಿದ್ದುವು. ದಿನದಿಂದ ದಿನಕ್ಕೆ ಈ ಕಾರ್ಯದಲ್ಲಿ ತೊಡಗಿದ ಹಕ್ಕಿಗಳ ಸಂಖ್ಯೆ ಹೆಚ್ಚುತ್ತಾ ಹೋಯಿತು. ಕಾಡಿನ ಪುನರುದ್ಧಾರಕ್ಕಾಗಿ ಪಕ್ಷಿಗಳು ನಡೆಸುವ ಅಭಿಯಾನವನ್ನು ಆ ವ್ಯಕ್ತಿ ಅರ್ಥೈಸಿಕೊಂಡನು. ದಿನಗಳು ಉರುಳಿದವು. ತಿಂಗಳುಗಳು ಕಳೆದವು. ಮಳೆಗಾಲ ಆರಂಭವಾಯಿತು. ಬೀಜಗಳು ಮೊಳಕೆಯೊಡೆದುವು. ಸಸಿಗಳು ಬೆಳೆದವು. ಪಕ್ಷಿಗಳ ಕಾರ್ಯ ಫಲ ನೀಡಿತ್ತು.

ಅರಣ್ಯಕ್ಕೆ ಆಗಾಗ ಭೇಟಿ ನೀಡುತ್ತಿದ್ದ ಆ ವ್ಯಕ್ತಿ ಪಕ್ಷಿಗಳು ಮಾಡಿದ ಚಮತ್ಕಾರವನ್ನು ಕಂಡು ಬೆಕ್ಕಸ ಬೆರಗಾದನು. 'ಮೂಕ ಪ್ರಾಣಿಗಳು ಎಷ್ಟೊಂದು ಸಾಧನೆ ಮಾಡಿವೆ! ನಾನೂ ಈ ವನವನ್ನು ಸಂರಕ್ಷಿಸುವ ಕಾರ್ಯಕ್ಕೆ ನೆರವಾಗುತ್ತೇನೆ' ಎಂದು ಶಪಥ ಮಾಡಿದನು. ಸರಕಾರಕ್ಕೆ ಹಲವಾರು ಮನವಿಗಳನ್ನು





ಸಲ್ಲಿಸಿದನು. ಅವನ ಪ್ರಯತ್ನದ ಫಲವಾಗಿ ಆ ಅಡವಿ 'ಸಂರಕ್ಷಿತಾರಣ್ಯ'ವೆನಿಸಿತು. ಜನ ಸಂಚಾರ ನಿಷೇಧಿತ ಪ್ರದೇಶವೆಂದು ಘೋಷಿತವಾಯಿತು. ಆ ಅರಣ್ಯ ಹಿಂದಿಗಿಂತಲೂ ಸಮೃದ್ಧವಾಗಿ ಬೆಳೆಯಿತು. ಕಾನನಕ್ಕೆ ಕೃತಜ್ಞತೆ ಸಲ್ಲಿಸಿ ಖಗ ಸಮೂಹ ಕೃತಾರ್ಥವಾಯಿತು.

## ಚಟುವಟಿಕೆಗಳು

### ಕಥೆ ಓದುವ

- ಈ ಕಥೆಯನ್ನು ಸ್ವರಭಾರಯುಕ್ತವಾಗಿ ಓದಿರಿ.

### ಉತ್ತರ ಬರೆಯುವ

- ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ಅರಣ್ಯ ನಾಶವಾಗಲು ಕಾರಣವೇನು?
2. ಪಕ್ಷಿಗಳ ನಾಯಕನಾರು? ಅವನು ಸಭೆಯಲ್ಲಿ ಹೇಳಿದ ಮಾತುಗಳೇನು?

3. ಪಕ್ಷಿಗಳು ಸಭೆಯಲ್ಲಿ ಕೈಗೊಂಡ ತೀರ್ಮಾನವೇನು?

4. ಪಕ್ಷಿಗಳು ಕಾಡನ್ನು ಪುನರುದ್ಧಾರ ಮಾಡಿದುದು ಹೇಗೆ?

5. ಅರಣ್ಯವನ್ನು ಜನ ಸಂಚಾರ ನಿಷೇಧಿತ ಪ್ರದೇಶವೆಂದು ಘೋಷಿಸಿದ ಉದ್ದೇಶವೇನು?

### ಇಷ್ಟವಾದ ಸನ್ನಿವೇಶ ಹೇಳುವ

- ಕಥೆಯನ್ನು ಓದಿದಿರಲ್ಲವೇ? ಇದರಲ್ಲಿ ನಿಮಗೆ ಯಾವ ಭಾಗ ಇಷ್ಟವಾಯಿತು? ಯಾಕೆ?

### ಗಾದೆ ವಿವರಣೆ

- ಹಲವು ಗಾದೆಮಾತುಗಳನ್ನು ನೀವು ಕೇಳಿರುವಿರಲ್ಲವೇ? ಕೆಲವನ್ನು ಹೇಳಿರಿ.

'ಮನಸ್ಸಿದ್ದರೆ ಮಾರ್ಗವಿದೆ' ಎಂಬ ಗಾದೆಯ ವಿವರಣೆಯನ್ನು ಇಲ್ಲಿ ಕೊಡಲಾಗಿದೆ. ಇದನ್ನು ಓದಿರಿ.

**'ಮನಸ್ಸಿದ್ದರೆ ಮಾರ್ಗ'**

ಮನಸ್ಸಿದ್ದರೆ ಮಾರ್ಗ ಎಂಬುದು ಒಂದು ಗಾದೆ. ನಾವು ಮನಸ್ಸು ಮಾಡಿದರೆ ಏನನ್ನಾದರೂ ಸಾಧಿಸಬಹುದು. ಮೊದಲು ನಾವು ಆ ಕೆಲಸವನ್ನು ಮಾಡಲೇಬೇಕು ಎಂಬ ನಿರ್ಧಾರವನ್ನು ಮಾಡಬೇಕು. ಅನಂತರ ಕೆಲಸದಲ್ಲಿ ಶ್ರದ್ಧೆಯಿಂದ ತೊಡಗಬೇಕು. ಆಗ ನಾವು ಭಾವಿಸಿದ್ದನ್ನು ಸಾಧಿಸಬಹುದು. ಈ ಕಾರಣದಿಂದಲೆ ಮನಸ್ಸಿದ್ದರೆ ಮಾರ್ಗ ಎಂಬ ಮಾತು ರೂಢಿಗೆ ಬಂದಿದೆ.


ಗಾದೆಯ ವಿವರಣೆಯನ್ನು ಓದಿದಿರಲ್ಲವೇ? ಇದೇ ರೀತಿ 'ಕೈಕೆಸರಾದರೆ ಬಾಯಿ ಮೊಸರು' ಎಂಬ ಗಾದೆ ಮಾತನ್ನು ವಿವರಿಸಿ ಬರೆಯಿರಿ.

### ಶೀರ್ಷಿಕೆ ಬರೆಯುವ

- ಪುನರುದ್ಧಾರ ಕಥೆಗೆ ಬೇರೆ ಯಾವ ಶೀರ್ಷಿಕೆಯನ್ನು ಕೊಡಬಹುದು? ನೀವು ಆ ಶೀರ್ಷಿಕೆಯನ್ನು ಸೂಚಿಸಲು ಕಾರಣವೇನು ಎಂದು ಬರೆಯಿರಿ.

### ಸೂಚನೆ ಬರೆಯುವ

- ನಿಮ್ಮ ಊರಿನಲ್ಲಿ ಒಂದು ಪಕ್ಷಿಧಾಮವಿದೆ ಎಂದು ಭಾವಿಸಿರಿ. ಅಲ್ಲಿಗೆ ಪಕ್ಷಿ ವೀಕ್ಷಣೆಗಾಗಿ ತುಂಬಾ ಮಂದಿ ಆಗಮಿಸುತ್ತಾರೆ. ಅವರಿಂದ ಪಕ್ಷಿಗಳಿಗೆ ತೊಂದರೆಯಾಗದಂತೆ ವೀಕ್ಷಕರು ಪಾಲಿಸಬೇಕಾದ ಸೂಚನೆಗಳನ್ನು ಸೂಚನ ಫಲಕಗಳಲ್ಲಿ ಬರೆಯಿರಿ.




### ವಾಕ್ಯ ಪೂರ್ತಿಗೊಳಿಸುವ

- ಆವರಣದಲ್ಲಿ ಕೊಡಲಾದ ಪದಗಳ ಸರಿಯಾದ ರೂಪಗಳನ್ನು ಬಳಸಿ ವಾಕ್ಯಗಳನ್ನು ಪೂರ್ತಿಗೊಳಿಸಿರಿ.

  (ಮನಸೂರೆಗೊಳ್ಳು, ಕೂಗಿ ಕರೆಯು, ಸಂಕಲ್ಪ ಮಾಡು, ಫಲನೀಡು, ಮನವಿ ಸಲ್ಲಿಸು)

1. ಅಜ್ಜ ಮಾಡಿದ ಉಪಾಯ ................................
2. ನಾನು ಮುಂದಿನ ಪರೀಕ್ಷೆಯಲ್ಲಿ 'ಎ' ಗ್ರೇಡ್ ಪಡೆದೇ ಪಡೆಯುತ್ತೇನೆ ಎಂದು ಫಾತಿಮ ....................
3. ಅವರು ಪರಿಸರವನ್ನು ಉಳಿಸುವುದಕ್ಕಾಗಿ ಜಿಲ್ಲಾಧಿಕಾರಿಗೆ................................
4. ತೋಟದ ಸುಂದರ ನೋಟ ನೋಡುಗರ .......................
5. ಒಂದು ಅಗುಳನ್ನು ಕಂಡರೂ ಕಾಗೆ ತನ್ನ ಬಳಗವನ್ನೆಲ್ಲ .......................

## ವರ್ಣನೆ ಬರೆಯುವ

- ಕೆಳಗೆ ಕೊಟ್ಟಿರುವ ವರ್ಣನೆ ಓದಿರಿ.

ದಟ್ಟವಾದ ಕಾಡು. ದೊಡ್ಡ ದೊಡ್ಡ ಮರಗಳು ಬೆಳೆದಿದ್ದುವು ಬಳ್ಳಿಗಳು ಹಾವಿನಂತೆ ನೇತಾಡುತ್ತಿದ್ದುವು. ಗಿಡಮರ ಬಳ್ಳಿಗಳು ಹಚ್ಚ ಹಸಿರಾಗಿ ಕಂಗೊಳಿಸುತ್ತಿದ್ದುವು. ಝೇಂಕರಿಸುವ ದುಂಬಿಗಳು, ಹೂವಿಂದ ಹೂವಿಗೆ ಹಾರುವ ಬಣ್ಣ ಬಣ್ಣದ ಚಿಟ್ಟೆಗಳು, ಎಲೆಗಳೆಡೆಯಿಂದ ಕುಹೂ ಎಂದು ಕೂಗುವ ಕೋಗಿಲೆ ಎಲ್ಲವೂ ಕಾಡಿನ ವೈಭವವನ್ನು ಹೆಚ್ಚಿಸಿದ್ದುವು. ಜುಳು ಜುಳು ಹರಿಯುವ ನದಿಯ ನಿನಾದವಂತೂ ಕಾಡಿನ ಸಂಗೀತಕ್ಕೆ ಶ್ರುತಿ ಹಿಡಿದಂತಿತ್ತು.

- ಕಾಡಿನ ವರ್ಣನೆಯನ್ನು ಓದಿದಿರಲ್ಲವೇ. ಕೊಟ್ಟಿರುವ ಸೂಚನೆಗಳ ಆಧಾರದಲ್ಲಿ ಬಯಲಿನ ವರ್ಣನೆಯನ್ನು ಬರೆಯಿರಿ.
    - ಹಚ್ಚ ಹಸುರಾದ ಹೊಲಗದ್ದೆಗಳು
    - ತೂಗಿ ತೊನೆಯುವ ತೋಟ
    - ತುಂಬಿ ಹರಿಯುವ ನದಿ
    - ಹಾರಾಡುವ ಹಕ್ಕಿಗಳು
    - ದುಡಿಯುವ ರೈತರು

## ಚರ್ಚಿಸುವ

- ನೀವೂ ಪ್ರವಾಸ ಹೋಗಿರುವಿರಲ್ಲವೇ? ಪ್ರವಾಸದಿಂದ ಆನಂದವೂ, ಉಲ್ಲಾಸವೂ, ಅನುಭವವೂ ಲಭಿಸುತ್ತವೆ. ಆದರೆ ಪ್ರವಾಸಿಕೇಂದ್ರಗಳು ಪ್ರವಾಸಿಗಳ ಹೆಚ್ಚಳದಿಂದ ಮಲಿನವಾಗುವ ಸಂದರ್ಭಗಳು ಹೆಚ್ಚು. ಈ ಹೇಳಿಕೆಯ ಕುರಿತು ನಿಮ್ಮ ಅಭಿಪ್ರಾಯವೇನು? ಸೂಚನೆಗಳ ಆಧಾರದಲ್ಲಿ ಚರ್ಚಿಸಿರಿ.
    - ಪ್ರವಾಸಿ ಸ್ಥಳಗಳು ಹೇಗೆ ಮಲಿನವಾಗುತ್ತವೆ?
    - ಅವುಗಳು ಮಲಿನವಾಗುವುದನ್ನು ಹೇಗೆ ತಡೆಯಬಹುದು?

## ಪ್ರವಾಸಾನುಭವ ಬರೆಯುವ

- ನೀವು ಪ್ರವಾಸ ಹೋಗಿರಬಹುದಲ್ಲವೇ? ಅಲ್ಲಿ ಕಂಡ ವಿಚಾರಗಳು ಮತ್ತು ನಿಮಗಾದ ಅನುಭವಗಳನ್ನು ನೆನಪಿಸಿಕೊಂಡು ಲೇಖನವನ್ನು ಬರೆಯಿರಿ.

## ಪತ್ತೆ ಹಚ್ಚುವ

- ಕೆಳಗೆ ಕೊಡಲಾದ ಚೌಕದೊಳಗೆ ಕಾಡಿನಲ್ಲಿರುವ ಮರಗಳ ಹೆಸರು ಅಡಗಿಕೊಂಡಿವೆ. ಅವುಗಳನ್ನು ಪತ್ತೆಹಚ್ಚಿ ಬರೆಯಿರಿ.

ಉದಾ: ಹುಣಸೆ

| | | | | | | | | | |
|---|---|---|---|---|---|---|---|---|---|
| ಅಂ | ಕೊಂ | ದೆ | ಕ | ನೇ | ನೀ | ವಾ | ಗು | ಸಾ | ಬ |
| ಶ್ರೀ | ದೀ | ಪ | ದಂ | ದಾ | ಲ | ಚೀ | ನಿ | ಗೋ | ಳೀ |
| ಗಂ | ಚಂ | ಪು | ಬ | ನೆ | ಗಿ | ಕಿ | ಸ್ಕಾ | ರ | ಕಾ |
| ಧ | ಸೀ | ದ | ನಾ | ಲ್ಲಿ | ರಿ | ನೇ | ಅ | ತ್ತಿ | ಸ |
| ಖ | ಗೆ | ಬೋ | ನ | ರು | ಬೂ | ರ | ಗ | ಶೋ | ರ್ಕ |
| ಮ | ನಾ | ಗ | ಸಂ | ಪಿ | ಗೆ | ಳೆ | ಸೆ | ಲಿ | ಕ |
| ಶಾಂ | ಹಾ | ರಿ | ನ್ನೆ | ಬಾ | ಹಾ | ಕಾ | ಡು | ಜಾ | ಯಿ |
| ತಿ | ರೆಂ | ಗ | ಹೋ | ಬೀ | ದ | ನ | ಬಿ | ದಿ | ರು |
| ಬೇ | ಲ | ಜೆ | ನಿ | ಟಿ | ಬೈ | ಡ್ಡಾ | ಹು | ಣ | ಸೆ |
| ಹೊಂ | ಗೆ | ಕಾ | ಟಿ | ಪ | ನೆ | ಳ | ಲ | ತಾ | ಳೆ |

# ಗದ್ದೆಯ ಗಮ್ಮತ್ತು

"ಅಂಬಾ ಅಂಬಾ" ಧ್ವನಿ ಕೇಳಿ ರಾಮರಾಯರು ಎಚ್ಚರಗೊಂಡರು. ಎದ್ದು ಹಟ್ಟಿಗೆ ಹೋಗಿ ಎತ್ತುಗಳಿಗೆ ಬೈಹುಲ್ಲು ಹಾಕಿದರು. ಹಲಸಿನಕಾಯಿಯ ಮಡ್ಡಿಯನ್ನು ಒಲೆಯಿಂದ ಕೆಳಗಿಳಿಸಿ ತಣಿಯಲು ಬೇರೊಂದು ಪಾತ್ರೆಗೆ ಹಾಕಿಟ್ಟರು. ಅರೆದಿಟ್ಟ ಹುರುಳಿಯನ್ನು ಬೆರೆಸಿ ಅಕ್ಕಚ್ಚು ತಯಾರಿಸಿದರು. ಅಷ್ಟರಲ್ಲಿ ಕಮಲೆ ಎದ್ದು ಅಡುಗೆ ಕೆಲಸದಲ್ಲಿ ನಿರತರಾದರು. ಹಲ್ಲುಜ್ಜಿ, ಮುಖತೊಳೆದು ಬಂದ ರಾಮರಾಯರು ಎತ್ತುಗಳಿಗೆ ಮಡ್ಡಿ ನೀಡಿ ಅಕ್ಕಚ್ಚು ಕೊಟ್ಟರು. "ಏನು ರವಿ, ಏಳಲಿಲ್ವೇ, ಎಷ್ಟು ಹೊತ್ತಾಯಿತು; ಎತ್ತುಗಳನ್ನು ಗದ್ದೆಗೆ ಹೊಡೆದುಕೊಂಡು ಹೋಗಲು ಈಗಲೇ ತಡವಾಯಿತು." ಎಂದು ಮಗನನ್ನು ಕರೆದರು. "ಪುಟ್ಟ.... ಏಳು... ಎಷ್ಟು ಹೊತ್ತಾಯಿತು; ಎತ್ತುಗಳನ್ನು ಬೇಗನೆ ಗದ್ದೆಗೆ ಕೊಂಡುಹೋಗಬೇಕು. ಹೂಂ....ಬೇಗ ಬೇಗ" ಎಂದು ರವಿಯನ್ನು ಎಬ್ಬಿಸಿದರು. "ಹೂಂ ಆಯ್ತಪ್ಪ" ಎನ್ನುತ್ತಾ ರವಿ ಬೇಗಬೇಗನೇ ಎದ್ದು ಚಾಪೆಯನ್ನು ಮಡಚಿ ಬದಿಗಿರಿಸಿದನು. ಆಕಳಿಸುತ್ತಾ ಹೊರಬಂದನು. ಆಗಲೇ ಹಕ್ಕಿಗಳು ಆಹಾರ ಹುಡುಕುತ್ತಾ ಹೊರಟಿದ್ದವು. ಅಂಗಳದ ಮೂಲೆಯಲ್ಲಿದ್ದ ತೊಂಡೆ ಚಪ್ಪರದಲ್ಲಿ ಕುಳಿತ ಕಾಗೆ "ಕಾ.... ಕಾ...." ಎಂದು ಬಳಗವನ್ನು ಕರೆಯುತ್ತಿತ್ತು. ಹಟ್ಟಿಯಲ್ಲಿದ್ದ ಕಪಿಲೆ "ಅಂಬಾ ಅಂಬಾ" ಎಂದು ಕರುವನ್ನು ಕರೆಯಿತು. "ಹಾಂ ಹಾಂ ಬಂದೆ ಬಂದೆ" ಎನ್ನುತ್ತಾ ಕಮಲೆ ಕರುವನ್ನು ಬಿಟ್ಟು ಹಾಲು ಕರೆಯುಲು ಹೊರಟರು. ಕರು ಬಾಲವನ್ನು ಎತ್ತಿ ಜಿಗಿಯುತ್ತಾ ತಾಯಿಯ ಬಳಿಗೆ ಓಡಿತು.



ರಾಮರಾಯರು ರವಿಯ ಜೊತೆ ಎತ್ತುಗಳನ್ನು ಹೊಡೆದುಕೊಂಡು ಗದ್ದೆಗೆ ಬಂದರು. ಆಗಲೇ ಬಯಲಿನಲ್ಲಿ ಐದಾರು ಜೋಡೆತ್ತುಗಳಿಂದ ಗದ್ದೆ ಉಳುತ್ತಿದ್ದರು. "ಹೂಂ... ಹೂಂ... ಏನು... ಕಾಳ... ಭಾರೀ ಉದಾಸೀನ? ಅಲ್ಲಿ ಆಗಲೇ ಒಂದು ಬೊರಿ ಉತ್ತಾಯಿತು. ಇಲ್ಲಿ ಇನ್ನೂ ನೊಗವನ್ನೇ ಇಡಲಿಲ್ಲ." ಎನ್ನುತ್ತಾ ಎತ್ತುಗಳನ್ನು ಎಳೆದು

ತಂದು ಅವುಗಳ ಹೆಗಲಿಗೆ ನೊಗವನ್ನಿಟ್ಟು ನೇಗಿಲನ್ನು ಹೂಡಿದರು. ಒಂದು ಕೈಯಲ್ಲಿ ಲೊಕ್ಕಿಯ ಬೆತ್ತ, ಮತ್ತೊಂದರಲ್ಲಿ ನೇಗಿಲ ಹಿಡಿಯನ್ನು ಹಿಡಿದು, "ಹುಂ ಹುಂ ಹೈ" ಎಂದದ್ದೇ ತಡ, ಎತ್ತುಗಳು ನೇಗಿಲನ್ನೆಳೆದು ಕೆಸರು ಗದ್ದೆಯಲ್ಲಿ ಚಳಪಳ ಸದ್ದು ಮಾಡುತ್ತಾ ನಡೆದವು. ರವಿ ಗದ್ದೆಯಿಂದ ನಡೆದು ಹುಣಿಯಲ್ಲಿ ನಿಂತನು. ಆಗಲೇ ಸೂರ್ಯನು ಮೂಡಲಲ್ಲಿ ಮೇಲೇರಿ ಬರುತ್ತಿದ್ದನು. ಕಣ್ಣಿಗೆ ಕಾಣುವಷ್ಟು ದೂರದಲ್ಲಿ ವಿಶಾಲವಾದ ಬಯಲು. ಕೆತ್ತಿ ಮೆತ್ತಿ ನಯಗೊಳಿಸಿದ ಹುಣಿಯ ಮೇಲೆ ಮಂಜಿನ ಹನಿಗಳು ಬಿದ್ದು ಅವು ಹೊಳೆಯುವಂತೆ ತೋರುತ್ತಿದ್ದವು. ಬೀಸುವ ತಂಗಾಳಿಗೆ ಗದ್ದೆಯಲ್ಲಿ ಕಟ್ಟಿನಿಂತ ನೀರಿನಲ್ಲಿ ಅಲೆಗಳು ಏಳುತ್ತಿದ್ದವು. ಸೂರ್ಯನ ಮುಂಜಾವಿನ ಕಿರಣಗಳು ಆ ಅಲೆಯಲ್ಲಿ ನಾಟ್ಯವಾಡುತ್ತಿದ್ದುವು. ಎಲ್ಲಿ ನೋಡಿದರೂ ಹುಲ್ಲು ಕಿತ್ತು ಮೆತ್ತಿ ಸಿಂಗರಗೊಂಡ ಗದ್ದೆ ಮದುಮಗಳಂತೆ ತೋರುತ್ತಿತ್ತು. ಅಷ್ಟರಲ್ಲಿ ಆ ದಾರಿಯಾಗಿ ಕೋಲೂರುತ್ತಾ ಬಂದ ತಿಮ್ಮಜ್ಜ "ಸುಗ್ಗಿಡ್ ಕಂಡತ ಮದಿಮೆ ಅತ್ತ? ಎಂಚ ಮದಿಮಾಲ್ ಪೊರ್ಲಾತಲೇ"ಎಂದರು. "ಇಂದೆ ಇಂಚ ಉಂಡು" ರಾಮರಾಯರು ನಗುತ್ತಾ ಹೇಳಿದರು. "ಇನಿಯತ್ತ ಕಂಡದ ಕೋರಿ?" ತಿಮ್ಮಜ್ಜ ಕೇಳಿದರು. "ಅಂದಜ್ಜೆರೆ ಬೊಕ್ಕ ಬಲೆ" ರಾಮರಾಯರು ಉತ್ತರಿಸಿದರು. 'ಹೂಂ, ತೂಕ, ಆಂಡ ಬರ್ಪೆ' ಬೊಚ್ಚು ಬಾಯಗಲಿಸಿ ನಗುತ್ತಾ ತಿಮ್ಮಜ್ಜ ಹೊರಟರು.



ಅಷ್ಟರಲ್ಲಿ ಕೆಲಸದಾಳು ಶೇಖರ ಬಂದನು. ಅವನ ಕೈಯಲ್ಲಿ ನೇಗಿಲನ್ನು ಕೊಟ್ಟು ರಾಮರಾಯರು ಹೊರಟರು. 'ಅಣ್ಣೆರೆ, ಕಂಡದ ಕೋರಿಗ್ ದಾದ ಗಮ್ಮತ್ತ್?'' ''ಅದೆಲ್ಲ ಉಂಟು ಅದಕ್ಕೇಕೆ ಗಡಿಬಿಡಿ'' ಎನ್ನುತ್ತಾ ರಾಮರಾಯರು ಈಚೆ ಗದ್ದೆಗೆ ಬಂದರು. ಆಗಲೆ ಹೆಂಗಸರು ನೇಜಿಯನ್ನು ಕೀಳುತ್ತಿದ್ದರು. ರಾಮರಾಯರು ರವಿಯೊಂದಿಗೆ ಸೇರಿ ಕಿತ್ತು ಕಟ್ಟಿದ ನೇಜಿಯ ಸೂಡಿಗಳನ್ನು ಗದ್ದೆಯಿಂದ ಎತ್ತಿ ಹುಣಿಯಲ್ಲಿಟ್ಟರು. ಅವುಗಳಿಂದ ನೀರಿಳಿದ ಮೇಲೆ ಕಟ್ಟು ಮಾಡಿದರು.

"ಅಣ್ಣೆರೆ ಪಳಯೋ" ರಾಯರನ್ನು ಶೇಖರ ಕರೆದನು. ರಾಮರಾಯರು ಹಲಗೆಯನ್ನು ತಂದು ಗದ್ದೆಕೋರಲು ಆರಂಭಿಸಿದರು. ಎತ್ತುಗಳ ಬಾಲ ಹಿಡಿದು ಹಲಗೆಯಲ್ಲಿ ನಿಂತು, "ಓ ಹೋ ಓ ಓ.....! ಬಚ್ಚೆಲಾ ಬೋರಿ ಕುಟ್ಟ ಕುಂಡಪ್ಪಾ"ಎಂಬ ಹಾಡನ್ನು ಹಾಡುತ್ತಾ ಹಲಗೆಯನ್ನು ಬೇಕಾದಂತೆ ಕಾಲಿನಿಂದ ದೂಡಿ ಗದ್ದೆ ಕೋರುತ್ತಿದ್ದರು. ಇವರ ಹಾಡು ವಿಶಾಲವಾದ ಗದ್ದೆಯ ಕಟ್ಟಪುಣಿಗೆ ತಾಗಿ ಮಾರ್ದನಿಸುತ್ತಿತ್ತು. ರವಿಯು ಓಡಿ ಹೋಗಿ ರಾಯರ ಕಾಲೆಡೆಯಲ್ಲಿ ಹಲಗೆಯಲ್ಲಿ ಕುಳಿತುಕೊಂಡನು. ಆಹಾ ! ಏನೊಂದು ಸೊಗಸು. ಆಗಸದಲ್ಲಿ ಹಾರಿದ ಅನುಭವ ರವಿಗಾಗುತ್ತಿತ್ತು. ಅಷ್ಟರಲ್ಲಿ ರಾಮರಾಯರು ಎತ್ತನ್ನು ತಿರುಗಿಸಲು ಹಲಗೆಯಿಂದ ಒಂದು ಕಾಲನ್ನು ಕೆಳಗಿಟ್ಟರು. ಹಲಗೆ ಒಂದೆಡೆಗೆ ವಾಲಿತು. ರವಿ ಆಯತಪ್ಪಿ ಪುಳಕ್ಕನೆ ಕೆಸರಿಗೆ ಬಿದ್ದನು. ಕೆಸರಿನಲ್ಲಿ ಮುಚ್ಚಿದ ಅವನ ಅವಸ್ಥೆಯನ್ನು ನೋಡಬೇಕು! ಗದ್ದೆ ಕೋರಿದ ಬಳಿಕ ನೇಜಿ ನೆಡಲು ಹೆಂಗಸರು ಆರಂಭಿಸಿದರು. ರವಿ ಗದ್ದೆಯಲ್ಲಿ ನೇಜಿಯ ಸೂಡಿಗಳನ್ನು ಹಾಕುತ್ತಿದ್ದನು. ಹೆಂಗಸರು ನೇಜಿ ನೆಡುವ "ಓ ಬೇಲೆ ಬೆನ್ನಿತ ಬೇಲೆ ಓ ಬೇಲೆ ಕಂಡದ ಬೇಲೆ" ಹಾಡನ್ನು ಹಾಡುತ್ತಾ ಬೇಗಬೇಗನೇ ನೇಜಿ ನೆಡುತ್ತಿದ್ದರು. ಮಧ್ಯಾಹ್ನವಾಯಿತು. "ಬನ್ನಿ ಬನ್ನಿ ಊಟ ಮಾಡೋಣ." ಕಮಲೆ ಕರೆದರು. ನೇಜಿ ನೆಟ್ಟು ಮುಗಿಸಿದ ಹೆಂಗಸರು ಕೈಕಾಲು ತೊಳೆದು ಮನೆ ಕಡೆ ಹೊರಟರು. ರಾಮರಾಯರು ಎತ್ತುಗಳನ್ನು ಬಿಚ್ಚಿ ಮೀಯಿಸಲು ಕೆರೆಗೆ ಹೋದರು. ನೊಗನೇಗಿಲುಗಳನ್ನು ತೆಗೆದುಕೊಂಡು ಶೇಖರನೂ ಹೊರಟನು. ಕೆರೆಯ ನೀರಿನಲ್ಲಿ ಎತ್ತುಗಳನ್ನು ಚೆನ್ನಾಗಿ ತೊಳೆದು ಮೀಯಿಸಿ ಮೇಯಲು ಬಿಟ್ಟರು. ಶೇಖರನು ನೊಗನೇಗಿಲುಗಳನ್ನು ತೊಳೆದು ಜೋಪಾನವಾಗಿ ಮನೆಗೆ ತಂದನು. ಮನೆಯಲ್ಲಿ ಭೂರಿ ಭೋಜನ ನಡೆಯಿತು. ಬಳಿಕ ಎಲೆಅಡಿಕೆಯನ್ನು ಜಗಿಯುತ್ತಾ ಸಂಬಳ ಪಡೆದು ಕೆಲಸದಾಳುಗಳು ಮನೆ ಕಡೆ ಹೊರಟರು.

* * *

ಪಚಕ್ಕನೆ ಎಲೆಅಡಿಕೆಯನ್ನು ಉಗುಳುತ್ತ ರವಿಯಜ್ಜ ತನ್ನ ಕಳೆದ ಕಾಲವನ್ನು ಒಮ್ಮೆ ನೆನಪಿಸಿಕೊಂಡರು. "ಅಜ್ಜ ಅಜ್ಜ, ಹಾಗಾದರೆ ನಮ್ಮಲ್ಲಿ ಕಂಡದ ಕೋರಿ ಯಾವಾಗ?" ಮಕ್ಕಳು ಒಟ್ಟಿಗೆ ಕೇಳಿದರು. "ಹಾಂ! ಕಂಡದ ಕೋರಿ" ರವಿಯಜ್ಜ ದೀರ್ಘವಾದ ನಿಟ್ಟುಸಿರೊಂದನ್ನು ಬಿಟ್ಟರು. "ಯಾವಾಗ ಹೇಳಜ್ಜ" ಮಕ್ಕಳು ಕೇಳಿದರು. "ಕಂಡದ ಕೋರಿಗೆ ಈಗ ಗದ್ದೆಯಿದ್ದರೆ ತಾನೇ? ಎಲ್ಲೋ ಅಲ್ಪಸ್ವಲ್ಪ ಬೇಸಾಯ ಮಾತ್ರವಿದೆ. ಎತ್ತುಗಳ ಕೊರಳ ಗಂಟೆಗಳ ಧ್ವನಿಯಿಲ್ಲ, ಓ ಬೇಲೆಯ ಉಲಿಯಿಲ್ಲ, ಹಕ್ಕಿಗಳ ಚಿಲಿಪಿಲಿಯಿಲ್ಲ. ಈಗ ಯಂತ್ರಗಳ ಗುಡುಗುಡು ಸದ್ದು ಮಾತ್ರ. ಉಳುವುದಕ್ಕೂ, ನೆಡುವುದಕ್ಕೂ, ಕೊಯ್ಯುವುದಕ್ಕೂ ಯಂತ್ರಗಳೇ. ಮತ್ತೆಲ್ಲಿಯ ಕಂಡದ ಕೋರಿ. ಈ ಜನ ತಿನ್ನಲು ಇನ್ನೇನು ಮಾಡುತ್ತಾರೆ? ದೇವರೇ ಇವರಿಗೆ ಒಳ್ಳೆ ಬುದ್ಧಿ ಕೊಡಪ್ಪಾ. ಚೆನ್ನಾಗಿ ಬೆಳೆ, ಬೇಸಾಯ, ಮಾಡುವ ಮನಸ್ಸು ಕೊಡಪ್ಪಾ ಹಡಿಲು ಬಿದ್ದ ಗದ್ದೆಗಳು ಚಿನ್ನದ ಬೆಳೆ ಬೆಳೆಯುವಂತೆ ಮಾಡಪ್ಪಾ" ಎನ್ನುತ್ತಾ ರವಿಯಜ್ಜ ಉತ್ತರೀಯವನ್ನು ಕೊಡವಿ ಮುಂಡಾಸು ಕಟ್ಟಿದರು. ರವಿಯಜ್ಜ ಹೇಳಿದ ಕತೆಯನ್ನು ಮೆಲುಕು ಹಾಕುತ್ತಾ ಮಕ್ಕಳು ಆಡಲು ಹೊರಟರು.

## ಚಟುವಟಿಕೆಗಳು

### ಉತ್ತರಬರೆಯುವ

- ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರವನ್ನು ಬರೆಯಿರಿ.

  1. ಎತ್ತುಗಳಿಗೆ ಮಡ್ಡಿ ಅಕ್ಕಚ್ಚು ಕೊಟ್ಟವರು ಯಾರು?
  2. ಗದ್ದೆ ಉಳುಮೆಗೆ ಉಪಯೋಗಿಸುವ ಉಪಕರಣಗಳು ಯಾವುವು?
  3. ರವಿಗೆ ಯಾವಾಗ ಆಗಸದಲ್ಲಿ ಹಾರಿದ ಅನುಭವವಾಯಿತು?
  4. ಹೆಂಗಸರು ಗದ್ದೆಯಲ್ಲಿ ಯಾವ ಯಾವ ಕೆಲಸಗಳನ್ನು ಮಾಡುತ್ತಾರೆ?

### ಚರ್ಚಿಸುವ

- ನಿಮ್ಮ ಊರಿನಲ್ಲಿ ಗದ್ದೆ ಕೃಷಿಯಿದೆಯೇ? ಈಗ ಗದ್ದೆ ಬೇಸಾಯದಲ್ಲಿ ಯಾವ ಯಾವ ಬದಲಾವಣೆಗಳಾಗಿವೆ? ಚರ್ಚಿಸಿರಿ.

### ವಿಂಗಡಿಸಿ ಬರೆಯುವ

- ಕೆಳಗೆ ಕೊಟ್ಟಿರುವ ಪದಗಳನ್ನು ವಿಂಗಡಿಸಿ ಬರೆಯಿರಿ.

| | | | |
|---|---|---|---|
| ಉದಾ | ಕೆಳಗಿಳಿಸಿ | – | ಕೆಳಗೆ + ಇಳಿಸಿ |
| | ಹಾಕಿಟ್ಟರು | – | |
| | ಹೊತ್ತಾಯಿತು | – | |
| | ಬದಿಗಿರಿಸಿ | – | |
| | ಹಟ್ಟಿಯಲ್ಲಿದ್ದ | – | |
| | ಉತ್ತಾಯಿತು | – | |
| | ನೊಗವನ್ನಿಟ್ಟು | – | |
| | ನೇಗಿಲನ್ನೆಳೆದು | – | |
| | ಬಾಯಗಲಿಸಿ | – | |
| | ಕಾಲೆಡೆಯಲ್ಲಿ | – | |
| | ಕೆಲಸದಾಳುಗಳು | – | |

## ಬರೆಯುವ

- ಈ ಕೆಳಗಿನ ಮಾತುಗಳನ್ನು ಯಾರು ಯಾರಿಗೆ ಹೇಳಿದರೆಂದು ಬರೆಯಿರಿ.


    1. ಬನ್ನಿ, ಬನ್ನಿ ಊಟ ಮಾಡೋಣ
    2. ಇನಿಯತ್ತ ಕಂಡದ ಕೋರಿ
    3. ಹೂಂ, ಆಯ್ತುಪ್ಪ
    4. ಅಣ್ಣೆರೆ, ಕಂಡದ ಕೋರಿಗ್ ದಾದ ಗಮ್ಮತ್ತ್?
    5. ಹೂಂ, ಹೂಂ, ಏನು ಕಾಳ... ಭಾರೀ ಉದಾಸೀನ?

## ಪದಗಳನ್ನು ಬರೆಯುವ

- ಪಾಠಭಾಗದಲ್ಲಿ ಕೆಲವು ತುಳುಭಾಷೆಯ ಪದಗಳಿವೆ. ಅವುಗಳನ್ನು ಹುಡುಕಿ ಬರೆಯಿರಿ. ಅರ್ಥವನ್ನು ಕೇಳಿ ತಿಳಿಯಿರಿ.

## ಪದಸೂರ್ಯ ಪೂರ್ತಿಗೊಳಿಸುವ

- ಬೇಸಾಯಕ್ಕೆ ಸಂಬಂಧಿಸಿದ ಪದಗಳನ್ನು ಬರೆದು ಪದಸೂರ್ಯವನ್ನು ಪೂರ್ತಿಗೊಳಿಸಿರಿ.





## ನೋಡಿ ತಿಳಿಯುವ

- ಕೃಷಿಗೆ ಸಂಬಂಧಿಸಿದ ವೀಡಿಯೋ ದೃಶ್ಯಗಳನ್ನು ನೋಡಿರಿ. ಬೆಳೆ ಬೆಳೆಸುವ ರೀತಿಯನ್ನು ತಿಳಿಯಿರಿ.

## ಘೋಷಣ ವಾಕ್ಯ ಬರೆಯುವ

- ಯುವ ಜನರು ಕೃಷಿಯಿಂದ ವಿಮುಖರಾಗುತ್ತಿದ್ದಾರೆ. ಹೀಗೆ ಮುಂದುವರಿದರೆ ಬೇಸಾಯ ಕಡಿಮೆಯಾಗುತ್ತದೆ. ಕೃಷಿಯ ಕಡೆಗೆ ಜನರ ಒಲವನ್ನು ಹೆಚ್ಚಿಸಲು ಯೋಗ್ಯವಾದ ಘೋಷಣ ವಾಕ್ಯಗಳನ್ನು ಬರೆಯಿರಿ.




## ಅನುಭವ ಬರೆಯುವ

- ನಿಮ್ಮ ಊರಿನಲ್ಲಿ ಕೃಷಿ, ಬೇಸಾಯ ಮಾಡುತ್ತಾರೆಯೇ? ಯಾವ ಕೃಷಿಯನ್ನು ಮಾಡುತ್ತಾರೆ? ನೀವು ಕೃಷಿ ಕೆಲಸದಲ್ಲಿ ಹೇಗೆ ಸಹಾಯ ಮಾಡುತ್ತೀರಿ? ಬರೆಯಿರಿ.

## ವಾಕ್ಯ ಬರೆಯುವ

- ಮಾದರಿಯಂತೆ ವಾಕ್ಯಗಳನ್ನು ಬರೆಯಿರಿ.

ಉದಾ: ಸುಂದರವಾದ/ಮನೆಯ/ತೋಟವಿದೆ/ಮುಂದೆ

ಮನೆಯ ಮುಂದೆ ಸುಂದರವಾದ ತೋಟವಿದೆ.

1. ತೋಟದಲ್ಲಿ/ಕೆಲಸ/ಅಪ್ಪ/ಮಾಡುತ್ತಾರೆ
2. ಅಜ್ಜನ/ಹೋಗುತ್ತೇನೆ/ಜೊತೆಗೆ/ನಾನು
3. ಕೃಷಿಯನ್ನು/ಅಮ್ಮ/ಮಾಡುತ್ತಾರೆ/ಮಲ್ಲಿಗೆ
4. ಮನೆಯಲ್ಲೇ/ನಾವು/ಬೆಳೆಸುತ್ತೇವೆ/ತರಕಾರಿಗಳನ್ನು

## ಸಂಗ್ರಹಿಸುವ

- 'ಬೇಸಾಯಗಾರ ಬೇಗ ಸಾಯ' ಈ ರೀತಿಯ ಕೃಷಿಗೆ ಸಂಬಂಧಿಸಿದ ಗಾದೆಗಳನ್ನು ಸಂಗ್ರಹಿಸಿ ಬರೆಯಿರಿ. ಅದನ್ನು ತರಗತಿಯಲ್ಲಿ ಪ್ರದರ್ಶಿಸಿರಿ.

## ಸಂದರ್ಶನ ನಡೆಸುವ

- ನಿಮ್ಮ ಊರಿನಲ್ಲಿರುವ ಬೇಸಾಯಗಾರನೊಂದಿಗೆ ಸಂದರ್ಶನ ನಡೆಸಲು ಬೇಕಾದ ಪ್ರಶ್ನಾವಳಿಗಳನ್ನು ತಯಾರಿಸಿ ಸಂದರ್ಶನ ನಡೆಸಿರಿ. ಬೇಸಾಯದ ಕುರಿತಾದ ವಿವರಗಳನ್ನು ತಿಳಿಯಿರಿ.

# ಅರ್ಥಕೋಶ

| | | |
|---|---|---|
| ಅಕ್ಕಚ್ಚು | – | ಅಕ್ಕಿ ತೊಳೆದ ನೀರು, ಕಲಗಚ್ಚು |
| ಅಭಿಯಾನ | – | ಚಳವಳಿ, ಆಂದೋಲನ |
| ಅವಿರೋಧ | – | ವಿರೋಧವಿಲ್ಲದಿರುವ |
| ಅಂಗೀಕಾರ | – | ಒಪ್ಪಿಗೆ, ಸಮ್ಮತಿ |
| ಅಕಳಿಸು | – | ಆಲಸ್ಯದಿಂದ 'ಆ' ಎಂದು ಬಾಯಿತೆರೆ |
| ಆಯತಪ್ಪಿ | – | ಅಡಿತಪ್ಪಿ |
| ಕರುಕಲು | – | ಸುಟ್ಟು ಕಪ್ಪಾದುದು |
| ಕಾಡ್ಗಿಚ್ಚು | – | ಕಾಡಿನ ಬೆಂಕಿ |
| ಕಾರ್ಯಪ್ರವೃತ್ತ | – | ಕೆಲಸದಲ್ಲಿ ತೊಡಗಿದ |
| ಕೃತಜ್ಞತೆ | – | ಉಪಕಾರ ಸ್ಮರಣೆ |
| ಕೃತಾರ್ಥ | – | ಕೃತಕೃತ್ಯ, ಸಫಲತೆಯನ್ನು ಪಡೆದವನು |
| ಕೃತ್ಯ | – | ಕೆಲಸ |
| ಕಂಗೊಳಿಸು | – | ಶೋಭಿಸು, ಅಂದವಾಗು |
| ಚಮತ್ಕಾರ | – | ಸೋಜಿಗ, ವಿಸ್ಮಯ |
| ಚಲನವಲನ | – | ಸಂಚಾರ ಚಟುವಟಿಕೆ |
| ಜೀವ ಸಂಕುಲ | – | ಜೀವಿಗಳ ಸಮೂಹ |
| ತೊರೆ | – | ನದಿ, ಹೊಳೆ |
| ದುರವಸ್ಥೆ | – | ದುಸ್ಥಿತಿ,ಹೀನಸ್ಥಿತಿ |
| ನಿರ್ಜನ | – | ಏಕಾಂತಸ್ಥಳ, ಜನರಹಿತವಾದ |
| ನಿರ್ಮಾಣ | – | ಸೃಷ್ಟಿ, ರಚನೆ |
| ನಿಷೇಧಿತ | – | ನಿರಾಕರಿಸಿದ, ತಡೆಯೊಡ್ಡಿದ |
| ನಾಂದಿ | – | ಆರಂಭ |
| ಪ್ರಚಾರ | – | ಪ್ರಸಾರ, ಹರಡುವಿಕೆ |
| ಪ್ರವಾಸಿತಾಣ | – | ಪ್ರವಾಸಸ್ಥಳ |
| ಬಡಕಲು | – | ಸೊರಗಿದ |
| ಬೆಕ್ಕಸಬೆರಗು | – | ಆಶ್ಚರ್ಯ |
| ಮನಮುಟ್ಟು | – | ಮನಸ್ಸಿಗೆ ತಿಳಿ, ಅರಿವಾಗು. |
| ಮಮ್ಮಲ | – | ವಿಶೇಷವಾಗಿ, ಅತಿಶಯವಾಗಿ |
| ಮಾರ್ದನಿಸು | – | ಪ್ರತಿಧ್ವನಿಸು |
| ಮೋಜು | – | ವಿನೋದ, ತಮಾಷೆ |
| ಲೊಕ್ಕಿ | – | ಒಂದು ಬಗೆಯ ಸಸ್ಯ |
| ವಲಸೆ | – | ಒಕ್ಕಲು ಹೋಗುವುದು |
| ಶಪಥ | – | ಪ್ರತಿಜ್ಞೆ |
| ಸದಾಕಾಲ | – | ಯಾವಾಗಲೂ |
| ಸಂಕಲ್ಪ | – | ನಿರ್ಧಾರ, ನಿರ್ಣಯ |
| ಸಂಕಷ್ಟ | – | ತೊಂದರೆ, ಕಷ್ಟ |
| ಸಿರಿತನ | – | ಸಿರಿವಂತಿಕೆ, ಶ್ರೀಮಂತಿಕೆ. |
| ಸುಮಧುರ | – | ಬಹಳ ಇಂಪಾದ |
| ಸುಳಿಯು | – | ತಿರುಗು, ಸಂಚರಿಸು |
| ಸೂಕ್ಷ್ಮ | – | ಅತ್ಯಂತ ಚಿಕ್ಕದಾಗಿರುವ, ಚಿಕ್ಕಕಣ |
| ಹುಣಿ | – | ಹೊಲಗದ್ದೆಗಳ ಬದುವು |

## ಕಲಿಕಾ ಸಾಧನೆಗಳು

- ಹೊಸ ಪ್ರಯೋಗಗಳು, ಪದಗಳು, ಗಾದೆಗಳು, ನುಡಿಗಟ್ಟುಗಳು ಮೊದಲಾದುವುಗಳನ್ನು ಉಪಯೋಗಿಸಿಕೊಂಡು ಸಂದರ್ಭಾನುಸಾರ ಮಾತನಾಡುವುದು.
- ಕಥೆ, ಕವಿತೆ, ವಿವರಣೆ, ವರ್ಣನೆ ಮೊದಲಾದುವುಗಳನ್ನು ಆಲಿಸಿ ಮತ್ತು ಓದಿ ತನ್ನದೇ ಆದ ರೀತಿಯಲ್ಲಿ ಹೇಳುವುದು ಮತ್ತು ಬರೆಯುವುದು.
- ಕವಿತೆಯನ್ನು ಅರ್ಥೈಸಿಕೊಂಡು ರಾಗ, ತಾಳ, ಭಾವಗಳನ್ನು ಪರಿಗಣಿಸಿ ಹಾಡುವುದು.
- ಕವಿತೆಯ ಆಶಯವನ್ನು ಅರಿತು ಆಸ್ವಾದಿಸುವುದು ಮತ್ತು ಆಸ್ವಾದನಾಟಿಪ್ಪಣಿಯನ್ನು ಬರೆಯುವುದು.
- ವಿಶೇಷಣಗಳು, ವಿಶೇಷ ಪ್ರಯೋಗಗಳು ಮೊದಲಾದುವುಗಳನ್ನು ಸೂಕ್ತವಾಗಿ ಸೇರಿಸಿ ವಾಕ್ಯಗಳನ್ನು ಬರೆಯುವುದು.
- ಪಾಠಭಾಗವನ್ನು ವ್ಯವಹಾರ ರೂಪಕ್ಕೆ ತಕ್ಕಂತೆ ನಿರರ್ಗಳವಾಗಿ ಸ್ವರಭಾರ ಮತ್ತು ಉಚ್ಚಾರಸ್ಪಷ್ಟತೆಯೊಂದಿಗೆ ಓದುವುದು.
- ಪತ್ರಿಕಾವರದಿ ಮತ್ತು ವಾರ್ತೆಗಳನ್ನು ವಿಶ್ಲೇಷಿಸಿ (ಯಾರು, ಯಾರಿಗೆ, ಎಲ್ಲಿ, ಏನು, ಹೇಗೆ, ಯಾಕೆ, ICT ಸಾಧ್ಯತೆ) ಪತ್ರ, ಭಿತ್ತಿಪತ್ರ, ಕರಪತ್ರ ಮೊದಲಾದುವುಗಳನ್ನು ರಚಿಸುವುದು.
- ಕಥೆ, ಕವಿತೆ, ವಿವರಣೆ, ಭಿತ್ತಿಪತ್ರಿಕೆ ಮೊದಲಾದ ಸೃಜನಾತ್ಮಕ ರಚನೆಯಲ್ಲಿ ತೊಡಗುವುದು ಮತ್ತು ಅವುಗಳನ್ನು ಸಂಗ್ರಹಿಸಿ ಸಂಚಿಕೆ, ಹಸ್ತಪತ್ರಿಕೆ, ಭಿತ್ತಿಪತ್ರಿಕೆಗಳನ್ನು ತಯಾರಿಸುವುದು.
- ಕಥೆ ಮತ್ತು ಕವಿತೆಗಳ ಸಾಲುಗಳ ಅರ್ಥವನ್ನು ತಿಳಿದುಕೊಂಡು ಪದಸೌಂದರ್ಯವನ್ನು ಆಸ್ವಾದಿಸಿ ಆಶಯವನ್ನು ಹೇಳುವುದು ಮತ್ತು ಬರೆಯುವುದು.
- ಪದಪ್ರಯೋಗ, ಭಾಷಾ ಪ್ರಯೋಗ, ಆಶಯ ಮೊದಲಾದವುಗಳನ್ನು ತನ್ನ ರಚನೆಯಲ್ಲಿ ಬಳಸಿಕೊಳ್ಳುವುದು.
- ಕೃತಿರಚನೆಯಲ್ಲಿ ಇತರರು ಬಳಸಿದ ಆಶಯ, ಪ್ರಯೋಗ, ನುಡಿಗಟ್ಟು ಮೊದಲಾದುವುಗಳನ್ನು ಹೋಲಿಸಿ ತನ್ನ ರಚನೆಗಳನ್ನು ಉತ್ತಮಪಡಿಸುವುದು.
- ಬರವಣಿಗೆಯಲ್ಲಿ ಬಳಕೆಯಾಗುವ ಲೇಖನ ಚಿಹ್ನೆಗಳನ್ನು ಗುರುತಿಸಿಕೊಂಡು ಅವುಗಳನ್ನು ತನ್ನ ರಚನೆಯಲ್ಲಿ ಬಳಸುವುದು.
- ಪಾಠಭಾಗದಲ್ಲಿ ಬಳಕೆಯಾದ ಪದಗಳನ್ನು ವಿಂಗಡಿಸಿ ಬರೆಯುವುದು ಮತ್ತು ಸೇರಿಸಿ ಬರೆಯುವುದು.
- ಓದುವ ಮೂಲೆ, ವಾಚನಾಲಯ ಮತ್ತು ಇತರೆಡೆಗಳಿಂದ ಲಭಿಸುವ ಓದುವ ಸಾಮಗ್ರಿಗಳನ್ನು ಓದಿ ದೊರೆತ ಅನುಭವಗಳನ್ನು ವಿಭಿನ್ನ ರೀತಿಯಲ್ಲಿ ಹಂಚಿಕೊಳ್ಳುವುದು.
- ಓದಿದ, ಆಲಿಸಿದ ವ್ಯವಹಾರ ರೂಪದ ಆಶಯವನ್ನು ತಿಳಿದುಕೊಂಡು ಇನ್ನೊಂದು ವ್ಯವಹಾರ ರೂಪವಾಗಿ ಬದಲಾಯಿಸುವುದು.
- ಮಾಹಿತಿ ತಂತ್ರಜ್ಞಾನವನ್ನು (ICT) ಉಪಯೋಗಿಸಿ, ಕೇಳಿಯೂ ನೋಡಿಯೂ ಆಶಯವನ್ನು ತಿಳಿದುಕೊಂಡು ಸ್ವಂತ ರಚನೆ ಮಾಡುವುದು ಮತ್ತು ಮಂಡಿಸುವುದು.





# 2. ನೆನೆಯುತ ನಲಿ





ನಮ್ಮ ಬದುಕಿನಲ್ಲಿ ಕಲೆ ಸಂಸ್ಕೃತಿಗಳು ಹಾಸುಹೊಕ್ಕಾಗಿವೆ. ಹಲವಾರು ಕಲೆಗಳು, ಕಲಾವಿದರು ಇತಿಹಾಸದಲ್ಲಿ ಸ್ಥಾನ ಪಡೆದಿದ್ದಾರೆ. ಅದೇ ರೀತಿ ಹಬ್ಬಗಳು ನಮ್ಮ ಸಂಸ್ಕೃತಿಯ ಭಾಗವೇ ಆಗಿದೆ. ಆದರೆ ಆಡಂಬರ ಸಲ್ಲದು. ಆಚರಣೆ ಅರ್ಥಪೂರ್ಣವಾಗಬೇಕು. ಬದುಕನ್ನು ಹಸನುಗೊಳಿಸಲು ಜನಮನದಲ್ಲಿ ಆತ್ಮೀಯ ಸಂಬಂಧಗಳು ಗಟ್ಟಿಗೊಳ್ಳಲು ಹಬ್ಬಗಳು ಸಾಧನಗಳಾಗಬೇಕು.





## ದೀಪಾವಳಿ

ಮತ್ತೆ ದೀಪಾವಳಿ ಹಬ್ಬ ಬರುತ್ತಿದೆ. ಈ ಸಲ ಹಬ್ಬವನ್ನು ಎಷ್ಟು ವಿಜೃಂಭಣೆಯಿಂದ ಆಚರಿಸಬೇಕು ಎಂದು ಎಲ್ಲ ಮಕ್ಕಳು ಲೆಕ್ಕಾಚಾರ ಹಾಕುತ್ತಿದ್ದರು. ಶಾಲೆಯಲ್ಲಿ ಒಂದು ಸ್ಪರ್ಧೆಯನ್ನು ಏರ್ಪಡಿಸಿದ್ದರು. ‘‘ಅರ್ಥಪೂರ್ಣವಾಗಿ ಯಾರು



ದೀಪಾವಳಿಯನ್ನು ಆಚರಿಸುತ್ತಾರೊ ಅವರಿಗೆ ವಿಶೇಷ ಬಹುಮಾನ ಕೊಡಲಾಗುವುದು. ಶಾಲೆಯ ಎಲ್ಲ ಬಗೆಯ ಅಭಿವೃದ್ಧಿಗಳಿಗೂ ಸಹಕರಿಸುತ್ತಿರುವ ಶಂಕರಯ್ಯನವರು ಇದನ್ನು ಕೊಡುತ್ತಾರೆ. ಆದ್ದರಿಂದ ಈಗಲೇ ಸಿದ್ಧತೆ ಮಾಡಿಕೊಂಡು ಹಬ್ಬವನ್ನು ಆಚರಿಸಿರಿ" ಮುಖ್ಯೋಪಾಧ್ಯಾಯರು ಘೋಷಿಸಿದರು. ಮಕ್ಕಳೆಲ್ಲ ಇದನ್ನು ಕೇಳಿ ಉತ್ಸಾಹದಿಂದ ಮನೆಗೆ ಬಂದರು.

ಅಂದು ಪುಟ್ಟನು ತನ್ನ ಅಜ್ಜನೊಂದಿಗೆ "ಅಜ್ಜಾ, ಅರ್ಥಪೂರ್ಣವಾಗಿ ಹಬ್ಬ ಆಚರಿಸುವುದು ಅಂದರೆ ಹೇಗೆ? ಅದಕ್ಕಾಗಿ ನಮಗೆ ಒಂದು



ಸ್ಪರ್ಧೆಯನ್ನಿಟ್ಟಿದ್ದಾರೆ. ಗೆದ್ದವರಿಗೆ ಚಿನ್ನದ ಪದಕ ಕೊಡುತ್ತಾರಂತೆ. ನನಗೆ ಹಬ್ಬದ ಆಚರಣೆಯ ಕುರಿತು ಒಂದಿಷ್ಟು ಹೇಳಿ" ಎಂದು ಕೇಳಿದನು.

"ಅದೇ ಕಣೋ, ಅಶ್ವಿನ ಮಾಸ ಕೃಷ್ಣಪಕ್ಷದ ತ್ರಯೋದಶಿಯು ದಿನ ಜಾಗಟೆ, ಶಂಖವಾದನಗಳೊಂದಿಗೆ ನೀರು ತಂದು ಸ್ನಾನದ ಹಂಡೆಗೆ ತುಂಬುತ್ತಾರೆ. ಚತುರ್ದಶಿಯಂದು ಚಂದ್ರೋದಯಕ್ಕೆ, ಎಣ್ಣೆ ಹಚ್ಚಿ, ಬಿಸಿ ಬಿಸಿ ನೀರಿನ ಅಭ್ಯಂಜನ ಮಾಡಬೇಕು. ಆ ದಿನ ಕಾಯಿಹಾಲು, ಕಡುಬು ತಯಾರಿಸುತ್ತಾರೆ. ಮರುದಿನ ಅಮವಾಸ್ಯೆ. ಅಂದು ಬಲೀಂದ್ರ ಹಾಕಿ ದೀಪ ಹಚ್ಚುತ್ತಾರೆ. ಪಾಡ್ಯದಂದು ಗೋಪೂಜೆ, ಲಕ್ಷ್ಮೀ ಪೂಜೆ ಮಾಡುತ್ತಾರೆ. ಅಂದಿನಿಂದಲೇ ತುಳಸಿ ಪೂಜೆ ಆರಂಭ. ಈ ದಿನಗಳಲ್ಲಿ ಮನೆಮನೆಗಳಲ್ಲಿ ದೀಪಗಳನ್ನು ಹಚ್ಚುತ್ತಾರೆ. ಪಟಾಕಿ ಸುಡುತ್ತಾರೆ." ಅಜ್ಜ ವಿವರಿಸಿದರು.

ಅಜ್ಜ ಹೇಳಿದ ಮಾತನ್ನು ಪುಟ್ಟ ಗೆಳೆಯರೊಂದಿಗೆ ಹೇಳಿದನು. ಅವರು ಬಿದ್ದುಬಿದ್ದು ನಕ್ಕರು. "ಅಯ್ಯೋ ಮಂಕೆ, ದೀಪಾವಳಿಯಂದು ಎಷ್ಟು ಪಟಾಕಿ ತಂದು ಸಿಡಿಸುತ್ತೀ, ಯಾವ ರೀತಿಯ ಉಡುಪು ಧರಿಸುತ್ತಿ ಎಂಬುದರಲ್ಲೆ ಅಡಗಿದೆ ಹಬ್ಬದ ಸಂಭ್ರಮ. ಇದನ್ನು ನೋಡಿಯೇ ಸ್ಪರ್ಧೆಯಲ್ಲಿ ಅಂಕ ಕೊಡುತ್ತಾರೆ ಹೊರತು ಬಲೀಂದ್ರ ಪೂಜೆಗೂ ಅಲ್ಲ, ಕಾಯಿಹಾಲು ಕಡುಬಿಗೂ ಅಲ್ಲ" ಎಂದರು.

ಪುಟ್ಟನಿಗೆ ಅವಮಾನವಾಯಿತು. ಮನೆಗೆ ಬಂದ ಪುಟ್ಟ ಅಮ್ಮನೊಂದಿಗೆ "ಅಮ್ಮಾ, ಹೋದ ಸಲ ಹಬ್ಬಕ್ಕೆ ಪಟಾಕಿಗೆಂದು ಒಂದು ಕಾಸನ್ನೂ ಕೊಡಲಿಲ್ಲ. ಈ ಸಲ ಮಾತ್ರ ಹಾಗಾಗಬಾರದು. ನನಗೆ ಪೇಟೆಯಲ್ಲಿ ಸಿಗುವ ಎಲ್ಲ ರೀತಿಯ ಪಟಾಕಿಗಳನ್ನು ತಂದು ಕೊಡಲೇಬೇಕು" ಎಂದು ಹಟಹಿಡಿದನು.

ಅಮ್ಮ ಪುಟ್ಟನ ತಲೆಸವರಿ, "ಹೀಗೆ ಹಟಹಿಡಿದರೆ ಹೇಗೆ ಮಗ? ಅಪ್ಪನಿಗೆ ಸರಿಯಾದ ಉದ್ಯೋಗವಿಲ್ಲದೆ ತುಂಬ ಸಮಯವಾಯಿತು. ಕೈಯಲ್ಲಿ ಕಾಸಿಲ್ಲ. ಈ ವರ್ಷ ಗೆಳೆಯರ ಮನೆಗೆ ಹೋಗಿ ಅವರು ಪಟಾಕಿ ಸುಡುವುದನ್ನು ನೋಡಿ ಸಂಭ್ರಮಪಟ್ಟುಕೊಂಡು ಬಾ. ಮುಂದಿನ ಸಲ ಖಂಡಿತ ಪಟಾಕಿ ತಂದು ಕೊಡಲು ಹೇಳುತ್ತೇನೆ. ಹಟಹಿಡಿದರೆ ಹಣ ಬೇಕಲ್ಲವೇ?" ಎಂದು ಹೇಳಿದಳು.

ಆದರೆ ಗೆಳೆಯರೆಲ್ಲ ದೀಪಾವಳಿ ಆಚರಣೆಯ ಸ್ಪರ್ಧೆಯಲ್ಲಿ ಭಾಗವಹಿಸುವಾಗ ತಾನೊಬ್ಬ ದೂರ ಉಳಿಯ ಬಾರದೆಂದು ಪುಟ್ಟ ನಿರ್ಧರಿಸಿದನು. ಆ ಊರಿನಲ್ಲಿ ಚೆನ್ನಯ್ಯ ಎಂಬ ಸಾಹುಕಾರರಿದ್ದರು. ಅವರ ಮಗನೂ ಅದೇ ಶಾಲೆಯಲ್ಲಿ ಕಲಿಯುತ್ತಿದ್ದನು. ಪುಟ್ಟನು ಅವರ ಮನೆಗೆ ಹೋಗಿ, "ನನಗೆ ಸ್ವಲ್ಪ ಹಣ ಬೇಕಾಗಿದೆ. ಕೊಡುತ್ತೀರಾ?" ಎಂದು ಕೇಳಿದನು.

ಪುಟ್ಟ ದಿಟ್ಟತನದಿಂದ ಹಣ ಕೇಳಿದಾಗ ಸಾಹುಕಾರರಿಗೆ ಆಶ್ಚರ್ಯ! "ಏನಯ್ಯ, ನಿನಗೆ ಯಾಕೆ ಹಣಬೇಕು? ಅಂತಹ ಅಗತ್ಯವೇನಿದೆ?"ಎಂದು ಕೇಳಿದರು.

"ದೀಪಾವಳಿ ಹಬ್ಬವನ್ನು ಚೆನ್ನಾಗಿ ಆಚರಿಸಿದರೆ ಶಾಲೆಯಲ್ಲಿ ಬಹುಮಾನ ಕೊಡುತ್ತಾರೆ. ಹಬ್ಬ ಆಚರಿಸಲು ಪಟಾಕಿ, ಹೊಸಬಟ್ಟೆ ಇವೆಲ್ಲ ಬೇಕಾಗುತ್ತವೆ. ಕೊಳ್ಳಲು ನನ್ನಲ್ಲಿ ಹಣವಿಲ್ಲ. ಆದ್ದರಿಂದ ತಮ್ಮಲ್ಲಿ ಕೇಳುತ್ತಿದ್ದೇನೆ" ಎಂದ ಪುಟ್ಟ.

"ನೋಡಪ್ಪಾ, ಶ್ರಮವಿಲ್ಲದೆ ಹಣ ಸಿಕ್ಕಿದರೆ ಅದರ ಬೆಲೆ ನಿನಗೆ ತಿಳಿಯುವುದಿಲ್ಲ. ಆದ್ದರಿಂದ ಅದೋ ಅಲ್ಲಿ ತೆಂಗಿನಕಾಯಿ ಸುಲಿಯಲು ರಾಶಿ ಹಾಕಿದ್ದೇನೆ. ಅದನ್ನು ಸುಲಿದರೆ ಅದಕ್ಕೆ ತಕ್ಕ ಕೂಲಿ ಕೊಡುತ್ತೇನೆ" ಎಂದು ಸಾಹುಕಾರರು ಹೇಳಿದರು.

ಪುಟ್ಟ ತೆಂಗಿನಕಾಯಿ ಸುಲಿಯಲು ಪ್ರಯತ್ನಿಸಿದ. ಎಳೆಯ ಕೈಗಳಲ್ಲಿ ಬೊಬ್ಬೆಗಳು ಬಂದು ಒಡೆದುವು. ನೋವನ್ನು ಸಹಿಸಿಕೊಂಡು ಕೆಲಸಮಾಡಿದ. ಸಂಜೆಯಾಯಿತು. "ಸಾಹುಕಾರರೇ, ಹತ್ತು ಕಾಯಿ ಸುಲಿದಿದ್ದೇನೆ" ಎಂದೆನ್ನುತ್ತಾ ಅವರೆದುರಲ್ಲಿ ನಿಂತ. ಸಾಹುಕಾರರು ಕೂಲಿಯಾಗಿ ಅವನಿಗೆ ಒಂದು ನಾಣ್ಯ ನೀಡಿ ಕಳುಹಿಸಿದರು.

ಮರುದಿನ ಪುಟ್ಟ ಶಾಲೆಗೆ ಹೋಗುವ ಮೊದಲು ಗವಳಿ ಗಣಪಯ್ಯನ ಮನೆಯಿಂದ ಹಾಲು ತೆಗೆದುಕೊಂಡು ಮನೆಮನೆಗೆ ಕೊಟ್ಟು ಬಂದ. ಗಣಪಯ್ಯ ಅವನ ದುಡಿಮೆಗೆ ಪ್ರತಿಫಲ ಎಂದು ಒಂದು ನಾಣ್ಯವನ್ನು ನೀಡಿದ.

ಹೀಗೆ ದುಡಿಮೆಯಿಂದ ಹಣ ಗಳಿಸುವ ಹಾದಿಯನ್ನು ಪುಟ್ಟ ಕಂಡುಕೊಂಡ. ತಾನು ಸಂಪಾದಿಸಿದ ಹಣವನ್ನೆಲ್ಲ ಒಂದು ಡಬ್ಬಿಯಲ್ಲಿ ಜೋಪಾನವಾಗಿ ಸಂಗ್ರಹಿಸಿದ. ಅವನ ಡಬ್ಬಿ ತುಂಬುತ್ತ ಬಂದಿತು.

ದೀಪಾವಳಿಯ ದಿನ ಸಾಹುಕಾರ ಚೆನ್ನಯ್ಯನವರು ತನ್ನ ಮಗನ ಸಲುವಾಗಿ ಸಂಭ್ರಮದ ಏರ್ಪಾಟುಗಳನ್ನು ಮಾಡಿದ್ದರು. ತನ್ನ ಮಗನಿಗೇ ಸ್ಪರ್ಧೆಯಲ್ಲಿ ಬಹುಮಾನ ಬರಬೇಕು ಎಂಬುದು ಅವರ ಆಸೆಯಾಗಿತ್ತು. ಬಹುಮಾನವನ್ನು ಗೌರವದ ಪ್ರಶ್ನೆಯಾಗಿ ಇರಿಸಿಕೊಂಡು ದುಬಾರಿ ಹಣ ಸುರಿದು ಪಟಾಕಿಗಳನ್ನು , ಬಾಣಬಿರುಸುಗಳನ್ನು, ಭಕ್ಷ್ಯ ಭೋಜ್ಯಾದಿಗಳನ್ನು ತರಿಸಿದ್ದರು. ಶಾಲೆಗೆ ಹೋಗಿ ಮೇಷ್ಟರೊಂದಿಗೆ " ನಮ್ಮ ಹುಡುಗನ ಹಬ್ಬದ ವೈಭವ ನೋಡಲು ಸ್ವತಃ ನೀವು ನಮ್ಮಲ್ಲಿಗೆ ಬರಬೇಕು" ಎಂದು ಆಹ್ವಾನಿಸಿದರು.

ಹಬ್ಬದ ದಿನ ಕತ್ತಲಾಗುತ್ತಿದ್ದಂತೆ ಸಾಹುಕಾರರ ಮನೆಯಲ್ಲಿ ದೀಪಗಳು ಬೆಳಗಿದವು. ಪಟಾಕಿಗಳ ಸದ್ದು ಮತಾಪುಗಳ ಬೆಳಕಿನಿಂದ ಊರಿಡೀ ಬೆಳಗಿತು. ಅಷ್ಟರಲ್ಲಿ ಒಂದು ಸಣ್ಣ ಅವಾಂತರ ನಡೆಯಿತು.

ಉರಿಯುವ ಪಟಾಕಿಯೊಂದು ಹಾರಿ ತುಸು ದೂರದಲ್ಲಿದ್ದ ಮನೆಯೊಂದರ ಹುಲ್ಲಿನ ಛಾವಣಿಗೆ ಬಿದ್ದಿತು. ಮನೆ ಧಗಧಗನೆ ಉರಿಯಲಾರಂಭಿಸಿತು. ಮನೆಯಲ್ಲಿದ್ದವರು ಹೊರಗೆ ಬರುವಷ್ಟರಲ್ಲಿ ಅರ್ಧಮನೆ ಸುಟ್ಟಿತು. ಎಲ್ಲರೂ ಸೇರಿ ಬೆಂಕಿ ನಂದಿಸಿದರು.

ಮನೆಯವರು ಹಾಹಾಕಾರ ಮಾಡುತ್ತ ಸಾಹುಕಾರರ ಮನೆಗೆ ಬಂದು ಗೋಳಿಟ್ಟರು. "ಬೆಂಕಿಗೆ ಕಾರಣ ನನ್ನ ಮನೆಯದೇ ಪಟಾಕಿ ಎನ್ನುವುದಕ್ಕೆ ಏನಾದರೂ ಗುರುತಿದೆಯಾ? ನಿಮ್ಮ ಕರ್ಮಕ್ಕೆ ನನ್ನನ್ನೇಕೆ ದೂರುತ್ತೀರಿ?" ಎಂದು ಸಾಹುಕಾರರು ನಿರ್ದಾಕ್ಷಿಣ್ಯವಾಗಿ ನುಡಿದರು.

ಮರುದಿನ ತಾನು ಸಂಗ್ರಹಿಸಿದ ಹಣದೊಂದಿಗೆ ಪುಟ್ಟ ಗೆಳೆಯರನ್ನು ಕೂಡಿಕೊಂಡು ಪಟಾಕಿ ತರಲು ಪೇಟೆಗೆ ಹೊರಟಿದ್ದ. ಬಡವನೊಬ್ಬನ ಮನೆ ಅರ್ಧಸುಟ್ಟದ್ದನ್ನು ನೋಡಿ ಅವನ ಕರುಳು ಚುರ್ರೆಂದಿತು. ಆ ಕೂಡಲೇ ಅವನ ನಿರ್ಧಾರ ಬದಲಾಯಿತು. ಗೆಳೆಯರನ್ನು ಕರೆದು ತನ್ನ ನಿರ್ಧಾರ ತಿಳಿಸಿದ. "ಒಂದು ದಿನದ ಸಂಭ್ರಮಕ್ಕೆ ಇಷ್ಟೊಂದು ಹಣ ಸುರಿದು ಪಟಾಕಿ ತಂದು ಸುಡಬೇಕೆ? ಇದರಿಂದ ನಮಗೆ ಅರೆಗಳಿಗೆಯ ಸಂತೋಷ ಸಿಗಬಹುದು. ಆದರೆ ಆ ಹಣವನ್ನು ಬಡವನಿಗೆ ಕೊಟ್ಟರೆ ತುಂಬ ಪ್ರಯೋಜನವಾಗುವುದು ಅಲ್ಲವೇ?" ಎಲ್ಲರಿಗೂ ಹೌದೆನ್ನಿಸಿತು. ಬಡವನ ಗುಡಿಸಲು ಮನೆಯಾಗಿ ಬದಲಾಗಲು ಮಕ್ಕಳು ಕಾಣಿಕೆ ಸಲ್ಲಿಸಿದರು.

ದೀಪಾವಳಿಯ ಸಾರ್ಥಕ ಆಚರಣೆಯ ಸ್ಪರ್ಧೆಯಲ್ಲಿ ಗೆದ್ದವರಿಗೆ ಬಹುಮಾನ ವಿತರಣೆ ಕಾರ್ಯಕ್ರಮ ಏರ್ಪಾಟಾಗಿತ್ತು. ಸಾಹುಕಾರ ಚೆನ್ನಯ್ಯನವರು ಸಭೆಗೆ ಬಂದಿದ್ದರು. ಮೇಷ್ಟರು "ಈ ಸ್ಪರ್ಧೆಯಲ್ಲಿ ಪುಟ್ಟ ಮತ್ತು ಅವನ ಗೆಳೆಯರು ಬಹುಮಾನಕ್ಕೆ ಅರ್ಹರಾಗಿದ್ದಾರೆ"ಎಂದರು.

ಸಾಹುಕಾರರಿಗೆ ಕೋಪ ಬಂತು. "ಈ ಹುಡುಗರು ನನ್ನ ಮಗನಷ್ಟು ಹಣ ಖರ್ಚು ಮಾಡಿ ಹಬ್ಬವನ್ನು ಆಚರಿಸಲು ಸಾಧ್ಯವಿದೆಯೇ?" ಎಂದು ಕೇಳಿದರು.

ಮೇಷ್ಟರು ಶಾಂತ ಧ್ವನಿಯಿಂದ "ಕ್ಷಮಿಸಬೇಕು. ನಿಮ್ಮಲ್ಲಿ ದೀಪಗಳು ಬೆಳಗುವಾಗ ಬಡವನೊಬ್ಬನ ಬದುಕಿನಲ್ಲಿ ಕತ್ತಲು ಆವರಿಸಿತು. ಆದರೆ ಈ ಮಕ್ಕಳು ಉರಿದು ಬೂದಿಯಾಗುವ ಹಣವನ್ನು ಒಟ್ಟುಗೂಡಿಸಿ ಆ ಬಡವನಿಗೆ ಕೊಟ್ಟು ಮತ್ತೆ ಅವನ ಮನೆಯಲ್ಲಿ ದೀಪ ಬೆಳಗಲು ಕಾರಣರಾದರು. ದೀಪಾವಳಿ ಸಾರ್ಥಕವಾಗುವುದು ನಮ್ಮ ಮನೆ ಮಾತ್ರ ಬೆಳಗುವುದರಿಂದ ಅಲ್ಲ ಸಾಹುಕಾರರೇ, ನಮ್ಮಿಂದಾಗಿ ಬೇರೆಯವರ ಮನೆಯೂ ಬೆಳಗಿದಾಗ ಅದೇ ಸಾರ್ಥಕ ಹಬ್ಬ" ಎಂದರು.

ಚೆನ್ನಯ್ಯನವರ ಕಣ್ಣುಗಳು ಮಂಜಾದವು. ಅವರು ಎದ್ದು ಬಂದು ಪುಟ್ಟನನ್ನು ಆಲಿಂಗಿಸಿದರು. ಎಲ್ಲರಿಗೂ ಪುಟ್ಟನ ಬಗ್ಗೆ ಅತೀವ ಅಭಿಮಾನವುಂಟಾಯಿತು.

## ಚಟುವಟಿಕೆಗಳು

### ಉತ್ತರ ಬರೆಯುವ

- ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ಶಾಲೆಯಲ್ಲಿ ಏರ್ಪಡಿಸಿದ ಸ್ಪರ್ಧೆ ಯಾವುದು?
2. ದೀಪಾವಳಿ ಸ್ಪರ್ಧೆಗೆ ಹಣ ಸಂಗ್ರಹಿಸಲು ಪುಟ್ಟನು ಏನು ಮಾಡಿದನು?
3. ಸಾಹುಕಾರರ ಮನೆಯಲ್ಲಿ ಸಿಡಿಸಿದ ಪಟಾಕಿಯಿಂದ ಆದ ಅನಾಹುತವೇನು?
4. ಪಟಾಕಿ ಸಿಡಿಸಲು ಸಂಗ್ರಹಿಸಿದ ಹಣವನ್ನು ಪುಟ್ಟ ಮತ್ತು ಗೆಳೆಯರು ಏನು ಮಾಡಿದರು?
5. ಸಾಹುಕಾರ ಚೆನ್ನಯ್ಯ ಕೋಪಿಸಿಕೊಂಡುದೇಕೆ?
6. ದೀಪಾವಳಿ ಸ್ಪರ್ಧೆಯ ಬಹುಮಾನ ಯಾರಿಗೆ ಲಭಿಸಿತು?

### ಬರೆಯುವ

- ಕೆಳಗಿನ ಮಾತುಗಳನ್ನು ಯಾರು ಯಾರಿಗೆ ಹೇಳಿದರು ಬರೆಯಿರಿ.

1. ಅಜ್ಜಾ ಸಂಭ್ರಮದಿಂದ ಹಬ್ಬ ಆಚರಿಸುವುದು ಎಂದರೆ ಹೇಗೆ?
2. ಅದೇ ಕಣೋ, ಅಶ್ವಿನ ಮಾಸದ ಕೃಷ್ಣಪಕ್ಷದ ತ್ರಯೋದಶಿಯ ದಿನ ಜಾಗಟೆ, ಶಂಖವಾದನದೊಂದಿಗೆ ನೀರು ತಂದು ಸ್ನಾನದ ಹಂಡೆಗೆ ತುಂಬಬೇಕು.
3. ಹೀಗೆ ಹಟ ಹಿಡಿದರೆ ಹೇಗೆ ಮಗ? ಅಪ್ಪನಿಗೆ ಉದ್ಯೋಗವಿಲ್ಲದೆ ತುಂಬ ಸಮಯವಾಯಿತು.
4. ನೋಡಪ್ಪಾ, ಶ್ರಮವಿಲ್ಲದೆ ಹಣಸಿಕ್ಕಿದರೆ ಅದರ ಬೆಲೆ ನಿನಗೆ ತಿಳಿಯುವುದಿಲ್ಲ.
5. ನಿಮ್ಮಲ್ಲಿ ದೀಪಗಳು ಬೆಳಗುವಾಗ ಬಡವನೊಬ್ಬನ ಬದುಕಿನಲ್ಲಿ ಕತ್ತಲು ಆವರಿಸಿತು.

### ಸಂದೇಶ ಬರೆಯುವ

- ನಿಮಗೆ ಶುಭಾಶಯ ಸಂದೇಶ ಕಳುಹಿಸುವುದು ತಿಳಿದಿದೆಯಲ್ಲವೇ? ನೀವೂ ನಿಮ್ಮ ಗೆಳೆಯರಿಗೆ ದೀಪಾವಳಿಗೆ ಕಳುಹಿಸುವುದಕ್ಕಾಗಿ ಶುಭಾಶಯ ಸಂದೇಶಗಳನ್ನು ಬರೆಯಿರಿ.

ಉದಾ: ಬೆಳಕಿನ ಹಬ್ಬ ಮನೆ ಮನಗಳನ್ನು ಬೆಳಗಲಿ.

.....................................................................

.....................................................................

.....................................................................

### ಅಭಿಪ್ರಾಯ ಹೇಳುವ

- ಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸುವುದು ಹೇಗೆ? ನಿಮ್ಮ ಅಭಿಪ್ರಾಯ ಹೇಳಿರಿ.

### ಪಟ್ಟಿ ಮಾಡುವ-ಪ್ರದರ್ಶಿಸುವ

- ಪಟಾಕಿ ಸಿಡಿಸುವಾಗ ವಹಿಸಬೇಕಾದ ಮುಂಜಾಗ್ರತೆಗಳು ಯಾವುವು? ಪಟ್ಟಿ ಮಾಡಿರಿ. ಭಿತ್ತಿಪತ್ರಿಕೆಯಲ್ಲಿ ಪ್ರದರ್ಶಿಸಿರಿ.

ಉದಾ : ಸಿಡಿಯುವ ಪಟಾಕಿಗಳನ್ನು ಕೈಯಲ್ಲಿ ಹಿಡಿಯಬಾರದು.

..........................................................................

### ಭಿತ್ತಿಪತ್ರ ರಚಿಸುವ

- ಪಟಾಕಿ ಸುಡುವಾಗ ಉಂಟಾಗುವ ಅನಾಹುತಗಳ ಕುರಿತು ಜಾಗೃತಿ ಮೂಡಿಸುವ ಘೋಷಣ ವಾಕ್ಯಗಳನ್ನು ಬರೆದು ಭಿತ್ತಿಪತ್ರ ತಯಾರಿಸಿರಿ.

ಉದಾ:

| ಸುಡುವ ಪಟಾಕಿ ದೂರವಿಡು<br>ಸಾಲು ಹಣತೆ ಹಚ್ಚಿಬಿಡು | ........................................<br>........................................ |
|---|---|

### ಸಂಗ್ರಹಿಸುವ

- ದೀಪಾವಳಿ ಸಂದರ್ಭದಲ್ಲಿ ಪಟಾಕಿ ಸಿಡಿಸಿದ್ದರಿಂದ ಆದ ಅನಾಹುತಗಳ ಕುರಿತಾದ ಪತ್ರಿಕಾ ವರದಿಗಳನ್ನು ಸಂಗ್ರಹಿಸಿರಿ. ಅದನ್ನು ತರಗತಿಯಲ್ಲಿ ಪ್ರದರ್ಶಿಸಿರಿ.

### ಪೂರ್ತಿಗೊಳಿಸುವ

- ಆವರಣದಲ್ಲಿ ಕೊಡಲಾದ ಪದ ಬಳಸಿ ವಾಕ್ಯವನ್ನು ಪೂರ್ತಿಗೊಳಿಸಿರಿ.
(ಗಳಗಳನೆ, ಪಟಪಟನೆ, ಛಟಛಟನೆ, ದಗದಗನೆ, ಪಳಪಳನೆ)

1. ಪಟಾಕಿಯು ................................. ಸಿಡಿಯಿತು.
2. ನಕ್ಷತ್ರ ಕಡ್ಡಿಯು ................................. ಹೊಳೆಯಿತು.

3. ಮರವು .................................. ಮುರಿಯಿತು.

4. ಬೆಂಕಿಯು .................................. ಉರಿಯಿತು.

5. ಬಡವನು .................................. ಅತ್ತನು.

### ಪಟ್ಟಿ ತಯಾರಿಸುವ

- ವಿವಿಧ ಹಬ್ಬದ ದಿನಗಳಂದು ವಿಶೇಷವಾಗಿ ತಯಾರಿಸುವ ತಿಂಡಿಗಳನ್ನು ಪಟ್ಟಿಮಾಡಿರಿ.

ಉದಾ: ದೀಪಾವಳಿ – ಕಡುಬು

ಚೌತಿ – ಮೋದಕ, ಅಪ್ಪ

................ – .........................

................ – ..........................

### ತಿಂಗಳು ತಿಳಿಯುವ

- ಚಾಂದ್ರಮಾನ, ಸೌರಮಾನ ತಿಂಗಳುಗಳ ಹೆಸರುಗಳನ್ನು ಕೇಳಿ ತಿಳಿಯಿರಿ. ಯಾವ ತಿಂಗಳಲ್ಲಿ ಯಾವ ಹಬ್ಬ ಬರುವುದು? ಕ್ಯಾಲೆಂಡರಿನ ಸಹಾಯದಿಂದ ಕಂಡುಹಿಡಿಯಿರಿ.

### ಕ್ರಮೀಕರಿಸುವ

- ಕ್ಯಾಲೆಂಡರ್ ವರ್ಷದ ಆಧಾರದಲ್ಲಿ ಕೆಳಗೆ ನೀಡಲಾದ ಹಬ್ಬಗಳನ್ನು ಈ ವರ್ಷ ಆಚರಿಸುವ ಕಾಲಕ್ಕನುಸಾರ ಕ್ರಮೀಕರಿಸಿರಿ.

ವಿಷು, ಓಣಂ, ಕ್ರಿಸ್ಮಸ್, ದೀಪಾವಳಿ, ಬಕ್ರೀದ್, ಗುಡ್‌ಫ್ರೈಡೇ, ಮೊಹರಂ, ಶ್ರೀಕೃಷ್ಣ ಜನ್ಮಾಷ್ಟಮಿ, ಈದ್–ಉಲ್–ಫಿತರ್.

### ಕಥೆ ರಚಿಸುವ

- ಕೆಳಗೆ ಕೊಡಲಾದ ಸೂಚನೆಗಳ ಸಹಾಯದಿಂದ ಒಂದು ಕಥೆ ರಚಿಸಿರಿ. ಸೂಕ್ತವಾದ ಶೀರ್ಷಿಕೆ ಕೊಡುವಿರಲ್ಲವೇ?

ದೀಪಾವಳಿಯ ಮೂರನೆ ದಿನ ......... ತೇಜ ರಸ್ತೆಯಲ್ಲಿ ಬರುತ್ತಿದ್ದ ............. ಎದುರು ಮನೆಯಿಂದ ರೊಯ್ಯೆಂದು ದುರುಸು ಪಟಾಕಿ ಬಂತು. ........... ತೇಜನಿಗೆ ತಾಗಿತು. .............. ಅವನನ್ನು ಆಸ್ಪತ್ರೆಗೆ ಸಾಗಿಸಿದರು ........

# ನೃತ್ಯಾಂಗನೆ ಕಲ್ಯಾಣಿಕುಟ್ಟಿ ಅಮ್ಮ



'ನೀವು ಅವಳನ್ನು ಹೊರಗಟ್ಟಿದರೂ ಅವಳು ಅನಾಥೆಯಾಗುವುದಿಲ್ಲ. ಅವಳೂ ಸೇರಿದಂತೆ ನನಗೆ ಒಂಬತ್ತು ಮಕ್ಕಳಿದ್ದಾರೆಂದು ಭಾವಿಸುತ್ತೇನೆ" ಎಂದು ಹುಡುಗಿಯ ತಂದೆಗೆ ಕಲಾಮಂಡಲಂನ ಆಸ್ಥಾನ ಕವಿ ವಳ್ಳತ್ತೋಳ್ ಪತ್ರ ಬರೆದು ತಿಳಿಸಿದರು. ಅಂದಿನ ಕಾಲದಲ್ಲಿ ಹೆಣ್ಣುಮಕ್ಕಳು ನೃತ್ಯ ಕಲಿಯುವುದೆಂದರೆ ಹೆತ್ತವರು ಸಮಾಜದಲ್ಲಿ ತಲೆತಗ್ಗಿಸಬೇಕಾಗುತ್ತಿತ್ತು. ಈ ಸವಾಲನ್ನು ಸ್ವೀಕರಿಸಿ ಆಕೆ ನೃತ್ಯವನ್ನು ಕಲಿಯಲು ಕಲಾಮಂಡಲಂಗೆ ಸೇರಿದಳು. ತಂದೆತಾಯಿ ಆ ಹುಡುಗಿಯನ್ನು ಆ ಕಾರಣಕ್ಕಾಗಿ ಮನೆಯಿಂದ ಹೊರಹಾಕಿದರು. ಆದರೆ ಆ ಹುಡುಗಿ ಸತತ ಅಭ್ಯಾಸದಿಂದ ನೃತ್ಯವನ್ನು ಕರಗತಮಾಡಿಕೊಂಡಳು. ಅವರೇ ನೃತ್ಯಕಲೆಯಲ್ಲಿ ಅದ್ಭುತ ಸಾಧನೆ ಮಾಡಿದ ಗುರು ನೃತ್ಯಾಂಗನೆ ಕಲಾಮಂಡಲಂ ಕಲ್ಯಾಣಿಕುಟ್ಟಿ ಅಮ್ಮ.

ಕಲ್ಯಾಣಿಕುಟ್ಟಿ ಅಮ್ಮ 1915 ರಲ್ಲಿ ಪನಂಗಾಟ್ ಗೋವಿಂದ ಮೆನನ್ ಮತ್ತು ಶ್ರೀದೇವಿ ಅಮ್ಮ ದಂಪತಿಗಳಿಗೆ ಮಗಳಾಗಿ ಜನಿಸಿದರು. ಇವರು ಎಂಟನೆಯ ತರಗತಿಯವರೆಗೆ ಓದಿದರು. ಬಾಲ್ಯದಿಂದಲೇ ಸಾಮಾನ್ಯವಾಗಿ ಮಧ್ಯಮ ವರ್ಗದ ಹೆಣ್ಣುಮಕ್ಕಳಿಗೆ ಎದುರಾಗುತ್ತಿದ್ದ ಸಾಮಾಜಿಕ ಕಟ್ಟುಪಾಡುಗಳನ್ನು ಮೀರಿ ನಡೆಯುವ ಸಾಮರ್ಥ್ಯವನ್ನು ಹೊಂದಿದ್ದ ಕಲ್ಯಾಣಿಕುಟ್ಟಿ ಅಮ್ಮ ಸಂಸ್ಕೃತವನ್ನೂ ಕಲಿತರು. ಪುಸ್ತಕ ಸಂಗ್ರಹ, ಕವಿತಾರಚನೆ, ನಾಟಕಾಭಿನಯ, ಯೋಗಾಭ್ಯಾಸ, ಕಳರಿಪಯಟ್ಟು ಇತ್ಯಾದಿ ಕಲೆಗಳನ್ನು ಕರಗತ ಮಾಡಿಕೊಂಡರು. ಅವರು 1937 ರಲ್ಲಿ ಕೇರಳ ಕಲಾಮಂಡಲಂಗೆ ತೆರಳಿದರು.

ಕಲಾಮಂಡಲಂ ಸಂಸ್ಥೆಯನ್ನು ನಿರ್ವಹಿಸುತ್ತಿದ್ದ ಅಸ್ಥಾನ ಕವಿ ವಳ್ಳತ್ತೋಳ್ ಕಲ್ಯಾಣಿ ಕುಟ್ಟಿಯಮ್ಮನ ಕಲಾ ಸಾಮರ್ಥ್ಯವನ್ನು ನೋಡಿ ಬೆಕ್ಕಸಬೆರಗಾದರು. ತಮ್ಮ ಶಿಷ್ಯವರ್ಗದಲ್ಲಿ ಕಲ್ಯಾಣಿ ಕುಟ್ಟಿಯಮ್ಮನನ್ನು ಸೇರಿಸಿಕೊಂಡರು. ತಮ್ಮ ಮಗಳು 'ಮೋಹಿನಿಯಾಟ್ಟಕಾರಿ'ಆಗಬಾರದೆಂದು ಹಠಹಿಡಿದ ಹೆತ್ತವರು ಮನೆಯಿಂದ ಹೊರಹಾಕಿದ್ದು ಅಂದು ಸಂಪ್ರದಾಯಸ್ಥರು ನೃತ್ಯ ಕಲೆಯ ಕಡೆಗೆ ತೋರುತ್ತಿದ್ದ ತಿರಸ್ಕಾರವನ್ನು ಸೂಚಿಸುತ್ತದೆ.

ಕಲ್ಯಾಣಿಕುಟ್ಟಿ ಅಮ್ಮ ಕಲಾಮಂಡಲಂನಲ್ಲಿ ಕಥಕಳಿ, ಭರತನಾಟ್ಯ ಮತ್ತು ಮೋಹಿನಿಯಾಟ್ಟಂನ

ಆರಂಭಿಕ ಪಾಠಗಳನ್ನು ಕಲಿತರು. ಸಮಾಜ ಕಡೆಗಣ್ಣಿನಿಂದ ನೋಡುತ್ತಿದ್ದ ಕಾರಣ ನೃತ್ಯಕಲಿಸಲು ಅನುಭವಿ ಗುರುಗಳ ಅಭಾವ ಕಂಡುಬಂದಿತು. ಈ ಸಮಸ್ಯೆಯನ್ನು ಪರಿಹರಿಸಲು ಪ್ರಯತ್ನಿಸಿದ ಕಲ್ಯಾಣಿಕುಟ್ಟಿ ಅಮ್ಮ ಮೋಹಿನಿಯಾಟ್ಟಂ ನೃತ್ಯಕಲೆಯನ್ನು ಪುನರುಜ್ಜೀವನಗೊಳಿಸಿದರು.

1940ರಲ್ಲಿ ಕಲ್ಯಾಣಿಕುಟ್ಟಿ ಅಮ್ಮ ಕಲಾಮಂಡಲಂನಲ್ಲಿ ಕಥಕಳಿ ಕಲೆಯನ್ನು ಕಲಿಸುತ್ತಿದ್ದ ಕೃಷ್ಣನ್ ನಾಯರ್‌ರನ್ನು ವಿವಾಹವಾದರು. ಆ ಬಳಿಕ ಅನೇಕ ನೃತ್ಯ ಸಂಸ್ಥೆಗಳಲ್ಲಿ ಶಿಕ್ಷಕಿಯಾಗಿ ಸೇವೆ ಸಲ್ಲಿಸಿದರು. ಅವರು 1942 ರಲ್ಲಿ 'ಕೇರಳ ಕಲಾಲಯಂ' ನೃತ್ಯ ಶಾಲೆಯನ್ನು ಸ್ಥಾಪಿಸಿದರು.

ಹೀಗೆ ಕಲ್ಯಾಣಿಕುಟ್ಟಿ ಅಮ್ಮ ಮೋಹಿನಿಯಾಟ್ಟಂ ನೃತ್ಯ ಕಲೆಯನ್ನು ಊರ್ಜಿತಗೊಳಿಸಲು ಬಹಳವಾಗಿ ಶ್ರಮಿಸಿದರು. ಮೋಹಿನಿಯಾಟ್ಟವನ್ನು ಅವರು ಶಾಸ್ತ್ರೀಯವಾಗಿ ವರ್ಗೀಕರಣ ಮಾಡಿದರು. ಇದರಿಂದಾಗಿ ಮೋಹಿನಿಯಾಟ್ಟಂನಲ್ಲಿ 'ಕಲ್ಯಾಣಿ ಕುಟ್ಟಿ ಅಮ್ಮ ಶೈಲಿ' ಎಂಬುದು ಪ್ರತ್ಯೇಕವಾಗಿ ಗುರುತಿಸುವಂತಾಯಿತು.

ಕಲ್ಯಾಣಿ ಕುಟ್ಟಿ ಅಮ್ಮ ಹಲವು ಪ್ರಶಸ್ತಿಗಳನ್ನು ಪಡೆದರು. ಕೇಂದ್ರ ಹಾಗೂ ರಾಜ್ಯ ಸಂಗೀತ ಅಕಾಡೆಮಿ ಪ್ರಶಸ್ತಿ, ಫೆಲೋಶಿಪ್‌ಗಳು, ಮಧ್ಯಪ್ರದೇಶ ಸರಕಾರದ 'ಕಾಳಿದಾಸ ಸಮ್ಮಾನ' ಪ್ರಶಸ್ತಿಯನ್ನೂ ಅವರು ಪಡೆದರು. ಮೋಹಿನಿಯಾಟ್ಟಂ ಕುರಿತಾಗಿ ಎರಡು ಪುಸ್ತಕಗಳನ್ನು ಬರೆದರು. ನೃತ್ಯಕಲೆಯನ್ನು ತಿರಸ್ಕಾರದಿಂದ ಕಾಣುತ್ತಿದ್ದ ಕಾಲದಲ್ಲಿ ಮೋಹಿನಿಯಾಟ್ಟಂ ನೃತ್ಯಕಲೆಗಳನ್ನು ಸುಧಾರಿಸುವಲ್ಲಿ ಕಲ್ಯಾಣಿಕುಟ್ಟಿ ಅಮ್ಮ ತಮ್ಮ ಬದುಕನ್ನು ಮುಡಿಪಾಗಿಟ್ಟರು. ಇದಕ್ಕಾಗಿ ಅವರು ಮಾಡಿದ ಸಾಧನೆ ಅಪೂರ್ವವಾದುದು.



1999 ಮೇ 12 ರಂದು ಕಲ್ಯಾಣಿಕುಟ್ಟಿ ಅಮ್ಮ ವಿಧಿವಶರಾದರು. ಇವರ ನಿಧನದಿಂದಾಗಿ ಮೋಹಿನಿಯಾಟ್ಟಂ ನೃತ್ಯಕಲೆಯ ಒಂದು ದೀರ್ಘ ಪರಂಪರೆ ಕೊನೆಗೊಂಡಂತಾಯಿತು ಎಂದು ಭಾವಿಸಬಹುದು.

## ಚಟುವಟಿಕೆಗಳು

### ಉತ್ತರ ಬರೆಯುವ

- ಕೆಳಗಿನ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

  1) ಕಲ್ಯಾಣಿ ಕುಟ್ಟಿ ಅಮ್ಮನ ತಂದೆಗೆ ವಳ್ಳತ್ತೋಳ್ ಏನೆಂದು ಪತ್ರ ಬರೆದರು?
  2) ವಳ್ಳತ್ತೋಳ್ ಮತ್ತು ಪರಿವಾರ ಬೆಕ್ಕಸ ಬೆರಗಾದುದೇಕೆ?
  3) ಕಲ್ಯಾಣಿ ಕುಟ್ಟಿ ಅಮ್ಮನಿಗೆ ದೊರೆತ ಪ್ರಶಸ್ತಿಗಳು ಯಾವುವು?
  4) ಕಲ್ಯಾಣಿ ಕುಟ್ಟಿ ಅಮ್ಮ ಕರಗತ ಮಾಡಿಕೊಂಡ ಕಲೆಗಳು ಯಾವುವು?

### ಕ್ರಮೀಕರಿಸಿ ಬರೆಯುವ

- ಕೆಳಗಿನ ವಾಕ್ಯಗಳನ್ನು ಪಾಠದಲ್ಲಿ ಬಂದಂತೆ ಕ್ರಮೀಕರಿಸಿ ಬರೆಯಿರಿ.
  - 1999 ಮೇ 12ರಂದು ಕಲ್ಯಾಣಿಕುಟ್ಟಿ ಅಮ್ಮ ವಿಧಿವಶರಾದರು.
  - ಕಲ್ಯಾಣಿಕುಟ್ಟಿ ಅಮ್ಮ ಮಧ್ಯಪ್ರದೇಶ ಸರಕಾರದ ಕಾಳಿದಾಸ ಸಮ್ಮಾನ ಪ್ರಶಸ್ತಿ ಪಡೆದರು.
  - 1942ರಲ್ಲಿ ಕೇರಳ ಕಲಾಲಯಂ ನೃತ್ಯಶಾಲೆಯನ್ನು ಸ್ಥಾಪಿಸಿದರು.
  - 1940ರಲ್ಲಿ ಕಲ್ಯಾಣಿಕುಟ್ಟಿ ಅಮ್ಮ ಕೃಷ್ಣನ್ ನಾಯರ್ ಅವರನ್ನು ವಿವಾಹವಾದರು.
  - 1937ರಲ್ಲಿ ಕಲ್ಯಾಣಿಕುಟ್ಟಿ ಅಮ್ಮ ಕಲಾಮಂಡಲಕ್ಕೆ ತೆರಳಿದರು.
  - ಕಲ್ಯಾಣಿಕುಟ್ಟಿ ಅಮ್ಮ 1915ರಲ್ಲಿ ಜನಿಸಿದರು.

### ವಿರೋಧಾರ್ಥ ಪದ ಬರೆಯುವ

- ಕೊಟ್ಟಿರುವ ಪದಗಳ ವಿರೋಧಾರ್ಥ ಪದಗಳನ್ನು ಪಾಠಭಾಗದಿಂದ ಆಯ್ದು ಬರೆಯಿರಿ.

  ಅಸಾಮರ್ಥ್ಯ, ಪುರಸ್ಕಾರ, ಅನೂರ್ಜಿತ, ಅಗೌರವ, ಅವಮಾನ.

### ಊಹಿಸಿ ಬರೆಯುವ

- ಕಲ್ಯಾಣಿಕುಟ್ಟಿ ಅಮ್ಮ ಕಲಾಮಂಡಲಂ ಸೇರದೇ ಇರುತ್ತಿದ್ದರೆ ಏನಾಗುತ್ತಿತ್ತೆಂದು ಊಹಿಸಿ ಬರೆಯಿರಿ.

### ಆಮಂತ್ರಣ ಪತ್ರಿಕೆ ತಯಾರಿಸುವ

- ನಿಮ್ಮ ಶಾಲಾ ಕಲೋತ್ಸವವನ್ನು ಖ್ಯಾತ ಮೋಹಿನಿಯಾಟ್ಟಂ ಕಲಾವಿದೆ ಉದ್ಘಾಟಿಸಲಿದ್ದಾರೆ ಎಂದು ಭಾವಿಸಿರಿ. ಕಾರ್ಯಕ್ರಮಕ್ಕೆ ಹೆತ್ತವರನ್ನು ಆಮಂತ್ರಿಸುವುದಕ್ಕೆ ಅಗತ್ಯವಾದ ಆಮಂತ್ರಣ ಪತ್ರಿಕೆ ತಯಾರಿಸಿರಿ.

### ವರದಿ ಬರೆಯುವ

- ನಿಮ್ಮ ಶಾಲೆಯಲ್ಲಿ ಜರಗಿದ ಶಾಲಾ ಕಲೋತ್ಸವ ಅಥವಾ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದ ವರದಿಯನ್ನು ಬರೆಯಿರಿ. ಅದನ್ನು ಶಾಲಾಬ್ಲೋಗ್‌ನಲ್ಲಿ ಪ್ರಕಟಿಸಿರಿ.

### ವಾಕ್ಯ ರಚಿಸುವ

- ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿ ಅಡಿಗೆರೆ ಎಳೆದ ಪದಗಳನ್ನು ಬಳಸಿಕೊಂಡು ಸ್ವಂತ ವಾಕ್ಯ ರಚಿಸಿರಿ.

> ಜವಹರಲಾಲ ನೆಹರೂ ಸ್ವಾತಂತ್ರ್ಯ ಹೋರಾಟದ ಮುಂಚೂಣಿ ನಾಯಕರಲ್ಲಿ ಒಬ್ಬರು. ಅವರು ದೇಶದ ಪುನರುಜ್ಜೀವನಕ್ಕಾಗಿ ಶ್ರಮಿಸಿದರು. 17 ವರ್ಷಗಳ ಕಾಲ ಪ್ರಧಾನಮಂತ್ರಿಯಾಗಿ ದುಡಿದು ಆಧುನಿಕ ಭಾರತದ ರೂವಾರಿಯೆನಿಸಿದರು. ನೆಹರೂರವರ ಈ ಸಾಧನೆಯಿಂದ ಪ್ರಪಂಚದಾದ್ಯಂತ ಇವರನ್ನು ಗುರುತಿಸುವಂತಾಯಿತು. ನೆಹರೂರವರು 1964ನೇ ಮೇ 27ರಂದು ವಿಧಿವಶರಾದರು.

### ಚರ್ಚಿಸುವ

- ಕಲ್ಯಾಣಿಕುಟ್ಟಿ ಅಮ್ಮನನ್ನು ಹೆತ್ತವರು ಮನೆಯಿಂದ ಹೊರಹಾಕಿದ್ದು ಸರಿಯೇ? ಚರ್ಚಿಸಿರಿ.

### ಆಲ್ಬಂ ತಯಾರಿಸುವ

- ಭರತನಾಟ್ಯ, ಯಕ್ಷಗಾನ, ಮೋಹಿನಿಯಾಟ್ಟಂ, ಕಥಕಳಿ, ಒಪ್ಪನ, ಕೂಚುಪುಡಿ ಮೊದಲಾದ ಕಲಾಪ್ರಕಾರಗಳ ಚಿತ್ರ ಸಂಗ್ರಹಿಸಿ ಆಲ್ಬಂ ತಯಾರಿಸಿರಿ.

# ಆಷಾಢ ಮಾಸ ಬಂದೀತವ್ವ

ಆಷಾಢ ಮಾಸ ಬಂದೀತವ್ವ
ಅಣ್ಣ ಬರಲಿಲ್ಲ ಕರಿಯಾಕ
ಸುವ್ವಾಲಾಲೀ......... ಸುವ್ವಾಲೇ.........
ಸುವ್ವಾಲಾಲೀ......... ಸುವ್ವಾಲೇ..........
ಹೊತ್ತು ಮುಳುಗೀ ಕತ್ತಲಾಗಿ
ದೀಪ ಹಚ್ಚೋ ವೇಳೆಯಾಗಿ
ಅಣ್ಣಾ ಬರಲಿಲ್ಲ ಕರಿಯಾಕ
ಅಣ್ಣಾ ಬರಲಿಲ್ಲ ಕರಿಯಾಕ
ಸುವ್ವಾಲಾಲೀ....... ಸುವ್ವಾಲೇ........
ಸುವ್ವಾಲಾಲೀ......... ಸುವ್ವಾಲೇ........ ।।ಆಷಾಢ।।



ರೊಟ್ಟೀ ಬುತ್ತೀ ಮಾಡಿಕೊಂಡು
ಎತ್ತಿನ ಬಂಡೀ ಹೂಡಿಕೊಂಡು
ಎಂದೂ ಹೋಗೇನಾ ತವರೀಗೆ
ಎಂದೂ ಹೋಗೇನಾ ತವರೀಗೆ
ಸುವ್ವಾಲಾಲೀ.......... ಸುವ್ವಾಲೇ
ಸುವ್ವಾಲಾಲೀ........... ಸುವ್ವಾಲೇ ।।ಆಷಾಢ।।

ಹಿಂದಿನ ಹೊತ್ತು ಹಿಂದೇ ಇರಲೀ
ಮುಂದಿನ ಹೊತ್ತು ಇಂದೇ ಬರಲಿ
ಎಂದೂ ನೋಡೆನಾ ತಾಯೀಯ ಮೋರೆ
ಎಂದೂ ನೋಡೆನಾ ತಾಯೀಯ ಮೋರೆ
ಸುವ್ವಾಲಾಲೀ ........ ಸುವ್ವಾಲೇ
ಸುವ್ವಾಲಾಲೀ ........ ಸುವ್ವಾಲೇ ।।ಆಷಾಢ।।

## ಚಟುವಟಿಕೆಗಳು

### ರಾಗವಾಗಿ ಹಾಡುವ

- ಈ ಪದ್ಯವನ್ನು ರಾಗವಾಗಿ ಹಾಡಿರಿ.

### ಉತ್ತರ ಬರೆಯುವ

- ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

  1) ತಂಗಿಯ ಆತಂಕ ಹೆಚ್ಚಲು ಕಾರಣವೇನು?

  2) ತವರಿಗೆ ಹೇಗೆ ಪ್ರಯಾಣ ಮಾಡಬೇಕೆಂದು ತಂಗಿ ಬಯಸುತ್ತಾಳೆ?

  3) ತವರಿಗೆ ಯಾಕೆ ಹೋಗಬೇಕೆಂದು ತಂಗಿ ಬಯಸುತ್ತಾಳೆ?

### ಆಸ್ವಾದನ ಟಿಪ್ಪಣಿ ಬರೆಯುವ

- ಈ ಪದ್ಯವನ್ನು ಹಾಡಿ ಆಸ್ವಾದಿಸಿದಿರಲ್ಲವೇ? ಇದರ ಆಸ್ವಾದನ ಟಿಪ್ಪಣಿಯನ್ನು ಹೀಗೂ ಬರೆಯಬಹುದು. ಇದನ್ನು ಓದಿ 'ಬರ್ತಾಳೆ ರತುನ' ಪದ್ಯದ ಆಸ್ವಾದನ ಟಿಪ್ಪಣಿ ಬರೆಯಿರಿ.

'ಆಷಾಢ ಮಾಸ ಬಂದೀತವ್ವ' ಒಂದು ಜನಪದ ಹಾಡಾಗಿದೆ. ಇದರಲ್ಲಿ 22 ಸಾಲುಗಳಿವೆ. ಸುವ್ವ, ಲಾಲೀ.... ಸುವ್ವಾಲೀ....ಎಂಬ ಸಾಲು ಮತ್ತೆ ಮತ್ತೆ ಬರುತ್ತದೆ. ಈ ಪದ್ಯವನ್ನು ರಾಗವಾಗಿ ಹಾಡಬಹುದು. ಇದು ಪ್ರಾಸ ಪದಗಳಿಂದ ಕೂಡಿದೆ.

ಆಷಾಢ ತಿಂಗಳಲ್ಲಿ ಅಣ್ಣ ಬರುತ್ತಾನೆ. ನಾನು ಅವನೊಂದಿಗೆ ತೌರಿಗೆ ಹೋಗುತ್ತೇನೆ, ಯಾವಾಗ ನನ್ನ ಅಮ್ಮನನ್ನು ಕಾಣುವೆನೋ ಎಂಬ ಕಾತರದಿಂದ ತಂಗಿ ಗಂಡನ ಮನೆಯಲ್ಲಿ ಕಾಯುತ್ತಾಳೆ. ಹೊತ್ತು ಕತ್ತಲಾದರೂ ಅಣ್ಣ ಯಾಕೆ ಬರಲಿಲ್ಲವೆಂದು ಬೇಸರ, ಆತಂಕ ವ್ಯಕ್ತಪಡುತ್ತಾಳೆ. ನಾವಾದರೂ ಬರುತ್ತೇವೆ ಎಂದವರು ಬಾರದಿದ್ದರೆ ಹೀಗೆಯೇ ಅಲ್ಲವೇ? ಹೆಣ್ಣಿನ ತೌರಿನ ಹಂಬಲವನ್ನು ಕವಿ ಇಲ್ಲಿ ಅತ್ಯಂತ ಮಧುರವಾಗಿ ತಿಳಿಸಿದ್ದಾರೆ. ನನಗೆ ಈ ಹಾಡು ಇಷ್ಟವಾಯಿತು. ಎಷ್ಟೋ ಬಾರಿ ಅಜ್ಜಿ ಮನೆಯವರ ದಾರಿ ಕಾದದ್ದು ನೆನಪಾಯಿತು.

# ಬರ್ತಾಳೆ ರತುನ

ಆಹಾ ಅಮ್ಮಗ ಆಹಾ ಜಮ್ಮಗ
ಅಮ್ಮಗ ಜಮ್ಮಗ ಜಮ್ಮಗದಿಂದ
ಬಂದಾಳೆ.... ರತುನ.....
ಬಂದಾಳೆ ರತುನ ತಿರುಗಿಸ್ತಾಳೆ ಸೊಂಟಾನ ।
ಸೊಂಟಕೆ ಪಟ್ಟಿಯ ಹಾಕ್ತಾಳೆ ರತುನ
ಹಾಕ್ಯಾಳೆ ರತುನ ತಿರುಗಿಸ್ತಾಳೆ ಸೊಂಟಾನ।
ಕೈಯಿೀಗೆ ಕೈಬಳೆ ಹಾಕ್ತಾಳೆ ರತುನ
ಹಾಕ್ತಾಳೆ ರತುನ ತಿರುಗಿಸ್ತಾಳೆ ಕೈಯನ್ನ ।
ಕಾಲಿಗೆ ಕಾಲ್ಗೆಜ್ಜೆ ಹಾಕ್ತಾಳೆ ರತುನ
ಹಾಕ್ಯಾಳೇ ರತುನ ತಿರುಗಿಸ್ತಾಳೆ ಕಾಲನ್ನ ।
ಕತ್ತಿಗೆ ಅಡ್ಡಿಣೆ ಹಾಕ್ತಾಳೆ ರತುನ
ಹಾಕ್ಯಾಳೆ ರತುನ ತಿರುಗಿಸ್ತಾಳೆ ಕತ್ತನ್ನ ।

### ಚರ್ಚಿಸುವ

- ಹಿಂದಿನ ಕಾಲದಲ್ಲಿ ಕತ್ತಲಾಗುವುದಕ್ಕೆ ಮುನ್ನ ಮನೆ ಸೇರದಿದ್ದರೆ ಆತಂಕವಾಗುತ್ತಿತ್ತು. ಏಕಿರಬಹುದು? ಚರ್ಚಿಸಿರಿ.

### ಸಂಗ್ರಹಿಸುವ

- ಅಣ್ಣತಂಗಿಯರ ಪ್ರೀತಿ, ವಾತ್ಸಲ್ಯವನ್ನು ಸಾರುವ ಜನಪದ ಗೀತೆಗಳನ್ನು ಸಂಗ್ರಹಿಸಿ ತರಗತಿಯಲ್ಲಿ ಹಾಡಿರಿ.

# ಅರ್ಥಕೋಶ

| | | |
|---|---|---|
| ಅತೀವ | – | ತುಂಬ, ಅತ್ಯಧಿಕ |
| ಅಪೂರ್ವ | – | ಅಪರೂಪವಾದ |
| ಅಭಾವ | – | ಇಲ್ಲದಿರುವುದು |
| ಅಭಿಮಾನ | – | ಗೌರವ |
| ಅಭಿವೃದ್ಧಿ | – | ಶ್ರೇಯಸ್ಸು, ಏಳಿಗೆ |
| ಅಭ್ಯಂಜನ | – | ಅಭ್ಯಂಗ, ಎಣ್ಣೆಸ್ನಾನ |
| ಅರೆಗಳಿಗೆ | – | ಸ್ವಲ್ಪ ಹೊತ್ತು, ಅರ್ಧಹೊತ್ತು |
| ಅವಮಾನ | – | ಅಗೌರವ, ಅಪಮಾನ |
| ಅವಸಾನ | – | ಕೊನೆ, ಅಂತ್ಯ |
| ಆವರಿಸು | – | ಹಬ್ಬು, ಹರಡು |
| ಆಷಾಢ | – | ಚಾಂದ್ರಮಾನದಲ್ಲಿ ನಾಲ್ಕನೆಯ ತಿಂಗಳು |
| ಆಸ್ಥಾನ ಕವಿ | – | ರಾಜದರ್ಬಾರಿನಲ್ಲಿರುವ ಕವಿ |
| ಆಹ್ವಾನ | – | ಆಮಂತ್ರಣ |
| ಉತ್ಸಾಹ | – | ಹುರುಪು, ಆಸಕ್ತಿ |
| ಉದ್ಯೋಗ | – | ವೃತ್ತಿ |
| ಊರ್ಜಿತ | – | ಅಭಿವೃದ್ಧಿ |
| ಏರ್ಪಾಟು | – | ತಯಾರಿ, ಸಿದ್ಧತೆ |
| ಕಟ್ಟಪುಣಿ | – | ಅಗಲವಾದ ಗದ್ದೆಯ ಹುಣಿ |
| ಕರಗತ | – | ಸ್ವಾಧೀನಪಡಿಸು, ತನ್ನದಾಗಿಸು |
| ಕರಿಯಾಕ | – | ಕರೆಯಲು |
| ಕಾರ್ಯಕ್ರಮ | – | ಕಾರ್ಯಗಳ ವೇಳಾ ಪತ್ರಿಕೆ |
| ಕಾಸು | – | ದುಡ್ಡು, ಹಣ |
| ಕೂಲಿ | – | ದುಡಿಮೆಗಾಗಿ ಕೊಡುವ ಹಣ |
| ಖಂಡಿತ | – | ನಿಶ್ಚಿತವಾಗಿ |
| ಗವಳಿ | – | ಗೊಲ್ಲ |
| ಗಳಿಕೆ | – | ಆದಾಯ |
| ಗುರುತಿಸು | – | ಗುರುತು ಹಿಡಿ, ಗೊತ್ತು ಹಚ್ಚು |
| ಗೋಳಿಡು | – | ಗೋಳಾಡು, ಜೋರಾಗಿ ಅಳು |
| ಘೋಷಿಸು | – | ಸಾರು |
| ಛಾವಣಿ | – | ಮಾಡು |
| ಜೋಡೆತ್ತು | – | ಎರಡು ಎತ್ತುಗಳು |
| ಪ್ರಶಸ್ತಿ | – | ಗೌರವ, ಬಹುಮಾನ |
| ಬೆರಗು | – | ಆಶ್ಚರ್ಯ |
| ಭಕ್ಷ್ಯಭೋಜ್ಯ | – | ತಿಂಡಿ ತಿನಿಸು |
| ಮತಾಪು | – | ಸುಡುಮದ್ದು |
| ಮಾರ್ದನಿಸು | – | ಪ್ರತಿಧ್ವನಿಸು |
| ಮುಡಿಪು | – | ಮೀಸಲು |

# ಕಲಿಕಾ ಸಾಧನೆಗಳು

- ಹೊಸ ಪ್ರಯೋಗಗಳು, ಪದಗಳು, ಗಾದೆಗಳು, ನುಡಿಗಟ್ಟುಗಳು ಮೊದಲಾದುವುಗಳನ್ನು ಉಪಯೋಗಿಸಿಕೊಂಡು ಸಂದರ್ಭಾನುಸಾರ ಮಾತನಾಡುವುದು.
- ಕಥೆ, ಕವಿತೆ, ವಿವರಣೆ, ವರ್ಣನೆ ಮೊದಲಾದುವುಗಳನ್ನು ಆಲಿಸಿ ಮತ್ತು ಓದಿ ತನ್ನದೇ ಆದ ರೀತಿಯಲ್ಲಿ ಹೇಳುವುದು ಮತ್ತು ಬರೆಯುವುದು.
- ಕವಿತೆಯನ್ನು ಅರ್ಥೈಸಿಕೊಂಡು ರಾಗ, ತಾಳ, ಭಾವಗಳನ್ನು ಪರಿಗಣಿಸಿ ಹಾಡುವುದು.
- ಕವಿತೆಯ ಆಶಯವನ್ನು ಅರಿತು ಆಸ್ವಾದಿಸುವುದು ಮತ್ತು ಆಸ್ವಾದನಾಟಿಪ್ಪಣಿಯನ್ನು ಬರೆಯುವುದು.
- ವಿಶೇಷಣಗಳು, ವಿಶೇಷ ಪ್ರಯೋಗಗಳು ಮೊದಲಾದುವುಗಳನ್ನು ಸೂಕ್ತವಾಗಿ ಸೇರಿಸಿ ವಾಕ್ಯಗಳನ್ನು ಬರೆಯುವುದು.
- ಪಾಠಭಾಗವನ್ನು ವ್ಯವಹಾರ ರೂಪಕ್ಕೆ ತಕ್ಕಂತೆ ನಿರರ್ಗಳವಾಗಿ ಸ್ವರಭಾರ ಮತ್ತು ಉಚ್ಚಾರಸ್ಪಷ್ಟತೆಯೊಂದಿಗೆ ಓದುವುದು.
- ಕಥೆ, ಕವಿತೆ, ವಿವರಣೆ, ಭಿತ್ತಿಪತ್ರಿಕೆ ಮೊದಲಾದ ಸೃಜನಾತ್ಮಕ ರಚನೆಯಲ್ಲಿ ತೊಡಗುವುದು ಮತ್ತು ಅವುಗಳನ್ನು ಸಂಗ್ರಹಿಸಿ ಸಂಚಿಕೆ, ಹಸ್ತಪತ್ರಿಕೆ, ಭಿತ್ತಿಪತ್ರಿಕೆಗಳನ್ನು ತಯಾರಿಸುವುದು.
- ಕಥೆ ಮತ್ತು ಕವಿತೆಗಳ ಸಾಲುಗಳ ಅರ್ಥವನ್ನು ತಿಳಿದುಕೊಂಡು ಪದಸೌಂದರ್ಯವನ್ನು ಆಸ್ವಾದಿಸಿ ಆಶಯವನ್ನು ಹೇಳುವುದು ಮತ್ತು ಬರೆಯುವುದು.
- ಪದಪ್ರಯೋಗ, ಭಾಷಾ ಪ್ರಯೋಗ, ಆಶಯ ಮೊದಲಾದವುಗಳನ್ನು ತನ್ನ ರಚನೆಯಲ್ಲಿ ಬಳಸಿಕೊಳ್ಳುವುದು.
- ಕೃತಿರಚನೆಯಲ್ಲಿ ಇತರರು ಬಳಸಿದ ಆಶಯ, ಪ್ರಯೋಗ, ನುಡಿಗಟ್ಟು ಮೊದಲಾದುವುಗಳನ್ನು ಹೋಲಿಸಿ ತನ್ನ ರಚನೆಗಳನ್ನು ಉತ್ತಮಪಡಿಸುವುದು.
- ತನ್ನ ಮತ್ತು ಇತರರ ರಚನೆಗಳ ಮೌಲ್ಯನಿರ್ಣಯ ಮಾಡುವ ಮಾನದಂಡಗಳನ್ನು ರೂಪಿಸುವುದು ಮತ್ತು ಅವುಗಳ ಸಹಾಯದಿಂದ ಮೌಲ್ಯನಿರ್ಣಯ ಮಾಡುವುದು.
- ಬರವಣಿಗೆಯಲ್ಲಿ ಬಳಕೆಯಾಗುವ ಲೇಖನ ಚಿಹ್ನೆಗಳನ್ನು ಗುರುತಿಸಿಕೊಂಡು ಅವುಗಳನ್ನು ತನ್ನ ರಚನೆಯಲ್ಲಿ ಬಳಸುವುದು.
- ಓದುವ ಮೂಲೆ, ವಾಚನಾಲಯ ಮತ್ತು ಇತರೆಡೆಗಳಿಂದ ಲಭಿಸುವ ಓದುವ ಸಾಮಗ್ರಿಗಳನ್ನು ಓದಿ ದೊರೆತ ಅನುಭವಗಳನ್ನು ವಿಭಿನ್ನ ರೀತಿಯಲ್ಲಿ ಹಂಚಿಕೊಳ್ಳುವುದು.
- ಓದಿದ, ಆಲಿಸಿದ ವ್ಯವಹಾರ ರೂಪದ ಆಶಯವನ್ನು ತಿಳಿದುಕೊಂಡು ಇನ್ನೊಂದು ವ್ಯವಹಾರ ರೂಪವಾಗಿ ಬದಲಾಯಿಸುವುದು.
- ಮಾಹಿತಿ ತಂತ್ರಜ್ಞಾನವನ್ನು (ICT) ಉಪಯೋಗಿಸಿ, ಕೇಳಿಯೂ ನೋಡಿಯೂ ಆಶಯವನ್ನು ತಿಳಿದುಕೊಂಡು ಸ್ವಂತ ರಚನೆ ಮಾಡುವುದು ಮತ್ತು ಮಂಡಿಸುವುದು.

# 3. ನಗು ಮಗು

“ಇಂದಿನ ಮಕ್ಕಳೇ ಮುಂದಿನ ಜನಾಂಗ” ಎನ್ನುವುದು ಹಿರಿಯರ ಮಾತು. ಮಗುವೆಂಬ ಮೊಗ್ಗು ಹೂವಾಗಿ ಅರಳಬೇಕಲ್ಲದೆ ಮುರುಟಿ ಹೋಗಬಾರದು. ಮೊಗ್ಗನ್ನು ಹುಳ ಕೆಡಿಸದಂತೆ ಕಾಪಾಡಬೇಕು. ಮಕ್ಕಳ ಬದುಕು ಹಾಳಾಗದಂತೆ ಎಚ್ಚರವಹಿಸಬೇಕು. ಅವರ ಪಾಲನೆ ಪೋಷಣೆ ಹೆತ್ತವರ ಕಾಳಜಿಯಾಗಬೇಕು.



# ಮುದ್ದು ಕಂದ

ಅಳುವ ಕಂದನ ತುಟಿಯು ಹವಳದ ಕುಡಿಯಂಗ
ಕುಡಿಹುಬ್ಬು ಬೇವಿನ ಎಸಳಂಗ।ಕಣ್ಣೋಟ
ಶಿವನ ಕೈಯಲಗು ಹೊಳೆದಂಗ

ಅತ್ತರ ನಮ್ಮಗು ಮುತ್ತು ಬಾಯ್ಬಿಟ್ಟಂತೆ
ಮತ್ತೆ ಕೋಗಿಲೆಯ ಸ್ವರದಂತೆ । ಕೆಂದುಟಿಯು
ಹಚ್ಚಹಸುರಿನ ಗಿಣಿಯಂತೆ

ಆಡಿ ಬಾ ಕಂದಯ್ಯ ಅಂಗಾಲ ತೊಳೆದೇನು
ತೆಂಗಿನ ಕಾಯಿ ತಿಳಿನೀರ। ತಕ್ಕೊಂಡು
ಬಂಗಾರದ ಪಾದ ತೊಳೆದೇನು

ಅರಳೆಲೆ ತಾ ಮುದ್ದು ಬೆಳ್ಳಿ ತಾವರೆ ಮುದ್ದು
ಹಣ್ಣುಳ್ಳ ಮರಕೆ ಗಿಣಿ ಮುದ್ದು । ಕಂದಯ್ಯ
ನೀ ಮುದ್ದು ನಮ್ಮ ಮನೆಗೆಲ್ಲ

ಎನ್ನಯ್ಯನಂಥವರು ಹನ್ನೆರಡು ಮಕ್ಕಳು
ಹೊನ್ನೆಯ ಮರದ ಕೆಳಗಾಡೆ।ಋಷಿಗಳು
ತಮ್ಮಯ ಜಪವ ಮರೆತಾರು

ಕೂಸಿದ್ದ ಮನೆಗೆ ಬೀಸಣಿಗೆ ಯಾತಾಕೆ
ಕೂಸುಕಂದಯ್ಯ ಒಳಹೊರಗೆ। ಆಡಿದರೆ
ಬೀಸಣಿಗೆ ಗಾಳಿ ಸುಳಿದಾವು



## ಚಟುವಟಿಕೆಗಳು

### ಹಾಡುವ

- ಈ ಪದ್ಯವನ್ನು ರಾಗವಾಗಿ ಹಾಡಿರಿ.

### ಇಷ್ಟವಾದ ಸಾಲುಗಳನ್ನು ಬರೆಯುವ

- ಪದ್ಯದಲ್ಲಿ ನಿಮಗೆ ಇಷ್ಟವಾದ ಸಾಲುಗಳು ಯಾವುವು? ಯಾಕೆ ಇಷ್ಟವಾಯಿತೆಂದು ಬರೆಯಿರಿ.

### ಮಾದರಿಯಂತೆ ಬರೆಯುವ

- ಕೆಳಗೆ ಕೊಡಲಾದ ಪದಗಳನ್ನು ಮಾದರಿಯಂತೆ ಬದಲಾಯಿಸಿ ಬರೆಯಿರಿ

| | | | |
|---|---|---|---|
| ಉದಾ: | ತಕ್ಕೊಂಡು | – | ತೆಗೆದುಕೊಂಡು |
| | ಹೊಳೆದಂಗ | – | |
| | ಕುಡಿಯಂಗ | – | |
| | ಎಸಳಂಗ | – | |

### ಉತ್ತರ ಬರೆಯುವ

- ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ಕವಿಯು ಮಗುವಿನ ಕಣ್ಣೋಟವನ್ನು ಯಾವುದಕ್ಕೆ ಹೋಲಿಸಿದ್ದಾನೆ?
2. ಯಾವ ನೀರಿನಿಂದ ಮಗುವಿನ ಪಾದವನ್ನು ತೊಳೆದೇನು ಎಂದು ಕವಿ ಹೇಳುತ್ತಾನೆ?
3. ಋಷಿಗಳು ಯಾವಾಗ ತಮ್ಮ ಜಪವನ್ನು ಮರೆಯುತ್ತಾರೆ?
4. ಕಂದ ಮನೆಯ ಒಳಗೆ ಹೊರಗೆ ಆಡಿದರೆ ಏನಾಗುತ್ತದೆ?
5. ಮನೆಗೆ ಮುದ್ದು ಯಾರು?
6. ಮಗು ಅತ್ತರೆ ಹೇಗೆ ಕಾಣಿಸುತ್ತದೆ?

### ಟಿಪ್ಪಣಿ ಬರೆಯುವ

- ನಿಮಗೆ ಅಮ್ಮನೆಂದರೆ ತುಂಬಾ ಇಷ್ಟವಲ್ಲವೇ? ಅಮ್ಮ ನಿಮಗೆ ಯಾವ ಯಾವ ಕಾರ್ಯದಲ್ಲಿ ಸಹಾಯ ಮಾಡುತ್ತಾಳೆ? ಯೋಚಿಸಿ ಟಿಪ್ಪಣಿ ಬರೆಯಿರಿ.

## ಜೊತೆಗೊಳಿಸುವ

- ಜೀವಿಗಳ ಹೆಸರನ್ನೂ ಅವುಗಳುಂಟುಮಾಡುವ ಸ್ವರ ಸೂಚಿಸುವ ಪದಗಳನ್ನೂ ಜೊತೆಗೊಳಿಸಿರಿ.

| | |
|---|---|
| ಕುದುರೆ | ಗರ್ಜಿಸುತ್ತದೆ |
| ನಾಯಿ | ಗುಯಿಂಗುಟ್ಟುತ್ತದೆ |
| ಕತ್ತೆ | ಕೆನೆಯುತ್ತದೆ |
| ಆನೆ | ಝೇಂಕರಿಸುತ್ತದೆ |
| ಸಿಂಹ | ವಟಗುಟ್ಟುತ್ತದೆ |
| ನೊಣ | ಘೀಳಿಡುತ್ತದೆ |
| ಕಪ್ಪೆ | ಅರಚುತ್ತದೆ |
| ದುಂಬಿ | ಬೊಗಳುತ್ತದೆ |

## ಪದ್ಯವನ್ನು ಮುಂದುವರಿಸುವ

- ಕೆಳಗೆ ಕೊಟ್ಟ ಪದ್ಯದ ಸಾಲುಗಳನ್ನು ಮುಂದುವರಿಸಿ ಬರೆಯಿರಿ.

ಪುಟ್ಟ ಗುಬ್ಬಿ
ದೊಡ್ಡ ಮರದಿ
ಗೂಡು ಕಟ್ಟಿತು

.......................
.......................
.......................
.......................
.......................
.......................

## ಸಂಗ್ರಹಿಸುವ

- ಬಾಲ್ಯವನ್ನು ವರ್ಣಿಸುವ ಕವಿತೆಗಳನ್ನು ಸಂಗ್ರಹಿಸಿ ತರಗತಿಯಲ್ಲಿ ಮಂಡಿಸಿರಿ.

# ಬಾಲ ಕಾರ್ಮಿಕರು

ಹಿಂದಿನ ಕಾಲದಲ್ಲಿ ಜನರು ಬೇರೆ ಬೇರೆ ಕಸುಬುಗಳನ್ನು ನಡೆಸುತ್ತಿದ್ದರು. ಕಾಲ ಕಳೆದಂತೆ ಕಾರ್ಖಾನೆಗಳು ಸೃಷ್ಟಿಯಾಗಿ, ನಿರ್ದಿಷ್ಟ ಅವಧಿಯ ಕೆಲಸಕ್ಕೆ ಕೆಲಸಗಾರರನ್ನು ನೇಮಿಸಲು ಆರಂಭಿಸಿದಾಗ 'ಕಾರ್ಮಿಕ' ಎನ್ನುವ ಹೊಸ ವರ್ಗವೊಂದರ ಸೃಷ್ಟಿಯಾಯಿತು. ಈ ಕಾರ್ಮಿಕರ ಗುಂಪಿಗೆ ನಿಧಾನವಾಗಿ ಇನ್ನೊಂದು ಬಗೆಯ ಕಾರ್ಮಿಕ ವರ್ಗವೂ ಸೇರಿಕೊಳ್ಳತೊಡಗಿತು. ಅದು ಇಂದು ಅತಿದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ. ಆ ವರ್ಗವೇ ಬಾಲಕಾರ್ಮಿಕರು.

ಜನಸಂಖ್ಯೆಯ ಹೆಚ್ಚಳದಿಂದಾಗಿ ಬಡತನವು ಹೆಚ್ಚಿದಾಗ ಜನರು ತಮ್ಮ ಜೊತೆಗೆ ತಮ್ಮ ಮಕ್ಕಳನ್ನೂ ಸಣ್ಣಪುಟ್ಟ ಕೆಲಸಕ್ಕೆ ತೊಡಗಿಸಿಕೊಳ್ಳುತ್ತಾರೆ. ನಗರಗಳಿಗೆ ವಲಸೆ ಬಂದ ಗ್ರಾಮೀಣ ಜನರ ಮಕ್ಕಳು ಮತ್ತು ಕಾರ್ಮಿಕರ ಮಕ್ಕಳು ಈ ಗುಂಪಿಗೆ ಸೇರುತ್ತಾರೆ. ಬಡಕುಟುಂಬದಲ್ಲಿ ಜನಿಸಿದ ಮಕ್ಕಳು ನಾಲ್ಕೈದು ವರ್ಷವಾಗುತ್ತಿದ್ದ ಹಾಗೇ ಜೀವನ ಸಾಗಿಸಲು ಕೆಲಸ ಮಾಡುವ ಮೂಲಕ ಹಣ ಸಂಪಾದನೆಗೆ ಪ್ರಯತ್ನಿಸುತ್ತಾರೆ. ತಂದೆತಾಯಿಯರನ್ನು ಕಳೆದುಕೊಂಡ ಮಕ್ಕಳು ಒಡಹುಟ್ಟಿದವರ ಹೊಟ್ಟೆಹೊರೆಯಲು ಅನಿವಾರ್ಯವಾಗಿ ಕೆಲಸ ಮಾಡಬೇಕಾಗುತ್ತದೆ. ಹೀಗೆ ಬಾಲಕಾರ್ಮಿಕರ ಪರಂಪರೆ ಮುಂದುವರಿಯುತ್ತದೆ.





ಬಡಕುಟುಂಬದ ಮಕ್ಕಳು ಅಲ್ಪಸ್ವಲ್ಪ ವಿದ್ಯೆ ಕಲಿತು ತಂದೆ ತಾಯಿಯರಿಗೆ ನೆರವಾಗುವ ಆಸೆಯಿಂದ ಚಿಕ್ಕ ಪುಟ್ಟ ಕೆಲಸಗಳಿಗೆ ಕೈಹಾಕುತ್ತಾರೆ. ಮೋಟಾರು ವಾಹನಗಳಲ್ಲಿ, ಅಂಗಡಿಗಳಲ್ಲಿ, ಹೊಟೇಲ್‌ಗಳಲ್ಲಿ, ಮನೆಗಳಲ್ಲಿ, ಪಟಾಕಿ ಕಾರ್ಖಾನೆಗಳಲ್ಲಿ ಕೆಲಸಗಳಲ್ಲಿ ತೊಡಗುತ್ತಾರೆ. ಶಾಲೆಯಲ್ಲಿ ದೊರಕುವ ಶಿಕ್ಷಣ ಇಂತಹ ಮಕ್ಕಳನ್ನು ಆಕರ್ಷಿಸುವುದಿಲ್ಲ. ಅತ್ಯಂತ ಕಡಿಮೆ ಕೂಲಿಗೆ ಪ್ರಾಮಾಣಿಕವಾಗಿ ದುಡಿಯುವ ಮಕ್ಕಳು ಮಾಲಿಕರಿಗೂ ಬೇಕಾಗುತ್ತಾರೆ. ಸ್ವಂತ ಲಾಭದ ದೃಷ್ಟಿಯಿಂದ ಮಾಲಿಕರು ತಮ್ಮಲ್ಲಿ ಕೆಲಸಗಳಿಗೆ ಸೇರಿಸಿಕೊಳ್ಳುತ್ತಾರೆ.

ಬಾಲಕರು ಕಾರ್ಮಿಕರಾದರೆ ನ್ಯಾಯಬದ್ಧವಾಗಿ ಸಿಗಬೇಕಾದ ಶಿಕ್ಷಣ, ರಕ್ಷಣೆ, ಹೆತ್ತವರ ಪ್ರೀತಿ ಮತ್ತು ಪೋಷಕಾಹಾರ ಇತ್ಯಾದಿಗಳಿಂದ ವಂಚಿತರಾಗುತ್ತಾರೆ. ಇದು ಅವರ ಭವಿಷ್ಯವನ್ನು ರೂಪಿಸುವಲ್ಲಿ ತೊಡಕಾಗಿ ನಿಲ್ಲುತ್ತದೆ.

ತೊಡಕಾಗಿ ನಿಲ್ಲುತ್ತದೆ.

ಬಾಲ ಕಾರ್ಮಿಕರಾಗಿದ್ದು ಮುಂದೆ ಜೀವನದಲ್ಲಿ ಯಶಸ್ಸನ್ನು ಸಾಧಿಸಿದವರೂ ಇದ್ದಾರೆ. ರಾತ್ರಿ ಶಾಲೆಗಳಲ್ಲಿ ಓದಿ ತಮ್ಮ ಭವಿಷ್ಯವನ್ನು ರೂಪಿಸಿಕೊಂಡವರಿದ್ದಾರೆ. ಆದರೆ ತಮ್ಮ ಈ ಸ್ಥಿತಿಯಿಂದ ನಿರಾಶೆಗೊಂಡು ಕೆಲವರು ಸಣ್ಣ ಪುಟ್ಟ ಅಪರಾಧಗಳನ್ನು ಮಾಡುತ್ತಾರೆ. ಇದರಿಂದಾಗಿ ಬಾಲಾಪರಾಧಿಗಳಾಗುತ್ತಾರೆ. ಅವರ ಜೀವನ ನಾಶವಾಗುತ್ತದೆ.

ರಾಷ್ಟ್ರದ ಪ್ರಗತಿಯಲ್ಲಿ ಪ್ರಧಾನ ಪಾತ್ರವಹಿಸಬೇಕಾದ ಮಕ್ಕಳು, ಕಾರ್ಮಿಕರಾಗುವುದು ದುರಂತವೇ ಸರಿ. ಬಾಲಕಾರ್ಮಿಕತನವನ್ನು ನಿರ್ಮೂಲನೆ ಮಾಡುವಲ್ಲಿ ಹೆತ್ತವರು, ಸಾಮಾಜಿಕಸಂಸ್ಥೆಗಳು, ಹಾಗೂ ಸರಕಾರ ಇನ್ನಷ್ಟು ಜಾಗೃತಗೊಳ್ಳಬೇಕಾಗಿದೆ. ಸಂವಿಧಾನಬದ್ಧವಾಗಿ ಸಿಗಬೇಕಾದ ಪೋಷಕಾಹಾರ, ರಕ್ಷಣೆ, ಶಿಕ್ಷಣ ಇತ್ಯಾದಿಗಳನ್ನು ಒದಗಿಸುವಲ್ಲಿ ಎಲ್ಲರೂ ಪ್ರಯತ್ನಿಸಬೇಕಾಗಿದೆ.

## ಚಟುವಟಿಕೆಗಳು

### ಉತ್ತರಬರೆಯುವ

- ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ಬಾಲಕರು ಕಾರ್ಮಿಕರಾಗಲು ಕಾರಣಗಳೇನು?
2. ಬಾಲಕಾರ್ಮಿಕರಿಂದ ಮಾಡಿಸುವ ಕೆಲಸಗಳು ಯಾವುವು?
3. ಬಾಲಕಾರ್ಮಿಕರು ಯಾವ ಯಾವ ಹಕ್ಕುಗಳಿಂದ ವಂಚಿತರಾಗುತ್ತಾರೆ?
4. ಮಾಲಿಕರು ಮಕ್ಕಳನ್ನು ಕೆಲಸಕ್ಕೆ ಸೇರಿಸಿಕೊಳ್ಳುವುದು ಯಾಕೆ?

### ಸಮಾನಾರ್ಥ ಪದಗಳನ್ನು ಬರೆಯುವ

- ಕೆಳಗೆ ಕೊಟ್ಟಿರುವ ಪದಗಳಿಗೆ ಸಮಾನಾರ್ಥ ಪದಗಳನ್ನು ಪಾಠದಿಂದ ಆರಿಸಿ ಬರೆಯಿರಿ.

| | | | |
|---|---|---|---|
| ○ ಯಜಮಾನ | – .................... | ○ ಅಭಿವೃದ್ಧಿ | – .................... |
| ○ ಆಶಾಭಂಗ | – .................... | ○ ಗೆಲುವು | – .................... |
| ○ ಎಚ್ಚರ | – .................... | ○ ದಾರಿದ್ರ್ಯ | – .................... |
| ○ ಅಧಿಕ | – .................... | ○ ತಪ್ಪು ಕೆಲಸ | – .................... |
| ○ ಕೆಲಸಗಾರ | – .................... | | |

### ಅಡಿಟಿಪ್ಪಣಿ ಬರೆಯುವ

- ಚಿತ್ರಕ್ಕೆ ಸೂಕ್ತವಾದ ಅಡಿಟಿಪ್ಪಣಿಯನ್ನು ಬರೆಯಿರಿ.



### ಟಿಪ್ಪಣಿ ಬರೆಯುವ

- ಬಾಲಕಾರ್ಮಿಕರಾಗುವುದು ರಾಷ್ಟ್ರೀಯ ದುರಂತ. ಇದನ್ನು ಹೇಗೆ ಹೋಗಲಾಡಿಸಬಹುದು? ಚರ್ಚಿಸಿ ಟಿಪ್ಪಣಿ ಬರೆಯಿರಿ.

### ಘೋಷಣ ವಾಕ್ಯಗಳನ್ನು ಬರೆಯುವ

- ಮಕ್ಕಳ ಹಕ್ಕುಗಳ ಕುರಿತಾಗಿರುವ ಘೋಷಣ ವಾಕ್ಯಗಳನ್ನು ಬರೆಯಿರಿ.

ಶಿಕ್ಷಣ, ರಕ್ಷಣೆ, ಪಾಲನೆ, ಪೋಷಣೆ
ಇದುವೆ ಮಕ್ಕಳ ನಿತ್ಯದ ಘೋಷಣೆ

### ಬದಲಾಯಿಸಿ ಬರೆಯುವ

- ಮಾದರಿಯಂತೆ ಅಡಿಗೆರೆ ಎಳೆದ ಪದಗಳ ವಿರೋಧಾರ್ಥ ಪದಗಳನ್ನು ಬಳಸಿ ವಾಕ್ಯಗಳನ್ನು ಬದಲಾಯಿಸಿ ಬರೆಯಿರಿ.

  ಮಾದರಿ : ನಾವು ಅನಗತ್ಯವಾಗಿ ಮಾತನಾಡಬಾರದು.

  ನಾವು ಅಗತ್ಯವಿದ್ದಾಗ ಮಾತನಾಡಬೇಕು.

  - ಗುರುಹಿರಿಯರಲ್ಲಿ ಅನಾದರ ತೋರಿಸಬಾರದು.
  - ಅನಾರೋಗ್ಯವಿದ್ದಾಗ ಉತ್ಸಾಹವಿರುವುದಿಲ್ಲ.
  - ಪತ್ರಿಕೆಗಳಲ್ಲಿ ಅನಧಿಕೃತ ವಾರ್ತೆಗಳು ಇರಬಾರದು.
  - ಬುದ್ಧಿವಂತರು ತಮ್ಮ ಜವಾಬ್ದಾರಿಗಳನ್ನು ಅಸಮರ್ಪಕವಾಗಿ ಮಾಡುವುದಿಲ್ಲ.
  - ನಾವು ರಾಷ್ಟ್ರಧ್ವಜಕ್ಕೆ ಅಗೌರವ ತೋರಿಸಬಾರದು.

### ವಾಕ್ಯ ಬರೆಯುವ

- ಗದ್ಯಭಾಗದಲ್ಲಿ ಅಡಿಗೆರೆ ಎಳೆದ ಪದಗಳನ್ನುಪಯೋಗಿಸಿ ವಾಕ್ಯಗಳನ್ನು ಬರೆಯಿರಿ.

  ಒಂದು ಹಳ್ಳಿಯಲ್ಲಿ ಮಂಜು ಎಂಬ ಅನಾಥ ಹುಡುಗನಿದ್ದನು. ಚಿಕ್ಕಂದಿನಲ್ಲಿಯೇ ಅಪ್ಪ-ಅಮ್ಮನನ್ನು ಕಳೆದುಕೊಂಡ ಕಾರಣ ಅವನು ಶಿಕ್ಷಣದಿಂದ ವಂಚಿತನಾಗಿದ್ದನು. ಅವನು ಹಳ್ಳಿಯ ಅನೇಕ ಮನೆಗಳಲ್ಲಿ ಕೂಲಿ ಮಾಡಿ ಜೀವನ ಸಾಗಿಸುತ್ತಿದ್ದನು. ಒಮ್ಮೆ ಆ ಹಳ್ಳಿಗೆ ಬರಗಾಲ ಬಂತು. ಅಲ್ಲಿನ ಜನರೆಲ್ಲರೂ ಬೇರೆ ಊರಿಗೆ ವಲಸೆ ಹೋದರು. ಮಂಜುವು ಬೇರೆ ದಾರಿ ಕಾಣದೆ ಅವರ ಜೊತೆಗೆ ಹೋದನು. ಅವರು ಒಂದು ಊರಿಗೆ ತಲುಪಿದರು. ಅಲ್ಲಿ ಒಬ್ಬ ಶ್ರೀಮಂತ ಜಮೀನುದಾರನಿದ್ದನು. ಅವನಿಗೆ ಮಕ್ಕಳಿರಲಿಲ್ಲ. ಅವನು ಮಂಜುವಿಗೆ ಆಶ್ರಯ ನೀಡಿದನು. ಅವನಿಗೆ ಆಹಾರ, ಬಟ್ಟೆಬರೆಗಳನ್ನು ನೀಡಿದನು. ಅವನನ್ನು ಶಾಲೆಗೆ ಕಳುಹಿಸಿ ಶಿಕ್ಷಣಕ್ಕೆ ನೆರವಾದನು.

### ಅನುಭವ ಹೇಳುವ

- ನೀವು ನಿಮ್ಮ ಹಿರಿಯರಿಗೆ ಮನೆಗೆಲಸದಲ್ಲಿ ಸಹಾಯ ಮಾಡಿದ ಸನ್ನಿವೇಶವನ್ನು ನೆನಪಿಸಿಕೊಳ್ಳಿರಿ. ಆಗ ನಿಮಗೆ ಆದ ಅನುಭವವನ್ನು ಹೇಳಿರಿ.

# ಗಿಡವಾಗಿ ಬಗ್ಗದ್ದು...

ಆಚಾರಕ್ಕರಸಾಗು। ನೀತಿಗೆ ಪ್ರಭುವಾಗು।

ಮಾತಿನಲಿ ಚೂಡಾಮಣಿಯಾಗು। ಮಗು ನೀನು

ಜ್ಯೋತಿಯೇ ಆಗು। ಜಗಕ್ಕೆಲ್ಲ

ಸಂಜೆಯ ಹೊತ್ತು ಜಲಜ ಜಗಲಿಯಲ್ಲಿ ಕುಳಿತು ಹಾಡುತ್ತಿದ್ದಳು. ಶಾಲೆಯಿಂದ ಬಂದ ಮಗ ಜಗದೀಶನು ಚೀಲವನ್ನು ಜಗಲಿಯಲ್ಲಿಯೇ ಎಸೆದು ಬಯಲಿಗೆ ಓಡತೊಡಗಿದನು.

"ನಿಲ್ಲು ಮಗಾ, ನಿಲ್ಲು, ತಿಂಡಿ ತಿಂದು ಹೋಗು" ಜಲಜ ಒತ್ತಾಯಿಸಿದಳು.

"ಅದೆಲ್ಲಾ ಮತ್ತೆ ಅಮ್ಮಾ!" ಜಗದೀಶ ಬಯಲಿನತ್ತ ಓಡಿದನು.

ಜಲಜ ಬೇರೆ ದಾರಿಕಾಣದೆ ಚೀಲವನ್ನು ತೆಗೆದಿರಿಸುತ್ತಾ "ಮೂರು ವರ್ಷಗಳಿಂದ ಶಾಲೆಗೆ ಹೋಗುತ್ತಿದ್ದಾನೆ. ತನ್ನ ವಸ್ತುಗಳನ್ನು ತಾನೇ ತೆಗೆದಿರಿಸಲು ಯಾವಾಗ ಕಲಿಯುತ್ತಾನೋ!" ಎಂದು ಗೊಣಗಿದಳು.



ಹೊತ್ತು ಮುಳುಗಿತು. ಕತ್ತಲಾಗುತ್ತಾ ಬಂತು. ಜಗದೀಶನ ಪತ್ತೆಯಿಲ್ಲ. ಜಲಜ ಬೆತ್ತವೊಂದನ್ನು ಹಿಡಿದುಕೊಂಡು ಮನೆಯಿಂದ ಹೊರಡಲು ಸಿದ್ಧಳಾದಳು. ಅಷ್ಟರಲ್ಲಿ ಜಗದೀಶನು ಬರುವುದು ಕಾಣಿಸಿತು.



"ಅಮ್ಮಾ! ಬಂದೆ"

"ಬಾ! ನಿನ್ನ ಕ್ರಿಕೆಟನ್ನು ಇಂದಿಗೇ ನಿಲ್ಲಿಸಿಬಿಡುತ್ತೇನೆ. ರಾತ್ರಿಯಾಗುತ್ತಾ ಬಂದರೂ ಆಟ ಮುಗಿದಿಲ್ಲ. ನಿನಗೆ ಬುದ್ಧಿ ಕಲಿಸುತ್ತೇನೆ." ಜಗದೀಶನಿಗೆ ದಿಗಿಲಾಯಿತು. ಹೇಗಾದರೂ ತಪ್ಪಿಸಿಕೊಂಡು ಬಂದು ಮನೆಯೊಳಗೆ ಪ್ರವೇಶಿಸಿದನು. ಅಮ್ಮ ಹಿಂದೆಯೇ ಬಂದಳು.

"ಅಗೋ ನೋಡು ಕೈಕಾಲು ತೊಳೆಯದೆ ಮನೆಯ ಒಳಗೆ ಬಂದೆ. ದಿನನಿತ್ಯ ಹೇಳಬೇಕೆ? ಶಾಲೆಯ ಸಮವಸ್ತ್ರವನ್ನೂ ತೆಗೆದಿಲ್ಲ. ಶಾಲೆಯಲ್ಲಿ ಹೇಳಿದ ಮನೆಗೆಲಸ ಮಾಡುವುದು ಯಾವಾಗ?" ಅಮ್ಮ ಗದರಿಸಿದರು.

"ಅದೆಲ್ಲ ಮತ್ತೆ ಅಮ್ಮ. ಈಗ ತಿಂಡಿಕೊಡು. ಹಸಿವಾಗ್ತಿದೆ."

"ಓಹೋ ಈಗ ಬೇಕೆ? ಕೊಡುವುದಿಲ್ಲ. ಮೊದಲು ಕೈಕಾಲು ತೊಳೆದು ಬಾ." ಜಲಜ ಮಗನನ್ನು ನಳ್ಳಿಯ ಬಳಿಗೆ ಎಳೆದುಕೊಂಡು ಹೋದಳು. ಕೈಕಾಲು ತೊಳೆಯಿಸಿದಳು. ತಿಂಡಿ ಕೊಟ್ಟಳು. "ಘಂಟೆ ಏಳಾಯಿತು. ಇನ್ನು ಸ್ನಾನ ಯಾವಾಗ? ಪ್ರಾರ್ಥನೆ, ಮನೆಗೆಲಸ, ಓದು, ಊಟ ಯಾವಾಗ? ಒಂಭತ್ತು ಗಂಟೆಗೆ ನಿದ್ದೆ ಬಂದುಬಿಡುತ್ತದೆ. ಬೇಗ ತಿಂಡಿ ತಿನ್ನು."

ಜಗದೀಶ ಗಬಗಬನೆ ತಿಂದು ಎದ್ದನು. ಅವನಿಗೆ ಟಿ.ವಿ. ನೋಡಬೇಕೆಂದು ಮನಸ್ಸಾದರೂ ಅಮ್ಮನಿಗೆ ಹೆದರಿ ಸ್ನಾನ, ಪ್ರಾರ್ಥನೆ ಮುಗಿಸಿದನು. ಎಂಟು ಗಂಟೆಗೆ ಅಮ್ಮನ ಒತ್ತಾಯಕ್ಕೆ ತಲೆಬಾಗಿ ಚೀಲ ತೆರೆದನು. ಕೋಪಿ ಗೀಚಿದನು. ಒಂದೆರಡು ಲೆಕ್ಕ ಮಾಡಿದನು. 'ಕಷ್ಟವಾದ ಲೆಕ್ಕಗಳನ್ನು ನಾಳೆ ಶಾಲೆಯಲ್ಲಿ ಬೇರೆ ಮಕ್ಕಳ ಪುಸ್ತಕ ನೋಡಿ ಬರೆದರಾಯಿತು' ಎಂದು ಹಾಗೆಯೇ ಬಿಟ್ಟನು. ಪ್ರಶ್ನೋತ್ತರ ಮತ್ತು ಅಭ್ಯಾಸಗಳನ್ನು ಬರೆಯದೆ ಡ್ರಾಯಿಂಗ್ ಪುಸ್ತಕ ತೆರೆದು ಚಿತ್ರ ಬಿಡಿಸತೊಡಗಿದನು. ಅಷ್ಟರಲ್ಲಿ ಜಲಜ ಬಂದಳು. "ಮಗೂ ನಿನಗೆ ಡ್ರಾಯಿಂಗ್ ಎಂದರೆ ತುಂಬಾ ಆಸಕ್ತಿ. ಆದರೆ ಮೊದಲು ಇತರ ಮನೆಗೆಲಸವನ್ನು ಬೇಗ ಮುಗಿಸು. ನಾಳೆ ಬೆಳಗ್ಗೆ ಎದ್ದು ಡ್ರಾಯಿಂಗ್ ಮಾಡು. ಬೆಳಗಿನ ಹೊತ್ತು ಅದಕ್ಕೆ ಒಳ್ಳೆಯ ಸಮಯ. ಆಯಿತೇ" ಅಮ್ಮ ಹೇಳಿದಳು. ಜಗದೀಶ ಮನಸ್ಸಿಲ್ಲದ ಮನಸ್ಸಿನಿಂದ ಪ್ರಶ್ನೋತ್ತರ ಬರೆಯತೊಡಗಿದನು.

ಗಂಟೆ ಒಂಭತ್ತು. ಅಮ್ಮ ಜಗದೀಶನನ್ನು ಊಟಕ್ಕೆ ಕರೆದಳು. ಜಗದೀಶನ ಸದ್ದಿಲ್ಲ. ಅವನು ಪುಸ್ತಕದ ಮೇಲೆ ಮಲಗಿ ನಿದ್ದೆಹೋಗಿದ್ದನು. ಮಗನನ್ನು ನಿದ್ದೆಯಿಂದ ಎಬ್ಬಿಸಲು ಪ್ರಯತ್ನಿಸಿದಳು. ಏನೇನು ಮಾಡಿದರೂ ನಿದ್ದೆಯಿಂದ ಎಚ್ಚರಗೊಳ್ಳಲಿಲ್ಲ. "ಊಟ ಮಾಡದೆ ಮಲಗಿದರೆ ಹೇಗೆ?" ಜಲಜಳ ತಾಳ್ಮೆಯ ಕಟ್ಟೆ ಒಡೆಯಿತು. ಬೆನ್ನಿಗೆ ಎರಡು ಬಾರಿಸಿದಳು. ಜಗದೀಶನಿಗೆ ನೋವಾಯಿತು. ಅವನು ಗಟ್ಟಿಯಾಗಿ ಅಳತೊಡಗಿದನು. ಊಟ ಮಾಡುವುದಿಲ್ಲವೆಂದು ಹಟಹಿಡಿದನು. ಅಪ್ಪ ಬಂದು ಗದರಿದರು. ಜಗದೀಶ ಅಳುತ್ತಲೇ ಊಟ ಮಾಡಿದನು. ಊಟ ಮುಗಿಸಿ ಬಿಕ್ಕಳಿಸುತ್ತಾ ಹಾಸಿಗೆ ಬಳಿ ಬಂದನು. ಅಮ್ಮ ಜಗದೀಶನ ಹತ್ತಿರ ಬಂದು ಕುಳಿತಳು. ಮಗನನ್ನೂ ಸಮಾಧಾನಪಡಿಸಿದಳು. ಅವಳಿಗೆ ತಿಳಿಯದಂತೆ ಒಂದೆರಡು ಹನಿ ಕಣ್ಣೀರು ಉದುರಿದುವು. ಅವಳು"ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ?" ಎಂದಳು. ಜಗದೀಶನಿಗೆ ಈ ಮಾತಿನ ಅರ್ಥವಾಗಲಿಲ್ಲ. ಅವನು ನಿದ್ದೆಹೋದನು.

ಮರುದಿನ ಶಾಲೆಯಲ್ಲಿ ತರಗತಿಗೆ ಟೀಚರು ಬಂದರು. ಪಾಠ ಆರಂಭಿಸುವಷ್ಟರಲ್ಲಿ ಜಗದೀಶ ಎದ್ದು ನಿಂತು "ಟೀಚರ್, ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ ಎಂದರೆ ಏನು?" ಎಂದು ಕೇಳಿದನು.

ಟೀಚರ್ : ನೀನು ಒಳ್ಳೆಯ ಪ್ರಶ್ನೆಯನ್ನೇ ಕೇಳಿದೆ. ಇದೊಂದು ಗಾದೆ ಮಾತು. ನಾವು ಈ ದಿನ ಗಾದೆಗಳ ಕುರಿತು ಚರ್ಚಿಸೋಣ. ಮಕ್ಕಳೇ, ಈ ಗಾದೆಮಾತಿನ ಬಗ್ಗೆ ನಿಮ್ಮ ಅಭಿಪ್ರಾಯವೇನು?

ರಮೇಶ : ಗಿಡ ಬಗ್ಗುತ್ತದೆ, ಮರ ಬಗ್ಗುವುದಿಲ್ಲ ಟೀಚರ್.

ರಹೀಮ್ : ಗಿಡವಾಗಿ ಬಗ್ಗದೇ ಇರುವುದು ಮರವಾಗಿ ಬೆಳೆದ ಅನಂತರ ಬಗ್ಗೀತೆ? ಅಂದರೆ ಬಗ್ಗುವುದಿಲ್ಲ ಎಂದರ್ಥ.

ಲಿಲ್ಲಿ : ಟೀಚರ್, ಇದು ನಮ್ಮ ಜೀವನಕ್ಕೂ ಅನ್ವಯಿಸುತ್ತದೆ. ನಾವು ಚಿಕ್ಕಂದಿನಿಂದಲೇ ಉತ್ತಮ ಅಭ್ಯಾಸಗಳನ್ನು ರೂಢಿಸಿಕೊಳ್ಳಬೇಕು. ಹಿರಿಯರ, ಅಧ್ಯಾಪಕರ, ಸಹಪಾಠಿಗಳ ಸಹಾಯದಿಂದ, ಸ್ವಂತ ವಿವೇಚನೆಯಿಂದ ನಮ್ಮನ್ನು ನಾವೇ ತಿದ್ದಿಕೊಂಡು ಉತ್ತಮರಾಗಬೇಕು. ಇದು ಬಾಲ್ಯದಲ್ಲಿ ಸಾಧ್ಯವಾಗದಿದ್ದರೆ ದೊಡ್ಡವರಾದ ಬಳಿಕ ತುಂಬಾ ಕಷ್ಟ.

ಟೀಚರು : ಮಕ್ಕಳೇ ನೀವು ತುಂಬಾ ಜಾಣರು. ಸರಿಯಾಗಿ ಆಲೋಚಿಸಿದರೆ ಈ ಮಾತಿನ ಅರ್ಥ ಇನ್ನೂ ಸ್ಪಷ್ಟವಾಗುವುದು. ಬಾಲ್ಯವು ಮನುಷ್ಯ ಜೀವನದ ಪ್ರಧಾನ ಕಾಲ. ಇದನ್ನು ತಿಳಿದು ಉತ್ತಮ ಗುಣಗಳನ್ನು ಬೆಳೆಸಿಕೊಳ್ಳಲು ಪ್ರಯತ್ನಿಸಿರಿ. ನಿಮ್ಮ ಪ್ರಯತ್ನಗಳನ್ನು ದಿನಚರಿಯಲ್ಲಿ ದಾಖಲಿಸಿರಿ.

ಜಗದೀಶನಿಗೆ ಅಮ್ಮನ ಕಳಕಳಿ ಅರ್ಥವಾಯಿತು. 'ನಾನು ಇಂದಿನಿಂದಲೇ ನನ್ನ ತಪ್ಪನ್ನು ತಿದ್ದಿಕೊಳ್ಳುತ್ತೇನೆ' ಎಂದು ತೀರ್ಮಾನಿಸಿದನು.

## ಚಟುವಟಿಕೆಗಳು

### ಉತ್ತರ ಬರೆಯುವ

- ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.
  1. ಜಲಜ ಜಗಲಿಯಲ್ಲಿ ಕುಳಿತು ಏನು ಮಾಡುತ್ತಿದ್ದಳು?
  2. ಜಲಜ ಬೆತ್ತ ಹಿಡಿದುಕೊಂಡು ಹೊರಟದ್ದೇಕೆ?
  3. ಜಗದೀಶ ತಿಂಡಿ ತಿಂದ ಬಳಿಕ ಮಾಡಿದುದೇನು?
  4. ಅಮ್ಮ ಊಟಕ್ಕೆ ಕರೆದಾಗ ಜಗದೀಶ ಮಾತಾಡದಿರಲು ಕಾರಣವೇನು?
  5. ಜಲಜಳ ತಾಳ್ಮೆಯ ಕಟ್ಟೆ ಯಾವಾಗ ಒಡೆಯಿತು?
  6. ಜಗದೀಶನಿಗೆ ಅರ್ಥವಾಗದ ಮಾತು ಯಾವುದು?

### ಪದ ಬರೆಯುವ

- ನವೀನ ಪದಗಳನ್ನು ಹುಡುಕಿ ಬರೆಯಿರಿ. ಅವುಗಳ ಅರ್ಥವನ್ನು ಅರ್ಥಕೋಶದ ಸಹಾಯದಿಂದ ಕಂಡುಹಿಡಿಯಿರಿ. ಆ ಬಳಿಕ ಅಕಾರಾದಿಯಾಗಿ ಬರೆಯಿರಿ.

### ಹೊಂದಿಸಿ ಬರೆಯುವ

- 'ಅ' ವಿಭಾಗ ಮತ್ತು 'ಆ' ವಿಭಾಗದಲ್ಲಿರುವವುಗಳನ್ನು ಹೊಂದಿಸಿ ಬರೆಯಿರಿ.

| ಅ | ಆ |
|---|---|
| ○ ಕುಂಬಾರನಿಗೆ ವರುಷ | ತಾಯಿಗೆ ಮಗ |
| ○ ಎತ್ತು ಏರಿಗೆ ಎಳೆದರೆ | ಪೂಜಾರಿ ಬಿಡ |
| ○ ಊರಿಗೆ ಅರಸನಾದರೂ | ಆನೆ ಕೊಟ್ಟರೂ ಬಾರದು |
| ○ ದೇವರು ಕೊಟ್ಟರೂ | ಹಾಲು ಕಪ್ಪೇ |
| ○ ಅಡಿಕೆಗೆ ಹೋದ ಮಾನ | ಕೋಣ ನೀರಿಗೆ ಎಳೆಯಿತು |
| ○ ದನ ಕಪ್ಪಾದರೆ | ಬಾಯಿ ಮೊಸರು |
| ○ ಉಪ್ಪಿಗಿಂತ ರುಚಿಯಿಲ್ಲ | ದೊಣ್ಣೆಗೆ ನಿಮಿಷ |
| ○ ಕೈಕೆಸರಾದರೆ | ನೀರು ಕುಡಿದಾನು |
| ○ ಉಪ್ಪು ತಿಂದವನು | ಗತಿಗೇಡು |
| ○ ಅತಿಆಸೆ | ತಾಯಿಗಿಂತ ಬಂಧುವಿಲ್ಲ |

### ವಿವರಣೆ ಬರೆಯುವ

- ನೀವು ನಿನ್ನೆ ಶಾಲೆಯಿಂದ ಮನೆಗೆ ಹೋದ ಬಳಿಕ ಮಾಡಿದ ಚಟುವಟಿಕೆಗಳು ಯಾವುವು? ಆಗ ನಿಮಗಾದ ಅನುಭವಗಳೇನು? ಅದರ ಕುರಿತು ವಿವರಣೆ ಬರೆಯಿರಿ.

### ಪಟ್ಟಿ ಮಾಡುವ

- ಆರೋಗ್ಯ ಪಾಲನೆಯ ಸರಿಯಾದ ಕ್ರಮಗಳು ಯಾವುವು? ಪಟ್ಟಿಮಾಡಿ ಬರೆಯಿರಿ.

ಉದಾ : ಬೆಳಗ್ಗೆ ಎದ್ದೊಡನೆ ಹಲ್ಲು ಉಜ್ಜಬೇಕು.

..............................................

..............................................

### ಹುಡುಕಿ ಬರೆಯುವ

- ಕೆಳಗೆ ಕೊಡಲಾದ ಅರ್ಥವನ್ನು ನೀಡುವ ವಾಕ್ಯಗಳನ್ನು ಪಾಠಭಾಗದಿಂದ ಹುಡುಕಿ ಬರೆಯಿರಿ.

ಸೂರ್ಯನು ಪಡುಗಡಲಿನಲ್ಲಿ ಮುಳುಗಿದನು.

..............................................

ಸಹನೆ ಹೋಗಿ ತುಂಬ ಸಿಟ್ಟು ಬಂತು.

..............................................

ಒಳ್ಳೆಯ ಹವ್ಯಾಸಗಳನ್ನು ಬೆಳೆಸಿಕೊಳ್ಳಬೇಕು.

..............................................

ತಾಯಿಯ ಆಸಕ್ತಿ ತಿಳಿಯಿತು.

..............................................

### ದಿನಚರಿ ಬರೆಯುವ

- ಜಗದೀಶನ ದಿನಚರಿಯನ್ನು ಓದಿ ತಿಳಿದಿರಲ್ಲವೇ? ನೀವು ಜಗದೀಶನೆಂದೇ ಭಾವಿಸಿ ದಿನಚರಿ ಬರೆಯಿರಿ.

### ಅಭಿಪ್ರಾಯ ಹೇಳುವ

- 'ತಿಂಡಿ ಕೊಡುವುದಿಲ್ಲ. ಮೊದಲು ಕೈಕಾಲು ತೊಳೆದು ಬಾ' ಎಂದು ಹಸಿದು ಬಂದ ಜಗದೀಶನಿಗೆ ತಾಯಿ ಹೇಳಿದ್ದು ಸರಿಯೇ? ನಿಮ್ಮ ಅಭಿಪ್ರಾಯವೇನು?

### ವಿಸ್ತರಿಸಿ ಬರೆಯುವ

- 'ಕುಳಿತು ಉಣ್ಣುವವನಿಗೆ ಕುಡಿಕೆ ಹೊನ್ನು ಸಾಲದು' ಈ ಗಾದೆ ಮಾತನ್ನು ವಿಸ್ತರಿಸಿ ಬರೆಯಿರಿ.

## ಕಥೆ ಬರೆಯುವ

ಕೆಳಗೆ ಕೊಟ್ಟಿರುವ ಚಿತ್ರಗಳ ಸಹಾಯದಿಂದ ಕಥೆ ಬರೆಯಿರಿ.



# ಕ್ಷಮಾಪಣೆ

## ದೃಶ್ಯ-1

(ಮಾವಿನ ತೋಪಿನ ಬಳಿ ರವಿ ಮತ್ತು ಜಾನ್ ನಡೆದು ಬರುತ್ತಿದ್ದಾರೆ. ಸಾಯಂಕಾಲವಾಗಿದೆ)

ರವಿ : ಏ ಜಾನ್, ನೋಡಲ್ಲಿ ಹಾ! ಎಷ್ಟು ಮಾವಿನ ಹಣ್ಣು !

ಜಾನ್ : ಹೌದಲ್ಲ....!

ರವಿ : ನನಗೆ ಆಸೆಯಾಗುತ್ತಿದೆ....... ಬಾ.... ನಾಲ್ಕು ಹಣ್ಣುಗಳನ್ನು ಕೊಯ್ಯೋಣ.

ಜಾನ್ : ಬೇಡ.... ಏ... ನನಗೆ ಹೆದರಿಕೆಯಾಗುತ್ತದೆ ಕಣೋ..... ಸುಮ್ಮನೆ ಯಾಕೆ ತೊಂದರೆ? ಯಾರಾದರೂ ಕಂಡರೆ!

ರವಿ : ಲೇ.... ಪುಕ್ಕ... ಸುಮ್ಮನೆ ಬಾ, ನಿನಗೆ ಎರಡು, ನನಗೆ ನಾಲ್ಕು ಸಾಕು. ಈಗ ಇಲ್ಲಿ ಯಾರೂ ಇಲ್ಲ... ಬೇಗ ಬಾ.

ಜಾನ್ : ಅಲ್ಲ .... ಎಲ್ಲಿಯಾದರೂ ಯಾರಾದರೂ ಬಂದರೆ..... ಬೇಡಪ್ಪ ನಾನಿಲ್ಲ.



ರವಿ : (ಜಾನ್‌ನನ್ನು ಎಳೆಯುತ್ತಾ) ಯೋಚನೆ ಮತ್ತೆ, ನನ್ನ ಜತೆಗೆ ಬಾ; ನಿನಗೆ ಮಾವಿನ ಹಣ್ಣು ಬೇಡವಾದರೆ ಬೇಡ; ನನಗೆ ಬೇಕು. (ಇಬ್ಬರೂ ಮರದ ಬಳಿಗೆ ಹೋಗುವರು. ರವಿ ಮರವೇರಿ ನಾಲ್ಕೆಂಟು ಹಣ್ಣುಗಳನ್ನು ಉದುರಿಸುವನು.) ಬೇಗ... ಬೇಗ ಹೆಕ್ಕಿ ಚೀಲದಲ್ಲಿ ಹಾಕಿಕೊ.......

ಜಾನ್ : ರವಿ ಅದೋ ಅಲ್ಲಿ! ಯಾರೋ ಬರುತ್ತಿದ್ದಾರೆ ........ ಓಡು.

ರವಿ : (ಮರದಿಂದ ಹಾರಿ) ಓಡು ........... ಹಣ್ಣುಗಳನ್ನು ಹೆಕ್ಕಿಕೋ. ಬೇಗ ಬೇಗ .....

ಜಾನ್ : (ಸ್ವಲ್ಪ ದೂರ ಓಡಿ ಏದುಸಿರುಬಿಡುತ್ತಾ) ಏ ರವಿ ಇದೋ ನಿನ್ನ ಮಾವಿನಹಣ್ಣು.

ರವಿ : ಏನೋ? ನಿನಗೆ ಬೇಡವೇ?

ಜಾನ್ : ನನಗೆ ಹೆದರಿಕೆಯಾಗುತ್ತದೆ ರವಿ. ಮತ್ತೇನಾದರೂ ಆದರೆ! ಇಕೋ, ನೀನೇ ಎಲ್ಲವನ್ನೂ ತೆಗೆದುಕೋ, ನಾನು ಹೋಗುತ್ತೇನೆ. (ಹಣ್ಣುಗಳನ್ನು ಕೊಟ್ಟು ಓಡುತ್ತಾನೆ.)

ರವಿ : ಹಹ್ಹಾ! ಚೆನ್ನಾಗಿದೆ, ನಾನೇ ಕ್ಯೊದದ್ದು ಎಲ್ಲ ನನಗೇ ಸಿಕ್ಕಿತು. ಹೆದರುಪುಕ್ಕಲ.........ಅವನಿಗೆ ಬೇಡವಾದರೆ ನನಗೇನು? ನನ್ನ ಮನೆಗೆ ಒಯ್ಯುತ್ತೇನೆ.. ನಾಲ್ಕು ದಿನಕ್ಕೆ ಸಾಕು. ನಾನೊಬ್ಬನೇ ತಿನ್ನುತ್ತೇನೆ.. ಆಹಾ.. (ಒಂದು ಹಣ್ಣನ್ನು ತಿನ್ನುತ್ತಾ ಹೋಗುತ್ತಾನೆ)

## ದೃಶ್ಯ–2

(ರವಿಯ ಮನೆ. ಅಮ್ಮ ಅಂಗಳದಲ್ಲಿ ನಿಂತಿದ್ದಾರೆ. ರವಿ ಮಾವಿನ ಹಣ್ಣು ತಿನ್ನುತ್ತಾ ಬರುತ್ತಾನೆ)

ಅಮ್ಮ : ಏನೋ ರವಿ... ಯಾಕೆ ಇಷ್ಟು ತಡವಾಯಿತು? ಇಂದು ಶಾಲೆ ಬಿಡಲು ತಡವೇನೋ..?

ರವಿ : ಅಮ್ಮಾ... ಅದೂ... ಅದೂ.....

ಅಮ್ಮ : ಸತ್ಯ ಹೇಳು! ಯಾಕೆ ತಡ? ಈ ಮಾವಿನ ಹಣ್ಣು ಎಲ್ಲಿಂದ? ಯಾರು ಕೊಟ್ಟರು?



ರವಿ : (ಸಪ್ಪೆ ಮೋರೆ ಮಾಡಿ) ಅಮ್ಮಾ ಅದು .....ನಾನು ಮತ್ತು ಜಾನ್.....

ಅಮ್ಮ : ಯಾವ ಜಾನ್? ನಿನ್ನ ಗೆಳೆಯ ಆ ಮೂಲೆಮನೆ ಹುಡುಗ ಕೊಟ್ಟನೇ? ಅವನಿಗೆ ಎಲ್ಲಿಂದ? ನಿಜ ಹೇಳು..... (ಗದರಿಸುತ್ತಾಳೆ)

ರವಿ : ಅಮ್ಮಾ ....(ಹೆದರುತ್ತಾ) ಅದು..... ನಾನೂ ಜಾನ್‌ನೂ ದಾರಿಯಲ್ಲಿ ಬರುವಾಗ ಮಾವಿನ ತೋಪು ಇದೆಯಲ್ಲ. ಅಲ್ಲಿಂದ

ಕೊಯ್ದದ್ದು.

ಅಮ್ಮ : ಹೂಂ! ಹೇಳು. (ಸಿಟ್ಟಿನಿಂದ ದಿಟ್ಟಿಸಿ ನೋಡುವಳು)

ರವಿ : ಅದು....ಅಮ್ಮ....ಅಲ್ಲಿ ಯಾರೂ ಇರಲಿಲ್ಲ...ನನಗೆ ಆಸೆ ತಡೆಯಲಿಲ್ಲ..ನಾನು ಮತ್ತು ಜಾನ್ ಸೇರಿ ಎರಡೆರಡು ಹಣ್ಣು ಕೊಯ್ದೆವು. ಅಷ್ಟರಲ್ಲಿ ಯಾರೋ ಬರುವುದು ಕಾಣಿಸಿತು. ನಾವು ಹೆದರಿ ಓಡಿದೆವು. ನಾನು ಮಾವಿನ ಹಣ್ಣನ್ನು ತಿನ್ನುತ್ತಾ ಬಂದೆ.

ಅಮ್ಮ : ನೋಡು ಮಗೂ .....ನೀನು ಸತ್ಯ ಹೇಳಿದ್ದಿಯಲ್ಲ, ಅದು ಸಾಕು.. ಆದರೆ ಬೇರೆಯವರ ಮರದಿಂದ ಕೇಳದೆ ಕೊಯ್ಯುವುದು ಸರಿಯಲ್ಲ. ನಮ್ಮದಲ್ಲದ ವಸ್ತುವಿಗೆ ಆಸೆ ಪಡುವುದು ತಪ್ಪು. ನೀನೀಗ ಬೇರೆಯವರ ತೋಟದಿಂದ ಹಣ್ಣು ಕದ್ದು ತಂದಿರುವೆ. ಕಾವಲುಗಾರನೋ ಯಜಮಾನನೋ ಕಂಡಿದ್ದರೆ! ಏನಾಗುತ್ತಿತ್ತು? ಅವರು ನಿನ್ನನ್ನು ಹಿಡಿದು ಶಿಕ್ಷಿಸಬಹುದಿತ್ತು. ಅಥವಾ ನನ್ನನ್ನು ಕರೆದು ಬಯ್ಯಬಹುದಿತ್ತು. ಆಗ ನನಗೂ ನಿನಗೂ ಅಪಮಾನವಾಗುತ್ತಿತ್ತು. ನಿನ್ನ ಗೆಳೆಯರು ನಿನ್ನನ್ನು ಕಳ್ಳ ಕಳ್ಳ ಎಂದು ಅಪಹಾಸ್ಯ ಮಾಡುತ್ತಿದ್ದರು. ಛೇ, ಎಂಥ ನಾಚಿಕೆಗೇಡು ಕೆಲಸ ಮಾಡಿಬಿಟ್ಟೆ! ನಿನ್ನನ್ನು... (ಅಮ್ಮ ಅಳುವಳು)

ರವಿ : (ಅಳುತ್ತಾ) ಅಮ್ಮಾ ತಿಳಿಯಲಿಲ್ಲಮ್ಮಾ. ಇನ್ನು ಇಂಥ ಕೆಲಸ ಖಂಡಿತ ಮಾಡಲಾರೆ....

ಅಮ್ಮ : ಇಲ್ಲ..... ಇದು ಸರಿಯಲ್ಲ... ನೀನು ಮಾಡಿದ ತಪ್ಪಿಗೆ ಅವರಲ್ಲಿ ಕ್ಷಮೆ ಕೇಳಬೇಕು... ಎಲ್ಲಿದೆ ಉಳಿದ ಮಾವಿನ ಹಣ್ಣು? ತೆಗೆ. ಈಗಲೇ ನಡೆ.... ಆ ತೋಟದ ಯಜಮಾನನಲ್ಲಿಗೆ ಹೋಗಿ ಮಾಡಿದ ತಪ್ಪಿಗೆ ಕ್ಷಮೆ ಕೇಳು.... (ಅಮ್ಮ ಹೊರದೂಡುವಳು)



ರವಿ : ಅಮ್ಮಾ.... ಬೇಡಮ್ಮ ಈ ಸಲ ಬಿಡು... ಇನ್ನೆಂದಿಗೂ ಹಾಗೆ ಮಾಡಲಾರೆ..... ಈಗ ಕತ್ತಲೆಯಾಗುತ್ತಿದೆ.

ಅಮ್ಮ : (ಕೋಪದಿಂದ) ಕೂಡದು. ಬೇಗ ಹೋಗು... ಹಣ್ಣುಗಳನ್ನು

ಅವರಿಗೆ ಕೊಟ್ಟು ಕ್ಷಮೆ ಬೇಡಿ ಬಾ... ಅಲ್ಲದೆ ಮನೆಯೊಳಗೆ ಕಾಲಿಡಬೇಡ.... ನಡೆ... (ರವಿ ಆಳುತ್ತಾ ಹೋಗುವನು)

## ದೃಶ್ಯ-3

(ಮನೆ ಅಂಗಳದಲ್ಲಿ ಯಜಮಾನ ನಿಂತಿದ್ದಾನೆ. ರವಿ ಅಳುತ್ತಾ ಬರುತ್ತಾನೆ)

ಯಜಮಾನ: ಏನೋ... ರವಿ? ಏಕೆ ಅಳುತ್ತಿರುವೆ? ಏನಾಯಿತೋ? ಈ ಹೊತ್ತಿಗೆ ಯಾಕೆ ಬಂದೆ?

ರವಿ : (ಅಳುತ್ತಾ) ನಾನು.... ನಾನು... (ಬಿಕ್ಕುತ್ತಾ ಚೀಲದಿಂದ ಮಾವಿನ ಹಣ್ಣುಗಳನ್ನು ತೆಗೆದು ಕೊಡುತ್ತಾನೆ)

ಯಜಮಾನ : ಓ ಮಾವಿನ ಹಣ್ಣುಗಳೊ? ಎಲ್ಲಿಂದ ದೊರೆತವು? ಯಾಕೆ ತಂದೆ? ನೀನು ಅಳುವುದೇಕೆ? ಅಳಬೇಡ..... ಏನಾಯಿತೆಂದು ಹೇಳು. ಯಾರಾದರೂ ಹೊಡೆದರೇ?

ರವಿ : ಮಾಮ.... ಈ ಹಣ್ಣುಗಳನ್ನು ನಿಮ್ಮ ಮರದಿಂದ ಕೇಳದೇ ಕೊಯ್ದುಕೊಂಡು ಮನೆಗೆ ಹೋದೆ... ಅಮ್ಮ ನನ್ನನ್ನು ಬೈದು ಇಲ್ಲಿಗೆ ಕಳುಹಿಸಿದಳು. ಕೇಳದೆ ಕೊಯ್ದದ್ದು ತಪ್ಪಾಯಿತು. ಕ್ಷಮಿಸಬೇಕು. ಇನ್ನೆಂದೂ ಇಂಥ ಕೆಲಸ ಮಾಡುವುದಿಲ್ಲ.

ಯಜಮಾನ: ಓಹೋ... ಇದೊ ಸಂಗತಿ... ಕೇಳಿದ್ದರೆ ನಾನೇ ಕೊಡುತ್ತಿದ್ದೆನಲ್ಲ. ನೋಡು ಮಗೂ.... ನೀನು ಮಾಡಿದ ತಪ್ಪು ನಿನಗೆ ತಿಳಿದಿದೆ. ಇನ್ನು ಮುಂದೆ ಇಂಥ ತಪ್ಪನ್ನು ಮಾಡುವುದಿಲ್ಲ ಎಂದೆಯಲ್ಲ. ಸಂತೋಷ. ನಾನು ನಿನ್ನನ್ನು ಕ್ಷಮಿಸಿದ್ದೇನೆ. ಈ ಹಣ್ಣುಗಳನ್ನು ನಿನಗೆ ಬಹುಮಾನವಾಗಿ ಕೊಡುತ್ತೇನೆ. ತೆಗೆದುಕೋ... (ರವಿಯ ಮೈದಡವಿ) ಮಗೂ... ಕತ್ತಲಾಗುತ್ತಿದೆ. ಬೇಗ ಮನೆಗೆ ಹೋಗು. ಅಮ್ಮನಿಗೆ ಹೇಳು.... (ರವಿ ಮನೆಗೆ ಹೋಗುವನು)

## ದೃಶ್ಯ-4

(ಅಮ್ಮ ಅಂಗಳದಲ್ಲಿ ನಿಂತು ದಾರಿ ನೋಡುತ್ತಿದ್ದಾಳೆ)

ಅಮ್ಮ : ಛೇ...ನನ್ನ ಮಗ ಹೀಗೆ ಮಾಡಿಬಿಟ್ಟನಲ್ಲ.. ಸಣ್ಣವನೆಂದು ಬಿಟ್ಟರೆ ಮುಂದೆ ಇದೇ ಅಭ್ಯಾಸವಾಗುತ್ತದೆ. ಏನಾದರಾಗಲಿ... ನನ್ನ ಮಗ ಒಳ್ಳೆಯವನಾಗಬೇಕು... ಓ... ರವಿ... ಬಂದೇ ಬಿಟ್ಟ.... ಬಂದೆಯಾ ಮಗಾ... (ಓಡಿಹೋಗಿ ಕೈ ಹಿಡಿದು) ಮಾವಿನಹಣ್ಣನ್ನು ಕೊಟ್ಟೆ ತಾನೆ?

ರವಿ : ನೀನು ಹೇಳಿದಂತೆ ಮಾಡಿದೆ. ಅವರು ಮೆಚ್ಚಿ ನನಗೆ ಈ ಹಣ್ಣುಗಳನ್ನು ಬಹುಮಾನವಾಗಿ ಕೊಟ್ಟರು. ಅಮ್ಮ...ಇನ್ನೆಂದೂ ಇಂತಹ ಕೆಲಸ ಮಾಡುವುದಿಲ್ಲ. ಬೈಯಬೇಡಮ್ಮಾ.

ಅಮ್ಮ : ಮಗಾ... ನಿನ್ನ ತಾಯಿಯಾಗಿ ನಾನೇನು ಮಾಡಬೇಕೋ, ಅದನ್ನು ಮಾಡಿದ್ದೇನೆ. ದೇವರು

ನಿನ್ನನ್ನು ಕಾಪಾಡಲಿ... ನಿನಗೆ ಒಳ್ಳೆಯದಾಗಲಿ. (ಪ್ರೀತಿಯಿಂದ ತಬ್ಬಿಕೊಳ್ಳುವಳು)

## ಚಟುವಟಿಕೆಗಳು

### ಉತ್ತರ ಬರೆಯುವ

- ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.
  1. ಮಾವಿನ ಹಣ್ಣುಗಳನ್ನು ಕೊಯ್ದವರು ಯಾರು?
  2. ರವಿಯ ಕೈಯಲ್ಲಿ ಮಾವಿನಹಣ್ಣುಗಳನ್ನು ಕಂಡು ಅಮ್ಮ ಏನು ಹೇಳಿದರು?
  3. ಯಜಮಾನನು ರವಿಯನ್ನು ಹೇಗೆ ಸಂತೈಸಿದನು?
  4. ರವಿಯ ತೀರ್ಮಾನವೇನು?

### ಮೆಚ್ಚುಗೆಯಾದ ಕಥಾಪಾತ್ರ

- ಈ ನಾಟಕದಲ್ಲಿ ನಿಮಗೆ ಮೆಚ್ಚುಗೆಯಾದ ಕಥಾಪಾತ್ರ ಯಾವುದು? ಯಾಕೆ? ಬರೆಯಿರಿ.

### ಕಥೆ ಬರೆಯುವ

- ನಾಟಕದ ಕಥೆಯನ್ನು ಸಂಕ್ಷಿಪ್ತವಾಗಿ ಬರೆಯಿರಿ.

### ಪೂರ್ತಿಗೊಳಿಸುವ

- ಕೊಟ್ಟಿರುವ ಗದ್ಯಭಾಗದಲ್ಲಿ ಖಾಲಿಬಿಟ್ಟ ಸ್ಥಳವನ್ನು ಆವರಣದಲ್ಲಿ ಕೊಟ್ಟ ಪದದ ಸರಿಯಾದ ರೂಪದಿಂದ ಪೂರ್ತಿಗೊಳಿಸಿರಿ.

  ರವಿಯು ಮಾಡಿದ ತಪ್ಪನ್ನು ನೆನೆದು ತುಂಬಾ .......................... (ಬೇಸರಪಡು). ಮರುದಿನ ಶಾಲೆಯಲ್ಲಿ ಜಾನ್‌ನನ್ನು............................. (ಕಾಣು). ರವಿಯು ಜಾನ್‌ನಲ್ಲಿ ಹಿಂದಿನ ದಿನ ನಡೆದ ಘಟನೆಗಳನ್ನು ..................... (ವಿವರಿಸು). ಜಾನ್ ರವಿಯನ್ನು ..................................... (ಸಮಾಧಾನಪಡಿಸು) ರವಿಯು 'ಇನ್ನು ಮುಂದೆ ಯಾವುದೇ ತಪ್ಪನ್ನು ಮಾಡುವುದಿಲ್ಲ' ಎಂದು ........................ (ತೀರ್ಮಾನಿಸು)

### ಅಭಿನಯಿಸುವ

- ನಾಟಕವನ್ನು ಓದಿದಿರಲ್ಲವೇ? ಇದರಲ್ಲಿರುವ ಕಥಾಪಾತ್ರಗಳನ್ನು ಹಂಚಿಕೊಂಡು ತರಗತಿಯಲ್ಲಿ ಅಭಿನಯಿಸಿರಿ.

## ಅರ್ಥಕೋಶ

ಅಪರಾಧ – ತಪ್ಪು ಕೆಲಸ, ತಪ್ಪು

ಅಪಹಾಸ್ಯ – ತಿರಸ್ಕಾರದಿಂದ ಮಾಡುವ ಹಾಸ್ಯ, ನಗೆಪಾಟಲು

ಅನಿವಾರ್ಯ – ತಪ್ಪಿಸಲಾಗದ, ಬೇರೆದಾರಿಯಿಲ್ಲದೆ

ಅಂಗಾಲು – ಕಾಲಿನಡಿ, ಹೆಜ್ಜೆಯ ಕೆಳಭಾಗ

ಎಸಳು – ಹೂವಿನ ದಳ, ಪಕಳೆ

ಎಸೆಯು – ಬಿಸಾಡು, ಪ್ರಯೋಗಿಸು

ಒಡಹುಟ್ಟಿದವರು – ಸಹೋದರ ಅಥವಾ ಸಹೋದರಿ

ಕಸುಬು – ಕೆಲಸ

ಕಳಕಳಿ – ಆಸಕ್ತಿ, ಆಸ್ಥೆ

ಕಾರ್ಖಾನೆ – ಕೈಗಾರಿಕಾ ಸಂಸ್ಥೆ

ಕಾರ್ಮಿಕ – ಕೆಲಸಗಾರ

ಕುಡಿ – ತುದಿ, ಬಳ್ಳಿ, ವಂಶ

ಕುಡಿಹುಬ್ಬು – ಹುಬ್ಬಿನ ಕೊನೆ

ಕೂಲಿ – ಜೀತ, ದುಡಿತ, ಗಳಿಕೆ, ಸಂಪಾದನೆ

ಕೂಸು – ಮಗು, ಹಸುಳೆ, ಕನ್ಯೆ

ಕೈಯಲಗು – ಕೈಯ ಬಾಣ, ಖಡ್ಗ

ಕ್ಷಮೆ – ಅಪರಾಧವನ್ನು ಮನ್ನಿಸು, ತಪ್ಪನ್ನು ಕ್ಷಮಿಸು

ಗದರಿಸು – ಹೆದರಿಸು

ಚೂಡಾಮಣಿ – ತಲೆಯಲ್ಲಿ ಧರಿಸುವ ರತ್ನದ ಆಭರಣ

ಜಗ – ಪ್ರಪಂಚ

ತಬ್ಬಿಕೊಳ್ಳು – ಅಪ್ಪಿಕೊಳ್ಳು, ಆಲಿಂಗಿಸು

ತೀರ್ಮಾನಿಸು – ನಿರ್ಧರಿಸು

ತೊಡಕು – ಅಡ್ಡಿ, ಅಡಚಣೆ

ತೊಡಗು – ಪ್ರಾರಂಭಿಸು, ಹೊರಡು

ತೋಪು – ತೋಟ

ದಾರಿದ್ರ್ಯ – ಬಡತನ

ದಿಗಿಲಾಗು – ಹೆದರಿಕೊಳ್ಳು

ದುರಂತ – ದುಃಖಾಂತ, ದುಃಖಪೂರ್ಣ ಮುಕ್ತಾಯ

ನಾಚಿಕೆಗೇಡು – ನಾಚಿಕೆಯಿಲ್ಲದಿರುವುದು

ನಿರ್ಮೂಲನೆ – ಬೇರು ಸಹಿತ ಕಿತ್ತ

ನೇವರಿಸು – ಮೃದುವಾಗಿ ಸವರು

ಪರಂಪರೆ – ಸಂಪ್ರದಾಯ, ರೂಢಿ

ಪುಕ್ಕ – ಹೇಡಿ

ಪ್ರಗತಿ – ಏಳಿಗೆ, ಮುನ್ನಡೆ

ಪ್ರಭು – ರಾಜ

ಪ್ರಸನ್ನ – ಶಾಂತವಾದ, ನಿರ್ಮಲವಾದ

ಪ್ರಾಮಾಣಿಕ – ನಂಬಿಕೆಗೆ ಅರ್ಹ

ಬೀಸಣಿಗೆ – ಗಾಳಿ ಬೀಸಿಕೊಳ್ಳಲು ತಯಾರಿಸಿದ ಒಂದು ಸಾಧನ

ಬೇಸರ – ಬೇಜಾರು, ಕನಿಕರ

ಬೇಸಾಯ – ಕೃಷಿ, ವ್ಯವಸಾಯ

ಭವಿಷ್ಯ – ಮುಂದೆ ನಡೆಯಲಿರುವುದು

ಮಾಲಿಕ – ಯಜಮಾನ

ಯಶಸ್ಸು – ಕೀರ್ತಿ, ಪ್ರಸಿದ್ಧಿ

ರಕ್ಷಣೆ – ಕಾಪಾಡುವಿಕೆ, ಕಾವಲು

ವರ್ಗ – ವಿಭಾಗ, ಗುಂಪು

ವಲಸೆ – ಒಂದುಕಡೆಯಿಂದ ಇನ್ನೊಂದು ಕಡೆಗೆ ಒಕ್ಕಲು ಹೋಗುವುದು.

ವಂಚಿತ – ಮೋಸಕ್ಕೊಳಗಾದವನು

ವಿವೇಚನೆ – ಗುಣದೋಷ ವಿಚಾರ

ಶಿಕ್ಷಣ – ಜ್ಞಾನಾರ್ಜನೆ, ಕಲಿಯುವಿಕೆ

ಶಿಕ್ಷಿಸು – ಕಲಿಸು, ಬೋಧಿಸು, ಶಿಕ್ಷೆಕೊಡು, ದಂಡಿಸು

ಸಪ್ಪೆಮೋರೆ – ಗೆಲುವಿಲ್ಲದ ಮುಖ, ಪೆಚ್ಚುಮುಖ

ಸಹಪಾಠಿ – ಜತೆಯಲ್ಲಿ ಪಾಠ ಕಲಿಯುವವ

ಸೃಷ್ಟಿ – ಉತ್ಪತ್ತಿ, ಹುಟ್ಟು, ನಿರ್ಮಾಣ

ಹವಳ – ಕೆಂಪುಬಣ್ಣದ ಮಣಿ, ನವರತ್ನಗಳಲ್ಲಿ ಒಂದು

ಹೊನ್ನೆ – ಒಂದು ಬಗೆಯ ಮರ, ಪುನ್ನಾಗ

ಹೊಟ್ಟೆ ಹೊರೆಯು – ಹೊಟ್ಟೆ ತುಂಬಿಸು

## ಕಲಿಕಾ ಸಾಧನೆಗಳು

- ಹೊಸ ಪ್ರಯೋಗಗಳು, ಪದಗಳು, ಗಾದೆಗಳು, ನುಡಿಗಟ್ಟುಗಳು ಮೊದಲಾದುವುಗಳನ್ನು ಉಪಯೋಗಿಸಿಕೊಂಡು ಸಂದರ್ಭಾನುಸಾರ ಮಾತನಾಡುವುದು.
- ಘಟನೆಗಳು, ದೃಶ್ಯಗಳು ಮೊದಲಾದುವುಗಳನ್ನು ವಿಶ್ಲೇಷಿಸಿ ಸೂಕ್ತವಾದ ಭಾಷೆಯಲ್ಲಿ ವಿವರಿಸುವುದು ಮತ್ತು ಬರೆಯುವುದು.
- ಕಥೆ, ಕವಿತೆ, ವಿವರಣೆ, ವರ್ಣನೆ ಮೊದಲಾದುವುಗಳನ್ನು ಆಲಿಸಿ ಮತ್ತು ಓದಿ ತನ್ನದೇ ಆದ ರೀತಿಯಲ್ಲಿ ಹೇಳುವುದು ಮತ್ತು ಬರೆಯುವುದು.
- ಕವಿತೆಯನ್ನು ಅರ್ಥೈಸಿಕೊಂಡು ರಾಗ, ತಾಳ, ಭಾವಗಳನ್ನು ಪರಿಗಣಿಸಿ ಹಾಡುವುದು.
- ವಿಶೇಷಣಗಳು, ವಿಶೇಷ ಪ್ರಯೋಗಗಳು ಮೊದಲಾದುವುಗಳನ್ನು ಸೂಕ್ತವಾಗಿ ಸೇರಿಸಿ ವಾಕ್ಯಗಳನ್ನು ಬರೆಯುವುದು.
- ಪಾಠಭಾಗವನ್ನು ವ್ಯವಹಾರ ರೂಪಕ್ಕೆ ತಕ್ಕಂತೆ ನಿರರ್ಗಳವಾಗಿ ಸ್ವರಭಾರ ಮತ್ತು ಉಚ್ಚಾರಸ್ಪಷ್ಟತೆಯೊಂದಿಗೆ ಓದುವುದು.
- ಕಥೆ ಮತ್ತು ಕವಿತೆಗಳ ಸಾಲುಗಳ ಅರ್ಥವನ್ನು ತಿಳಿದುಕೊಂಡು ಪದಸೌಂದರ್ಯವನ್ನು ಆಸ್ವಾದಿಸಿ ಆಶಯವನ್ನು ಹೇಳುವುದು ಮತ್ತು ಬರೆಯುವುದು.
- ಓದಿ ಆಸ್ವಾದಿಸಿದ ಕಥೆ, ಕವಿತೆ ಮೊದಲಾದುವುಗಳನ್ನು ಪಾತ್ರಾಭಿನಯ, ಮೂಕಾಭಿನಯ, ಸಂಭಾಷಣೆಗಳ ಮೂಲಕ ಮಂಡಿಸುವುದು.
- ಪದಪ್ರಯೋಗ, ಭಾಷಾ ಪ್ರಯೋಗ, ಆಶಯ ಮೊದಲಾದವುಗಳನ್ನು ತನ್ನ ರಚನೆಯಲ್ಲಿ ಬಳಸಿಕೊಳ್ಳುವುದು.
- ತನ್ನ ಮತ್ತು ಇತರರ ರಚನೆಗಳ ಮೌಲ್ಯನಿರ್ಣಯ ಮಾಡುವ ಮಾನದಂಡಗಳನ್ನು ರೂಪಿಸುವುದು ಮತ್ತು ಅವುಗಳ ಸಹಾಯದಿಂದ ಮೌಲ್ಯನಿರ್ಣಯ ಮಾಡುವುದು.
- ಪಾಠಭಾಗದಲ್ಲಿ ಬಳಕೆಯಾದ ಪದಗಳನ್ನು ವಿಂಗಡಿಸಿ ಬರೆಯುವುದು ಮತ್ತು ಸೇರಿಸಿ ಬರೆಯುವುದು.
- ಸರ್ವನಾಮ ಹಾಗೂ ಉಪಸರ್ಗಗಳನ್ನು ಉಪಯೋಗಿಸಿ ವಾಕ್ಯಗಳನ್ನು ರಚಿಸುವುದು.
- ಓದುವ ಮಾಲೆ, ವಾಚನಾಲಯ ಮತ್ತು ಇತರೆಡೆಗಳಿಂದ ಲಭಿಸುವ ಓದುವ ಸಾಮಾಗ್ರಿಗಳನ್ನು ಓದಿ ದೊರೆತ ಅನುಭವಗಳನ್ನು ವಿಭಿನ್ನ ರೀತಿಯಲ್ಲಿ ಹಂಚಿಕೊಳ್ಳುವುದು.
- ಓದಿದ, ಆಲಿಸಿದ ವ್ಯವಹಾರ ರೂಪದ ಆಶಯವನ್ನು ತಿಳಿದುಕೊಂಡು ಇನ್ನೊಂದು ವ್ಯವಹಾರ ರೂಪವಾಗಿ ಬದಲಾಯಿಸುವುದು.
- ಮಾಹಿತಿ ತಂತ್ರಜ್ಞಾನವನ್ನು (ICT) ಉಪಯೋಗಿಸಿ, ಕೇಳಿಯೂ ನೋಡಿಯೂ ಆಶಯವನ್ನು ತಿಳಿದುಕೊಂಡು ಸ್ವಂತ ರಚನೆ ಮಾಡುವುದು ಮತ್ತು ಮಂಡಿಸುವುದು.
- ಉತ್ತಮ ದಿನಚರಿಗಳನ್ನು ಓದುವುದು ಮತ್ತು ಸ್ವ–ಅನುಭವಗಳನ್ನು ಒಳಗೊಳಿಸಿ ದಿನಚರಿ ಬರೆಯುವುದು.

# 4. ಸತ್ಯವೇ ನಿತ್ಯ

ಆದರ್ಶವು ಸುಂದರ ಬದುಕಿಗೆ ಆಧಾರವಾಗಿದೆ. ಬಾಳಿಗೊಂದು ನಂಬಿಕೆ ಅನುಸರಿಸಲೊಂದು ಆದರ್ಶ ಇದ್ದಾಗ ಮುನ್ನಡೆಯುವುದು ಸುಲಭ ಮತ್ತು ಪ್ರಯೋಜನಕಾರಿ. ಮಹಾನ್ ವ್ಯಕ್ತಿಗಳ ಆದರ್ಶ ನಮ್ಮದಾಗಲಿ.



# ಕಸ ಗುಡಿಸಿದ ಗಾಂಧೀಜಿ

ರವೀಂದ್ರನಾಥ ಠಾಗೋರರ ಶಾಂತಿನಿಕೇತನ. ಒಮ್ಮೆ ಈ ವಿಶ್ವವಿದ್ಯಾನಿಲಯಕ್ಕೆ ಮಹಾತ್ಮಾಗಾಂಧೀಜಿಯವರನ್ನು ಠಾಗೋರರು ಆಹ್ವಾನಿಸಿದರು. ಅಂದು ಗಾಂಧೀಜಿಯವರ ವಿಶೇಷ ಭಾಷಣ. ಸತತ ಐದಾರು ಗಂಟೆಗಳ ಕಾಲ ಮಕ್ಕಳೊಂದಿಗೆ ಗಾಂಧೀಜಿ ಮಾತನಾಡಿದರು. ಮುಂದೆ ರವೀಂದ್ರರ ವಿಶ್ರಾಂತಿ ಕೊಠಡಿಯಲ್ಲಿ ಕುಳಿತು ತಡರಾತ್ರಿಯವರೆಗೂ ದೇಶದ ರಾಜಕೀಯ, ಧರ್ಮ, ಸಂಸ್ಕೃತಿ, ಶಿಕ್ಷಣ, ಸರ್ಕಾರ ಇತ್ಯಾದಿಗಳ ಬಗ್ಗೆ ಚರ್ಚಿಸಿದರು. ಮಧ್ಯರಾತ್ರಿಯ ಹೊತ್ತಿಗೆ ಠಾಗೋರರು ಗಾಂಧೀಜಿಯವರನ್ನು ಒಂದು ವಿಶ್ರಾಂತಿ ಕೊಠಡಿಗೆ ಕರೆದೊಯ್ದರು. "ನೀವು ಮಲಗಿ ವಿಶ್ರಮಿಸಿ, ನಾನು ನಾಳೆ ಮುಂಜಾನೆ ಮತ್ತೆ ಭೇಟಿಯಾಗುವೆ" ಎಂದು ಹೇಳಿದರು.

ಚುಮುಚುಮು ಚಳಿಯ ಮುಂಜಾನೆ. ಇನ್ನೂ ಬೆಳಕು ಹರಿದಿಲ್ಲ. ಮರಗಳೆಲ್ಲ ಮಂಜು ಉದುರಿಸುವ ಹೊತ್ತು. ರವೀಂದ್ರರು ಎದ್ದು ಕೈಕಾಲು ಮುಖ ತೊಳೆದು ಬಾಗಿಲುಗಳನ್ನು ತೆರೆದರು. ಯಾವುದೋ ಪುಸ್ತಕವನ್ನು ಕೈಗೆತ್ತಿ ಓದಬೇಕೆನ್ನುವಾಗ, ಶಾಂತಿನಿಕೇತನದ ಅಂಗಳದಲ್ಲಿ 'ಸರಪರ ಸರಪರ' ಕಸಗುಡಿಸುವ ಸದ್ದು ಕೇಳಿಸಿತು. 'ಯಾವಾಗಲೂ ಬೆಳಕು ಮೂಡಿದ ಮೇಲೆ ಗುಡಿಸಲು ಬರುವ ಜಾಡಮಾಲಿ ಇಂದೇನು



ಬೇಗ?' ಎಂದು ವಿಶ್ವಕವಿ ಅಂಗಳಕ್ಕೆ ಇಳಿದರು. "ಏನಪ್ಪಾ ಯಾಕೆ ಬೇಗ ಬಂದೆ?" ಎಂದು ಹೇಳುತ್ತಾ ಹತ್ತಿರಕ್ಕೆ ಹೋದರು. ಆ ವ್ಯಕ್ತಿ ಆಗಲೂ 'ಸರಪರ ಸರಪರ' ಕಸಗುಡಿಸುತ್ತಲೇ ಇದ್ದ. ರವೀಂದ್ರರು ಆತನ ತಲೆಯ ಮೇಲಿನ ಮಫ್ಲರ್‌ಗೆ ಕೈ ಹಾಕಿ ಎಳೆದರು. ಆ ವ್ಯಕ್ತಿಯನ್ನು ಕಂಡು ಬೆಚ್ಚಿಬಿದ್ದರು. ಕಸಗುಡಿಸುತ್ತಿದ್ದ ವ್ಯಕ್ತಿ ಬೇರೆ ಯಾರೂ ಅಲ್ಲ, ಮೋಹನದಾಸ ಕರಮಚಂದ ಗಾಂಧಿ.

"ಅಯ್ಯೋ ಏನಿದು! ನಮ್ಮ ವಿಶ್ವವಿದ್ಯಾನಿಲಯಕ್ಕೆ ವಿಶೇಷ ಅತಿಥಿಗಳಾಗಿ ಬಂದ ನೀವು ಶಾಂತಿನಿಕೇತನದ ಅಂಗಳ ಗುಡಿಸುವುದೇ? ಛೆ... ಛೆ..." ಎಂದ ಠಾಗೋರರ ಮಾತಿಗೆ ಗಾಂಧೀಜಿ ಹೀಗೆಂದರು.

"ಇದು ನನ್ನಿಂದ ಸೃಷ್ಟಿಯಾದ ಕಸ. ನಾನು ಈ ಸಂಸ್ಥೆಗೆ ಬರುತ್ತೇನೆ ಎಂದು ನಿಮ್ಮ ಮಕ್ಕಳು ತೋರಣ ಕಟ್ಟಿದ್ದಾರೆ, ರಂಗೋಲಿ ಇಟ್ಟಿದ್ದಾರೆ, ನನ್ನ ದೆಸೆಯಿಂದ ಸೃಷ್ಟಿಯಾದ ಈ ಕಸವನ್ನು ಇನ್ಯಾರು ಗುಡಿಸಬೇಕು?"

ಅಂದು ಸಂಜೆ ಶಾಂತಿನಿಕೇತನವನ್ನು ಬಿಟ್ಟು ಹೋಗುವ ಮಕ್ಕಳನ್ನು ಉದ್ದೇಶಿಸಿ ರವೀಂದ್ರನಾಥ ಠಾಗೋರರು ಮಾತನಾಡಿದರು. ಅದು ಆ ಮಕ್ಕಳ ಪಾಲಿಗೆ ವಿಶೇಷ ಭಾಷಣವಾಗಿತ್ತು. "ನೋಡಿ, ನಮ್ಮ ವಿಶ್ವವಿದ್ಯಾನಿಲಯದಲ್ಲಿ ಸಾವಿರಾರು ಪ್ರಾಚೀನ ಗ್ರಂಥಗಳಿವೆ. ಈ ಆವರಣಕ್ಕೆ ಈ ವರೆಗೆ ನೂರಾರು ಜನ ಸಂಪನ್ಮೂಲ ವ್ಯಕ್ತಿಗಳಾಗಿ ಬಂದಿದ್ದಾರೆ. ಅಂದರೆ ಈ ಪುಸ್ತಕಗಳಿಂದ, ಆ ಸಂಪನ್ಮೂಲ ವ್ಯಕ್ತಿಗಳಿಂದ ಕಲಿಯದ ಜೀವನಪಾಠವೊಂದನ್ನು ನಾನು ಇಂದು ಕಲಿತಿದ್ದೇನೆ. ಗಾಂಧೀಜಿ ನನ್ನೊಳಗೆ ಬಿತ್ತಿದ ಈ ಮೌಲ್ಯ ಅದ್ಭುತವಾದುದು. ನಮಗೆ ದೊರೆತ ಈ ಪಾಠ ನಮ್ಮ ಕೊನೆಯವರೆಗೂ ಉಳಿಯಲಿ" ಎಂದ ಅವರು, ಗಾಂಧೀಜಿ ಮುಂಜಾನೆ ಕಸ ಗುಡಿಸಿದ ಕಥೆಯನ್ನು ಮಕ್ಕಳಿಗೆ ವಿವರಿಸಿದರು.

## ಚಟುವಟಿಕೆಗಳು

### ಉತ್ತರ ಬರೆಯುವ

- ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.
  1. ಠಾಗೋರರ ವಿಶ್ವವಿದ್ಯಾನಿಲಯದ ಹೆಸರೇನು?
  2. ಮುಂಜಾನೆಯಲ್ಲಿ ಶಾಂತಿನಿಕೇತನದ ಅಂಗಳವನ್ನು ಗುಡಿಸಿದವರು ಯಾರು?
  3. "ಇದು ನನ್ನ ದೆಸೆಯಿಂದ ಸೃಷ್ಟಿಯಾದ ಕಸ" ಎಂದು ಗಾಂಧೀಜಿ ಹೇಳಲು ಕಾರಣವೇನು?
  4. ರವೀಂದ್ರರು ಬೆಚ್ಚಿಬೀಳಲು ಕಾರಣವೇನು?
  5. 'ಕಸ ಗುಡಿಸಿದವರು ಗಾಂಧೀಜಿ' ಎಂದು ತಿಳಿದ ರವೀಂದ್ರರು ಅವರಲ್ಲಿ ಏನೆಂದು ಹೇಳಿದರು?

### ಪದ ರಚಿಸುವ

- ಕೊಟ್ಟಿರುವ ಪದಗಳನ್ನು ಮಾದರಿಯಂತೆ ಬದಲಾಯಿಸಿ ಬರೆಯಿರಿ. ಈ ಪದಗಳ ಅರ್ಥವನ್ನೂ ಬರೆಯಿರಿ.

| | | | | | |
|---|---|---|---|---|---|
| ಮಾದರಿ: | ದಿನ | – | ನದಿ | ವನ | – |
| | ರಸ | – | | ................ | |
| | ಜಗ | – | | ................ | |
| | ಕುಸುಮ | – | | ................ | |
| | ಜನುಮ | – | | ................ | |

### ಕ್ರಮೀಕರಿಸಿ ಬರೆಯುವ

- ಪದಗಳನ್ನು ಕ್ರಮೀಕರಿಸಿ ಅರ್ಥಪೂರ್ಣ ವಾಕ್ಯಗಳನ್ನು ಬರೆಯಿರಿ.
  - ತೊಳೆದರು / ರವೀಂದ್ರರು / ಕೈಕಾಲು ಮುಖ / ಎದ್ದು
  - ಕಟ್ಟಿದ್ದಾರೆ / ನಿಮ್ಮ / ನನಗಾಗಿ / ತೋರಣ / ಮಕ್ಕಳು
  - ಸಾವಿರಾರು / ವಿಶ್ವವಿದ್ಯಾನಿಲಯದಲ್ಲಿ / ಗ್ರಂಥಗಳಿವೆ / ಪ್ರಾಚೀನ
  - ನನ್ನೊಳಗೆ / ಈ ಮೌಲ್ಯ / ಬಿತ್ತಿದ / ಅದ್ಭುತವಾದುದು / ಗಾಂಧೀಜಿ
  - ವಿಶೇಷ / ಅಂದು / ಭಾಷಣ / ಗಾಂಧೀಜಿಯವರ

### ಚರ್ಚಿಸುವ; ಬರೆಯುವ


- ನಮ್ಮ ಶಾಲೆ, ಮನೆ ಹಾಗೂ ಸುತ್ತುಮುತ್ತಲ ಪರಿಸರ ಶುಚಿಯಾಗಿರಬೇಕಾದರೆ ನಾವೇನು ಮಾಡಬೇಕು? ಚರ್ಚಿಸಿ ನಿಮ್ಮ ಅಭಿಪ್ರಾಯಗಳನ್ನು ಬರೆಯಿರಿ.

### ಭಾಷಣ ತಯಾರಿಸುವ

- ಗಾಂಧೀಜಿಯವರ ಕುರಿತು ಓದುವ ಮೂಲೆ ಅಥವಾ ಗ್ರಂಥಾಲಯದಿಂದ ಮಾಹಿತಿಗಳನ್ನು ಸಂಗ್ರಹಿಸಿ ಭಾಷಣವನ್ನು ತಯಾರಿಸಿರಿ. ಅದನ್ನು ಬಾಲಸಭೆಯಲ್ಲಿ ಮಂಡಿಸಿರಿ.

## ಘೋಷಣವಾಕ್ಯ ತಯಾರಿಸುವ

- ಶುಚಿತ್ವಕ್ಕೆ ಸಂಬಂಧಿಸಿದ ಘೋಷಣವಾಕ್ಯಗಳನ್ನು ಬರೆದು ಪ್ರದರ್ಶಿಸಿರಿ.




## ಓದುವ

ರವೀಂದ್ರನಾಥ ಠಾಗೋರರು 1861 ಮೇ 7ರಂದು ಕೋಲ್ಕತ್ತದಲ್ಲಿ ಜನಿಸಿದರು. ಇವರ ತಂದೆ ದೇವೇಂದ್ರನಾಥ, ತಾಯಿ ಶಾರದಾದೇವಿ. ರವೀಂದ್ರರು ತಮ್ಮ 8ನೇ ವಯಸ್ಸಿನಲ್ಲಿ ಪದ್ಯ ರಚನೆ ಆರಂಭಿಸಿದರು. ಕವಿಗಳಾಗಿ, ಕಾದಂಬರಿಕಾರರಾಗಿ, ಸಂಗೀತಗಾರರಾಗಿ ಮತ್ತು ನಾಟಕ ರಚಿಸುವ ಮೂಲಕ ಅವರು ಬಂಗಾಳಿ ಸಾಹಿತ್ಯ ಮತ್ತು ಸಂಗೀತಕ್ಕೆ ಹೊಸ ರೂಪ ಕೊಟ್ಟರು. ಅವರು ರಚಿಸಿದ 'ಗೀತಾಂಜಲಿ' ಕಾವ್ಯಕ್ಕೆ 1913ರಲ್ಲಿ ನೋಬೆಲ್ ಪ್ರಶಸ್ತಿ ಲಭಿಸಿತು. ಠಾಗೋರರು ಭಾರತೀಯ ಸ್ವಾತಂತ್ರ್ಯ ಚಳವಳಿಯನ್ನು ಬೆಂಬಲಿಸಿದರು. 'ವಿಶ್ವ ಭಾರತಿ ವಿಶ್ವವಿದ್ಯಾನಿಲಯ'ವು ಇವರು ಜಗತ್ತಿಗೆ ನೀಡಿದ ಪ್ರಮುಖ ಕೊಡುಗೆಯಾಗಿದೆ. ಗೀತಾಂಜಲಿ, ಗೋರ ಮತ್ತು ಘರೇಬೈರೆ ಇವರ ಹೆಸರಾಂತ ಕೃತಿಗಳು. ಠಾಗೋರ್ ರಚಿಸಿದ 'ಜನಗಣಮನ'ವನ್ನು ಭಾರತದ ರಾಷ್ಟ್ರಗೀತೆಯಾಗಿ ಅಂಗೀಕರಿಸಲಾಗಿದೆ. ಠಾಗೋರರು 1941 ಆಗೋಸ್ತು 7ರಂದು ಕೊನೆಯುಸಿರೆಳೆದರು.

## ಸಂಗ್ರಹಿಸಿ ಬರೆಯುವ

- ಮಹಾನ್ ವ್ಯಕ್ತಿಗಳ ಕುರಿತಾದ ಪುಸ್ತಕಗಳನ್ನು ಓದಿ ಅವರ ವ್ಯಕ್ತಿಪರಿಚಯವನ್ನು ಚುಟುಕಾಗಿ ಬರೆದು ತರಗತಿಯಲ್ಲಿ ಮಂಡಿಸಿರಿ.

## ದಿನಚರಿ ಬರೆಯುವ

- ನೀವು ಪ್ರತಿದಿನ ಹಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತೀರಲ್ಲವೆ? ಅದರ ಅನುಭವವನ್ನು ಸೇರಿಸಿಕೊಂಡು ದಿನಚರಿಯಾಗಿ ಬರೆಯಿರಿ.

# ಸತ್ಯನಿಷ್ಠ ಬಾಲಕ



ಆ ಬಾಲಕ ತುಂಬ ಜಾಣನಾಗಿದ್ದ. ಹಾಗಾಗಿ ಅವನು ಎಲ್ಲಾ ಉಪಾಧ್ಯಾಯರಿಗೂ ಅಚ್ಚುಮೆಚ್ಚಿನವನಾಗಿದ್ದ. ಒಂದು ದಿನ ಗಣಿತದ ಉಪಾಧ್ಯಾಯರು ತರಗತಿಯಲ್ಲಿ ಪಾಠ ಮುಗಿಸಿ ಮನೆಯಲ್ಲಿ ಮಾಡಿಕೊಂಡು ಬರಲು ಕೆಲವು ಲೆಕ್ಕಗಳನ್ನು ಕೊಟ್ಟರು. ಆ ಬಾಲಕ ಎಲ್ಲ ಲೆಕ್ಕಗಳನ್ನು ಸರಿಯಾಗಿ ಮಾಡಿದ. ಆದರೆ ಒಂದು ಲೆಕ್ಕದ ಉತ್ತರ ಅವನಿಗೆ ಸರಿ ಬರದ ಕಾರಣ ಅವನು ತನ್ನೊಬ್ಬ ಮಿತ್ರನಲ್ಲಿ ಕೇಳಿ ಅದಕ್ಕೆ ಸರಿಯಾದ ಉತ್ತರ ಬರೆದ.

ಮರುದಿನ ಎಂದಿನಂತೆ ಉಪಾಧ್ಯಾಯರು ಎಲ್ಲ ವಿದ್ಯಾರ್ಥಿಗಳಲ್ಲೂ ಉತ್ತರವನ್ನು ಕೇಳಿದರು. ಒಬ್ಬನದು ಒಂದು ಲೆಕ್ಕ ತಪ್ಪಾಗಿತ್ತು. ಇನ್ನೊಬ್ಬನದು ಇನ್ನೊಂದು. ಇಡೀ ತರಗತಿಯಲ್ಲಿ ಆ ಒಬ್ಬ ಬಾಲಕನನ್ನು ಬಿಟ್ಟರೆ ಇನ್ಯಾರೂ ಎಲ್ಲ ಲೆಕ್ಕಗಳನ್ನೂ ಸರಿಯಾಗಿ ಮಾಡಿರಲಿಲ್ಲ. ಬಾಲಕನ ಉತ್ತರಗಳನ್ನು ನೋಡಿ ಉಪಾಧ್ಯಾಯರಿಗೆ ತುಂಬಾ ಸಂತೋಷ ವಾಯಿತು. ಅವರು ಅವನನ್ನು ಬಾಯಿತುಂಬಾ ಹೊಗಳಿದರು ಮತ್ತು ತಮ್ಮ ಲೇಖನಿಯನ್ನು ಅವನಿಗೆ ಬಹುಮಾನವಾಗಿ ಕೊಡಹೋದರು.



ಆಗ ಆ ಬಾಲಕ ಮಾತ್ರ ಬಿಕ್ಕಿಬಿಕ್ಕಿ ಅಳತೊಡಗಿದ. ಉಪಾಧ್ಯಾಯರಿಗೂ ವಿದ್ಯಾರ್ಥಿಗಳಿಗೂ ಇದು ವಿಚಿತ್ರವಾಗಿ ತೋರಿತು. "ನೀನು ಎಲ್ಲ ಲೆಕ್ಕಗಳನ್ನೂ ಸರಿಯಾಗಿ ಮಾಡಿದ್ದಿಯಲ್ಲ? ಮತ್ತೇಕೆ ಅಳುತ್ತಿರುವೆ?" ಎಂದು ಉಪಾಧ್ಯಾಯರು ಕೇಳಿದರು. ಆಗ ಬಾಲಕ ಅಳುತ್ತಾ ಉತ್ತರವಿತ್ತ "ಸರ್, ಎಲ್ಲಾ ಲೆಕ್ಕಗಳನ್ನು ನಾನೇ ಮಾಡಿಲ್ಲ. ಒಂದರ ಉತ್ತರ

ಸರಿಬರುತ್ತಿರಲಿಲ್ಲ. ಹಾಗಾಗಿ ನಾನು ಸ್ನೇಹಿತನನ್ನು ಕೇಳಿ ಮಾಡಿದೆ. ನನಗೆ ಬಹುಮಾನ ಅಲ್ಲ, ದಂಡ ಸಿಗಬೇಕು!"

ಬಾಲಕನ ಸತ್ಯ ಕಥನದಿಂದ ಉಪಾಧ್ಯಾಯರು ತುಂಬಾ ಪ್ರಭಾವಿತರಾದರು. ಅವರು ತಮ್ಮ ಸಂತೋಷವನ್ನು ವ್ಯಕ್ತಪಡಿಸುತ್ತಾ ಹೇಳಿದರು. "ನೀನು ಎಲ್ಲಾ ಲೆಕ್ಕಗಳನ್ನೂ ಸರಿಯಾಗಿ ಮಾಡಿದ್ದಕ್ಕಿಂತ ಹೆಚ್ಚು ಸಂತೋಷ ನೀನು ಸತ್ಯ ಹೇಳಿದ್ದರಿಂದ ಆಗಿದೆ. ಈಗ ನಿನ್ನ ಸತ್ಯಸಂಧತೆಗಾಗಿ ನಿನಗೆ ಬಹುಮಾನ ಕೊಡುತ್ತೇನೆ" ಎನ್ನುತ್ತ ಆ ಬಾಲಕನಿಗೆ ತಮ್ಮ ಲೇಖನಿಯನ್ನು ಬಹುಮಾನವಾಗಿ ಕೊಟ್ಟರು.

ಈ ಬಾಲಕನೇ ಮುಂದೆ ಗಾಂಧೀಜಿಯವರ ರಾಜಕೀಯ ಗುರುವಾಗಿ ಗೋಪಾಲಕೃಷ್ಣ ಗೋಖಲೆ ಎಂಬ ಹೆಸರಿನಿಂದ ಪ್ರಸಿದ್ಧನಾದ.

## ಚಟುವಟಿಕೆಗಳು

### ಉತ್ತರ ಬರೆಯುವ

- ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.
  1) ಬಾಲಕನು ಬಿಕ್ಕಿಬಿಕ್ಕಿ ಅಳಲು ಕಾರಣವೇನು?
  2) ಅಧ್ಯಾಪಕರು ಬಾಲಕನಿಂದ ಪ್ರಭಾವಿತರಾಗಲು ಕಾರಣವೇನು?
  3) ಸತ್ಯವನ್ನು ನುಡಿದ ಬಾಲಕನು ಯಾರು?

### ಪದಕೋಶ ತಯಾರಿಸುವ

- ಪಾಠದಲ್ಲಿ ಬಂದಿರುವ ನವೀನ ಪದಗಳ ಅರ್ಥಗಳನ್ನು ಅರ್ಥಕೋಶದ ಸಹಾಯದಿಂದ ಕಂಡುಹಿಡಿದು ಬರೆಯಿರಿ. ಅವುಗಳನ್ನು ಅಕಾರಾದಿಯಾಗಿ ಬರೆಯಿರಿ.

### ಸಂಗ್ರಹಿಸಿ ಬರೆಯುವ

- ಪಾಠದಲ್ಲಿ 'ಬಿಕ್ಕಿಬಿಕ್ಕಿ' ಎನ್ನುವ ಪದವನ್ನು ಬಳಸಲಾಗಿದೆ. ಇಂತಹ ಪದಗಳನ್ನು ಸಂಗ್ರಹಿಸಿ ಬರೆಯಿರಿ.

  ಉದಾ: ಮೆಲ್ಲಮೆಲ್ಲನೆ

### ವಾಕ್ಯ ರಚಿಸುವ

- ಅಡಿಗೆರೆ ಎಳೆದ ಪದಗಳನ್ನು ಉಪಯೋಗಿಸಿ ಹೊಸ ವಾಕ್ಯಗಳನ್ನು ರಚಿಸಿರಿ.

ಕಿಶೋರನು ಜಾಣ ಹುಡುಗನಾಗಿದ್ದನು. ಅವನ ತಂದೆ ತಾಯಿಯ ಪ್ರಭಾವ ಅವನ ಮೇಲಿತ್ತು. ಅವನು ಅವರಂತೆಯೇ ಸರಳ ಹಾಗೂ ಶಾಂತ ಸ್ವಭಾವದವನಾಗಿದ್ದನು. ಎಲ್ಲರಿಗೂ ತನ್ನ ಕೈಲಾದ ಸಹಾಯವನ್ನು ಮಾಡುತ್ತಿದ್ದನು. ಅಧ್ಯಾಪಕರಿಂದ ಹಿಡಿದು ಶಾಲೆಯ ಎಲ್ಲಾ ಮಕ್ಕಳಿಗೂ ಅವನು ಅಚ್ಚುಮೆಚ್ಚಿನವನಾಗಿದ್ದನು. ಅವನು ಕಲೋತ್ಸವದಲ್ಲಿ ಭಾಗವಹಿಸಿ ಹಲವಾರು ಬಹುಮಾನಗಳನ್ನು ಪಡೆದಿದ್ದನು. ಅಧ್ಯಾಪಕರು ಅವನನ್ನು ಬಾಯಿತುಂಬಾ ಹೊಗಳಿದರು.

### ಅನುಭವ ಬರೆಯುವ

- ಗೋಖಲೆಯವರ ಜೀವನದಲ್ಲಿ ನಡೆದ ಒಂದು ಘಟನೆಯನ್ನು ಓದಿದಿರಲ್ಲವೇ? ತರಗತಿಯಲ್ಲಿ ನಿಮಗಾದ ಒಂದು ಅನುಭವ ಬರೆದು ಮಂಡಿಸಿರಿ.

### ಸಂಭಾಷಣೆ ಬರೆಯುವ

- 'ಸತ್ಯನಿಷ್ಠ ಬಾಲಕ' ಪಾಠವನ್ನು ಓದಿದಿರಲ್ಲವೇ? ಈ ಪಾಠವನ್ನು ಸಂಭಾಷಣೆಯ ರೂಪದಲ್ಲಿ ಬರೆದು ಮಂಡಿಸಿರಿ.

### ಶೀರ್ಷಿಕೆ ಬರೆಯುವ

- 'ಸತ್ಯನಿಷ್ಠ ಬಾಲಕ' ಪಾಠಕ್ಕೆ ಸೂಕ್ತವಾದ ಬೇರೊಂದು ಶೀರ್ಷಿಕೆ ನೀಡಿರಿ.

### ಆಲ್ಬಂ ತಯಾರಿಸುವ

- ಪ್ರಸಿದ್ಧ ವ್ಯಕ್ತಿಗಳ ಬಾಲ್ಯದಲ್ಲಿ ನಡೆದ ಘಟನೆಗಳಿಗೆ ಸಂಬಂಧಿಸಿದ ಪತ್ರಿಕಾ ವರದಿ ಮತ್ತು ಚಿತ್ರಗಳನ್ನು ಸಂಗ್ರಹಿಸಿ ಆಲ್ಬಂ ತಯಾರಿಸಿರಿ.

# ಪುಣ್ಯಕೋಟಿ

ಧರಣಿ ಮಂಡಲ ಮಧ್ಯದೊಳಗೆ
ಮೆರೆಯುತಿಹ ಕರ್ಣಾಟದೇಶದೊ
ಳಿರುವ ಕಾಳಿಂಗನೆಂಬ ಗೊಲ್ಲನ
ಪರಿಯ ನಾನೆಂತು ಪೇಳ್ವೆನು ॥೧॥


ಎಳೆಯ ಮಾವಿನ ಮರದ ಕೆಳಗೆ
ಕೊಳಲನೂದುತ ಗೊಲ್ಲ ಗೌಡನು
ಬಳಸಿ ಬರುವ ತುರುಗಳನ್ನು
ಬಳಿಗೆ ಕರೆದನು ಹರುಷದಿ ॥೨॥

ಗಂಗೆ ಬಾರೆ ಗೌರಿ ಬಾರೆ
ತುಂಗಭದ್ರೆ ತಾಯಿಬಾರೆ
ಪುಣ್ಯಕೋಟಿ ನೀನು ಬಾರೆ
ಎಂದು ಗೊಲ್ಲನು ಕರೆದನು ॥೩॥

ಗೊಲ್ಲ ಕರೆದಾ ದನಿಯ ಕೇಳಿ
ಎಲ್ಲ ಹಸುಗಳು ಬಂದು ನಿಂತು
ಚೆಲ್ಲಿ ಸೂಸಿ ಹಾಲ ಕರೆಯಲು
ಅಲ್ಲಿ ತುಂಬಿತು ಬಿಂದಿಗೆ ॥೪॥

ಹಬ್ಬಿದಾ ಮಲೆ ಮಧ್ಯದೊಳಗೆ
ಅರ್ಬುದಾನೆಂದೆಂಬ ವ್ಯಾಘ್ರನು
ಅಬ್ಬರಿಸಿ ಹಸಿ ಹಸಿದು ಬೆಟ್ಟದ
ಕಿಬ್ಬಿಯೊಳು ತಾನಿದ್ದನು ॥೫॥

ಪುಣ್ಯಕೋಟಿ ಎಂಬ ಹಸುವು
ತನ್ನ ಕಂದನ ನೆನೆದುಕೊಂಡು
ಮುನ್ನ ಹಾಲನು ಕೊಡುವೆನೆನ್ನುತ
ಚೆನ್ನಾಗಿ ತಾ ಬರುತಿರೆ ॥೬॥



ಇಂದೆನಗೆ ಆಹಾರ ಸಿಕ್ಕಿತು
ಎಂದು ಬೇಗನೆ ದುಷ್ಟವ್ಯಾಘ್ರನು
ಬಂದು ಬಳಸಿ ಅಡ್ಡಗಟ್ಟಿ
ನಿಂದನಾ ಹುಲಿರಾಯನು ॥೭॥

ಒಂದು ಬಿನ್ನಹ ಹುಲಿಯೆ ಕೇಳು
ಕಂದನಿರುವನು ದೊಡ್ಡಿಯೊಳಗೆ
ಒಂದು ನಿಮಿಷದಿ ಮೊಲೆಯ ಕೊಟ್ಟು
ಬಂದು ಸೇರುವೆನಿಲ್ಲಿಗೆ ॥೮॥

ಕೊಂದು ತಿನ್ನುವೆನೆಂಬ ಹುಲಿಗೆ
ಚೆಂದದಿಂದಲಿ ಭಾಷೆಯಿತ್ತು
ಕಂದ ನಿನ್ನನು ನೋಡಿ ಪೋಗುವೆ
ನೆಂದು ಬಂದೆನು ದೊಡ್ಡಿಗೆ ॥೯॥

ಅಮ್ಮ ನೀನು ಸಾಯಲೇಕೆ
ನನ್ನ ತಬ್ಬಲಿ ಮಾಡಲೇಕೆ
ಸುಮ್ಮನಿಲ್ಲಿಯೆ ನಿಲ್ಲು ಎಂದು
ಅಮ್ಮನಿಗೆ ಕರು ಹೇಳಿತು ॥೧೦॥

ಸತ್ಯವೇ ನಮ್ಮ ತಾಯಿ ತಂದೆ
ಸತ್ಯವೇ ನಮ್ಮ ಬಂಧು ಬಳಗವು
ಸತ್ಯ ವಾಕ್ಯಕೆ ತಪ್ಪಿ ನಡೆದರೆ
ಮೆಚ್ಚನಾ ಪರಮಾತ್ಮನು ॥೧೧॥


ಕೊಟ್ಟ ಭಾಷೆಗೆ ತಪ್ಪಲಾರೆನು
ಕೆಟ್ಟ ಯೋಚನೆ ಮಾಡಲಾರೆನು
ನಿಷ್ಠೆಯಿಂದಲಿ ಪೋಪೆನಲ್ಲಿಗೆ
ಕಟ್ಟ ಕಡೆಗಿದು ಖಂಡಿತ ॥೧೨॥



ಆರ ಮೊಲೆಯನು ಕುಡಿಯಲಮ್ಮ
ಆರ ಸೇರಿ ಬದುಕಲಮ್ಮ
ಆರ ಬಳಿಯಲಿ ಮಲಗಲಮ್ಮ
ಆರು ಎನಗೆ ಹಿತವರು॥೧೩॥

ತಬ್ಬಲಿಯು ನೀನಾದೆ ಮಗನೆ
ಹೆಬ್ಬುಲಿಯ ಬಾಯನ್ನು ಹೊಗುವೆನು
ಇಬ್ಬರಾ ಋಣ ತೀರಿತೆಂದು
ತಬ್ಬಿಕೊಂಡಿತು ಕಂದನ ॥೧೪॥

ಗೋವು ಕರುವನು ಬಿಟ್ಟು ಬಂದು
ಸಾವಕಾಶವ ಮಾಡದಂತೆ
ಗವಿಯ ಬಾಗಿಲ ಸೇರಿ ನಿಂತು
ತವಕದಲಿ ಹುಲಿಗೆಂದಿತು ॥೧೫॥



ಖಂಡವಿದೆಕೋ ಮಾಂಸವಿದೆಕೋ
ಗುಂಡಿಗೆಯ ಬಿಸಿ ರಕ್ತವಿದೆಕೋ
ಚಂಡವ್ಯಾಘ್ರನೆ ನೀನಿದೆಲ್ಲವ
ಉಂಡು ಸಂತಸದಿಂದಿರು ॥೧೬॥

ಪುಣ್ಯಕೋಟಿಯ ಮಾತ ಕೇಳಿ
ಕಣ್ಣನೀರನು ಸುರಿಸಿ ನೊಂದು
ಕನ್ನೆ ಇವಳನು ಕೊಂದು ತಿಂದರೆ
ಮೆಚ್ಚನಾ ಪರಮಾತ್ಮನು ॥೧೭॥

ಎನ್ನ ಒಡಹುಟ್ಟಕ್ಕ ನೀನು
ನಿನ್ನ ಕೊಂದು ನಾನೇನ ಪಡೆಯಲಿ?
ಎನ್ನುತಾ ಹುಲಿ ಹಾರಿ ನೆಗೆದು
ತನ್ನ ಪ್ರಾಣವ ಬಿಟ್ಟಿತು ॥೧೮॥



## ಚಟುವಟಿಕೆಗಳು

### ಉತ್ತರ ಬರೆಯುವ

- ಕೆಳಗೆ ನೀಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.
  1. ಗೊಲ್ಲನು ಯಾರನ್ನು ಬಳಿಗೆ ಕರೆದನು?
  2. ಬೆಟ್ಟದಲ್ಲಿದ್ದ ಹುಲಿರಾಯನ ಹೆಸರೇನು?
  3. ಕೊಟ್ಟ ಭಾಷೆಗೆ ತಪ್ಪುವುದಿಲ್ಲ ಎಂದು ಪುಣ್ಯಕೋಟಿ ಹೇಳಲು ಕಾರಣವೇನು?
  4. ಗೋವು ಕರುವನ್ನು ಬಿಟ್ಟು ಬಂದು ಹುಲಿಯಲ್ಲಿ ಏನೆಂದು ಹೇಳಿತು?

### ಬಿಂಗಡಿಸಿ ಬರೆಯುವ

- ಮಾದರಿಯಂತೆ ಪದಗಳನ್ನು ಬಿಂಗಡಿಸಿ ಬರೆಯಿರಿ.

| | | | | | |
|---|---|---|---|---|---|
| ಮಾದರಿ : | ಸೇರುವೆನಿಲ್ಲಿಗೆ | – | ಸೇರುವೆನು | + | ಇಲ್ಲಿಗೆ |
| | ತಿನ್ನುವೆನೆಂಬ | – | | | |
| | ಕಂದನಿರುವನು | – | | | |
| | ಕೊಳಲನೂದುತ | – | | | |
| | ಕೊಡುವೆನೆನುತ | – | | | |
| | ದೊಡ್ಡಿಯೊಳಗೆ | – | | | |

### ಇಷ್ಟವಾದ ಪಾತ್ರ

- 'ಪುಣ್ಯಕೋಟಿ' ಎಂಬ ಪದ್ಯದಲ್ಲಿ ನಿಮಗೆ ಇಷ್ಟವಾದ ಪಾತ್ರ ಯಾವುದು? ಯಾಕೆ? ಬರೆಯಿರಿ.

### ಊಹಿಸಿ ಹೇಳುವ

- ಪುಣ್ಯಕೋಟಿ ತಾನು ಕೊಟ್ಟ ಭಾಷೆಗೆ ತಪ್ಪಿ ಹುಲಿಯ ಬಳಿಗೆ ಹೋಗದೇ ಇರುತ್ತಿದ್ದರೆ ಏನಾಗುತ್ತಿತ್ತು? ಊಹಿಸಿ ತರಗತಿಯಲ್ಲಿ ಹೇಳಿರಿ.

### ಕ್ರಮೀಕರಿಸಿ ಬರೆಯುವ

- ಕೆಳಗೆ ನೀಡಲಾದ ವಾಕ್ಯಗಳನ್ನು ಓದಿ ಆಶಯಕ್ಕನುಸರಿಸಿ ಕ್ರಮೀಕರಿಸಿ ಬರೆಯಿರಿ.
  - ಗೊಲ್ಲನ ಧ್ವನಿಯನ್ನು ಕೇಳಿ ಎಲ್ಲ ದನಗಳೂ ಬಂದು ನಿಂತವು.
  - ಹುಲಿಯು ಹಾರಿ ನೆಗೆದು ತನ್ನ ಪ್ರಾಣವನ್ನು ಬಿಟ್ಟಿತು.

- ಹಟ್ಟಿಯಲ್ಲಿರುವ ಕಂದನಿಗೆ ಒಂದು ನಿಮಿಷದಲ್ಲಿ ಹಾಲನ್ನು ಕೊಟ್ಟು ಬರುತ್ತೇನೆ.
- ನನ್ನ ದೇಹದಲ್ಲಿರುವ ಮಾಂಸವನ್ನು ತಿಂದು, ರಕ್ತವನ್ನು ಕುಡಿದು ನೀನು ಸಂತೋಷದಿಂದಿರು.
- ಗೊಲ್ಲನು ಮಾವಿನ ಮರದ ಕೆಳಗೆ ಕೊಳಲನ್ನೂದುತ್ತಾ ಹಸುಗಳನ್ನು ಬಳಿಗೆ ಕರೆದನು.
- ಪುಣ್ಯಕೋಟಿಯು ತನ್ನ ಕಂದನ ಬಗ್ಗೆ ಯೋಚಿಸುತ್ತಾ ಕಾಡಿನ ದಾರಿಯಲ್ಲಿ ಬರುತ್ತಿತ್ತು.
- ಅಮ್ಮ ನೀನು ಸಾಯಬೇಡ, ನನ್ನನ್ನು ತಬ್ಬಲಿಯನ್ನಾಗಿ ಮಾಡಬೇಡ.

## ಆರಿಸಿ ಬರೆಯುವ

- ಸಮಾನ ಅರ್ಥ ಕೊಡುವ ಪದಗಳನ್ನು ಆರಿಸಿ ಮಾದರಿಯಂತೆ ಬರೆಯಿರಿ.

ಜನನಿ ಪುತ್ರ ಗೋವು ಕಾಡು ದನ
ಕಾನನ ಅಮ್ಮ ನೇತ್ರ ಮಗ ಕಣ್ಣು ಗುಹೆ
ಹಸು ಗವಿ ನಯನ ಅರಣ್ಯ ತಾಯಿ ತನಯ

ಮಾದರಿ : ಕಾಡು, ಕಾನನ, ಅರಣ್ಯ

## ಬರೆಯುವ

- ಕೆಳಗೆ ಕೊಡಲಾದ ಮಾತುಗಳನ್ನು ಯಾರು ಯಾರಿಗೆ ಹೇಳಿದರು ಎಂದು ಬರೆಯಿರಿ.
  - ಒಂದು ಬಿನ್ನಹ ಹುಲಿಯೆ ಕೇಳು ಕಂದನಿರುವನು ದೊಡ್ಡಿಯೊಳಗೆ
  - ಅಮ್ಮ ನೀನು ಸಾಯಲೇಕೆ ನನ್ನ ತಬ್ಬಲಿ ಮಾಡಲೇಕೆ
  - ಕೊಟ್ಟ ಭಾಷೆಗೆ ತಪ್ಪಲಾರೆನು ಕೆಟ್ಟ ಯೋಚನೆ ಮಾಡಲಾರೆನು.
  - ಎನ್ನ ಒಡಹುಟ್ಟಕ್ಕ ನೀನು ನಿನ್ನ ತಿಂದು ನಾನೇನ ಪಡೆಯಲಿ

## ಮುಖವಾಡ ತಯಾರಿಸಿ ಅಭಿನಯಿಸುವ

- ಈ ಕವಿತೆಯಲ್ಲಿ ಬರುವ ಪಾತ್ರಗಳಿಗೆ ಬೇಕಾದ ಮುಖವಾಡಗಳನ್ನು ತಯಾರಿಸಿರಿ. ಪಾತ್ರಗಳನ್ನು ಹಂಚಿಕೊಂಡು ಅಭಿನಯಿಸಿರಿ.

## ಗದ್ಯವಾಗಿ ಬರೆಯುವ

- ಪುಣ್ಯಕೋಟಿ ಪದ್ಯದಲ್ಲಿ ನಿಮಗೆ ಇಷ್ಟವಿರುವ ಭಾಗವನ್ನು ಗದ್ಯರೂಪದಲ್ಲಿ ಬರೆದು ಮಂಡಿಸಿರಿ.

## ಅರ್ಥಕೋಶ

| | | |
|---|---|---|
| ಅಬ್ಬರಿಸು | – | ಅರ್ಭಟಿಸು |
| ಆಹ್ವಾನಿಸು | – | ಕರೆ, ಆಮಂತ್ರಿಸು, |
| ಋಣ | – | ಸಾಲ |
| ಒಡಹುಟ್ಟು | – | ಸೋದರತನ |
| ಕನ್ನೆ | – | ಕನ್ಯೆ |
| ಕಿಬ್ಬಿ | – | ಬೆಟ್ಟದ ಇಳಿಜಾರು |
| ಕೊಠಡಿ | – | ಕೋಣೆ |
| ಖಂಡ | – | ತುಂಡು, ಮೂಳೆಯಿಲ್ಲದ ಮಾಂಸ |
| ಗವಿ | – | ಗುಹೆ |
| ಗೊಲ್ಲ | – | ದನಕಾಯುವವ |
| ಗೋವು | – | ದನ |
| ಗುಂಡಿಗೆ | – | ಎದೆ |
| ಗ್ರಂಥ | – | ಪುಸ್ತಕ |
| ಜಾಡಮಾಲಿ | – | ಕಸಗುಡಿಸುವವನು |
| ತಬ್ಬಲಿ | – | ಅನಾಥ |
| ತಬ್ಬು | – | ಅಪ್ಪಿಕೊಳ್ಳು |
| ತವಕ | – | ಆತುರ |
| ತುರು | – | ಹಸು |
| ದೊಡ್ಡಿ | – | ಹಟ್ಟಿ |
| ಧರಣಿ | – | ಭೂಮಿ |

| | | |
|---|---|---|
| ಧರಣಿ ಮಂಡಲ | – | ಭೂಮಂಡಲ |
| ನೊಂದು | – | ಬೇಸರಗೊಂಡು |
| ನಿಷ್ಠೆ | – | ಭಕ್ತಿ, ಶ್ರದ್ಧೆ |
| ಪೋಪೆ | – | ಹೋಗುವೆ |
| ಪ್ರಾಚೀನ | – | ಪೂರ್ವಕಾಲದ |
| ಪ್ರಾಣ | – | ಜೀವ |
| ಬಿನ್ನಹ | – | ವಿನಂತಿ, ಮನವಿ |
| ಬಿಂದಿಗೆ | – | ಸಣ್ಣ ಜಲಪಾತ್ರೆ |
| ಬೆಚ್ಚಿಬೀಳು | – | ತಬ್ಬಿಬ್ಬಾಗು, ಆಶ್ಚರ್ಯಗೊಳ್ಳು |
| ಮಫ್ಲರ್ | – | ಕಂಠವಸ್ತ್ರ, ಕುತ್ತಿಗೆ ಮುಸುಕು |
| ಮೆರೆ | – | ಪ್ರಕಾಶಿಸು, ಶೋಭಿಸು |
| ಮೌಲ್ಯ | – | ಬೆಲೆ |
| ಮಂಡಲ | – | ದೇಶದ ಒಂದು ಭಾಗ |
| ಮುಂಜಾನೆ | – | ಬೆಳಗ್ಗೆ |
| ಲೇಖನಿ | – | ಪೆನ್ನು |
| ವಿಶ್ರಾಂತಿ | – | ವಿರಾಮ |
| ವ್ಯಾಘ್ರ | – | ಹುಲಿ |
| ಸಂಪನ್ಮೂಲ ವ್ಯಕ್ತಿ | – | ತಜ್ಞ, ಪರಿಣತ |
| ಸತತ | – | ಯಾವಾಗಲೂ |
| ಹಬ್ಬು | – | ಹರಡು |
| ಹೆಬ್ಬುಲಿ | – | ದೊಡ್ಡಹುಲಿ |

## ಕಲಿಕಾ ಸಾಧನೆಗಳು

- ಘಟನೆಗಳು, ದೃಶ್ಯಗಳು ಮೊದಲಾದುವುಗಳನ್ನು ವಿಶ್ಲೇಷಿಸಿ ಸೂಕ್ತವಾದ ಭಾಷೆಯಲ್ಲಿ ವಿವರಿಸುವುದು ಮತ್ತು ಬರೆಯುವುದು.
- ಕಥೆ, ಕವಿತೆ, ವಿವರಣೆ, ವರ್ಣನೆ, ಮೊದಲಾದವುಗಳನ್ನು ಆಲಿಸಿ ಮತ್ತು ಓದಿ ತನ್ನದೇ ಆದ ರೀತಿಯಲ್ಲಿ ಹೇಳುವುದು ಮತ್ತು ಬರೆಯುವುದು.
- ಕವಿತೆಯನ್ನು ಅರ್ಥೈಸಿಕೊಂಡು ರಾಗ, ತಾಳ, ಭಾವಗಳನ್ನು ಪರಿಗಣಿಸಿ ಹಾಡುವುದು.
- ಪಾಠಭಾಗವನ್ನು ವ್ಯವಹಾರ ರೂಪಕ್ಕೆ ತಕ್ಕಂತೆ ನಿರರ್ಗಳವಾಗಿ ಸ್ವರಭಾರ ಮತ್ತು ಉಚ್ಚಾರಸ್ಪಷ್ಟತೆಯೊಂದಿಗೆ ಓದುವುದು.
- ಕಥೆ ಮತ್ತು ಕವಿತೆಗಳ ಸಾಲುಗಳ ಅರ್ಥವನ್ನು ತಿಳಿದುಕೊಂಡು ಪದಸೌಂದರ್ಯವನ್ನು ಆಸ್ವಾದಿಸಿ ಆಶಯವನ್ನು ಹೇಳುವುದು ಮತ್ತು ಬರೆಯುವುದು.
- ಓದಿ ಆಸ್ವಾದಿಸಿದ ಕಥೆ, ಕವಿತೆ ಮೊದಲಾದುವುಗಳನ್ನು ಪಾತ್ರಾಭಿನಯ, ಮೂಕಾಭಿನಯ ಸಂಭಾಷಣೆಗಳ ಮೂಲಕ ಮಂಡಿಸುವುದು.
- ತನ್ನ ಮತ್ತು ಇತರರ ರಚನೆಗಳ ಮೌಲ್ಯನಿರ್ಣಯ ಮಾಡುವ ಮಾನದಂಡಗಳನ್ನು ರೂಪಿಸುವುದು ಮತ್ತು ಅವುಗಳ ಸಹಾಯದಿಂದ ಮೌಲ್ಯ ನಿರ್ಣಯ ಮಾಡುವುದು.
- ಪಾಠಭಾಗದಲ್ಲಿ ಬಳಕೆಯಾದ ಪದಗಳನ್ನು ವಿಂಗಡಿಸಿ ಬರೆಯುವುದು ಮತ್ತು ಸೇರಿಸಿ ಬರೆಯುವುದು.
- ಓದುವ ಮೂಲೆ, ವಾಚನಾಲಯ ಮತ್ತು ಇತರೆಡೆಗಳಿಂದ ಲಭಿಸುವ ಓದುವ ಸಾಮಾಗ್ರಿಗಳನ್ನು ಓದಿ ದೊರೆತ ಅನುಭವಗಳನ್ನು ವಿಭಿನ್ನ ರೀತಿಯಲ್ಲಿ ಹಂಚಿಕೊಳ್ಳುವುದು.
- ಓದಿದ, ಆಲಿಸಿದ ವ್ಯವಹಾರದ ರೂಪದ ಆಶಯವನ್ನು ತಿಳಿದುಕೊಂಡು ಇನ್ನೊಂದು ವ್ಯವಹಾರ ರೂಪವಾಗಿ ಬದಲಾಯಿಸುವುದು.
- ಮಾಹಿತಿ ತಂತ್ರಜ್ಞಾನವನ್ನು (ICT) ಉಪಯೋಗಿಸಿ, ಕೇಳಿಯೂ ನೋಡಿಯೂ ಆಶಯವನ್ನು ತಿಳಿದುಕೊಂಡು ಸ್ವಂತ ರಚನೆ ಮಾಡುವುದು ಮತ್ತು ಮಂಡಿಸುವುದು.
- ಪದಪ್ರಯೋಗ, ಭಾಷಾ ಪ್ರಯೋಗ, ಆಶಯ ಮೊದಲಾದವುಗಳನ್ನು ತನ್ನ ರಚನೆಯಲ್ಲಿ ಬಳಸಿಕೊಳ್ಳುವುದು.
- ಪತ್ರಿಕಾವಾರ್ತೆಗಳನ್ನು ಓದಿ ಮತ್ತು ಭಾಷಣಗಳನ್ನು ಆಲಿಸಿ ವಿಶ್ಲೇಷಿಸಿ ಅಭಿಪ್ರಾಯಗಳನ್ನು ಹೇಳುವುದು ಮತ್ತು ಬರೆಯುವುದು.